ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 17 ಶುಕ್ರವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 31 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





3ನೇ ವರ್ಷದ ಸವಿನೆನಪು



ಶ್ರೀ ಕೆ.ಸಿ. ಸತೀಶ್

ಲೇಟ್. ಶ್ರೀಮತಿ ಲಲಿತಾ ಮತ್ತು ಶ್ರೀ ಕೆ.ಆರ್.ಚಿಕ್ಕಣ್ಣ (ವಿಕ್ರಾಂತ್) ನವರ ಮಗ
ಕೆ.ಜಿ.ಕೊಪ್ಪಲು, ಮೈಸೂರು

ಪ್ರೀತಿಯ ಸ್ನೇಹಿತ ನಿನ್ನನ್ನು ಕಳೆದುಕೊಂಡು ಇಂದಿಗೆ 3 ವರ್ಷವಾದರೂ ಸಹ ನೀನು ನಮಗೆ ಕೊಟ್ಟಂತಹ ಪ್ರೀತಿ, ವಿಶ್ವಾಸ, ಕಾಳಜಿ, ನಂಬಿಕೆ, ಧೈರ್ಯ, ಆತ್ಮವಿಶ್ವಾಸ ಮತ್ತು ಸಲಹೆ ಎಲ್ಲವೂ ಇಂದಿಗೂ ಸಹ, ನಮ್ಮ ಮನಸ್ಸಿನಲ್ಲೇ ಹಚ್ಚ ಹಸಿರಾಗಿ ಉಳಿದಿದೆ ಇಂದಿಗೂ ನಿನ್ನ ನೆನಪಿನಲ್ಲೇ ಇರುವ ನಿನ್ನ ಕುಟುಂಬದವರು ಹಾಗೂ ನಿನ್ನ ಸ್ನೇಹಿತರು.

ದೇವರು ನಿನ್ನ ಆತ್ಮಕ್ಕೆ ಶಾಂತಿ ಕೊಡಲಿ ಎಂದು ಪ್ರಾರ್ಥಿಸುತ್ತೇವೆ.

ತಂದೆ: ಶ್ರೀ ಕೆ.ಆರ್.ಚಿಕ್ಕಣ್ಣ, ಪತ್ನಿ: ಶ್ರೀಮತಿ ಜಯಲಕ್ಷ್ಮಿ, ಮಾವ : ಶ್ರೀ ನಂಜುಂಡಸ್ವಾಮಿ (ಕೋಳಿ ಸೋಮಣ್ಣ) ತಂಗಿ : ಶ್ರೀಮತಿ ರೂಪ, ಭಾವ : ಶ್ರೀ ಸತೀಶ್ ಕುಮಾರ್ ಹಾಗೂ ಮಕ್ಕಳು, ಕುಟುಂಬವರ್ಗದವರು ಹಾಗೂ ಸ್ನೇಹಿತರು, ಕೆ.ಜಿ.ಕೊಪ್ಪಲು, ಮೈಸೂರು

3ನೇ ವರ್ಷದ ಸವಿನೆನಪು



ಶ್ರೀಮತಿ ಬಸಮ್ಮ

ಲೇಟ್ ಶ್ರೀ ಎಂ.ಸೋಣಿ ಕರೀಗೌಡರ ಧರ್ಮಪತ್ನಿ
ಕೆ.ಜಿ.ಕೊಪ್ಪಲು, ಮೈಸೂರು

ನೀವು ನಮ್ಮನ್ನ ಅಗಲಿ ಇಂದಿಗೆ 3 ವರ್ಷ ಕಳೆದರೂ ಸಹ
ನಿಮ್ಮ ನೆನಪು ನಮ್ಮ ಮನಸ್ಸಿನಲ್ಲಿ ಇಂದಿಗೂ ಸಹ ಹಚ್ಚ ಹಸಿರಾಗಿ ಉಳಿದಿದೆ

ಇಂದಿಗೂ ಸಹ ತಾಳ್ಮೆ, ಸಹನೆ, ಗೌರವ, ಪ್ರೀತಿಯಿಂದಲೇ ನೀವು
ತೋರಿಸಿಕೊಟ್ಟ ಧರ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ ನಿಮ್ಮ ಕುಟುಂಬವರ್ಗ

ಲೇಟ್. ಶ್ರೀಮತಿ ಬಸಮ್ಮ ಮತ್ತು ಲೇಟ್. ಶ್ರೀ ಎಂ.ಸೋಣಿ ಕರೀಗೌಡರ ಮಕ್ಕಳು
ಶ್ರೀ ಕೆ.ಶ್ರೀನಿವಾಸ ಮತ್ತು ಶ್ರೀ ಚಿಕ್ಕರಂಗಯ್ಯ ಹಾಗೂ ಕುಟುಂಬ ವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

ಚಾಮುಂಡಿ ದರ್ಶನ ಪಡೆದ ರಾಘವೇಂದ್ರ



ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಗುರುವಾರ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿ ದರ್ಶನ ಪಡೆದರು. ಈ ವೇಳೆ ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಎಸ್.ಸಿ.ಅಶೋಕ್, ಅರವಿಂದ್, ಗಿರೀಶ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಎತ್ತರದ ಕಟ್ಟಡಗಳು–ಅವಲೋಕನ ಕುರಿತು ಡಿ.ವಿ.ನರಸಿಂಹರಾವ್ ಸ್ಮಾರಕ ಉಪನ್ಯಾಸ

ಮೈಸೂರು, ಮೇ 16–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮತ್ತು ದೇಸಿರಾಜು ಫ್ಯಾಮಿಲಿ ಸಂಯುಕ್ತಾಶ್ರಯದಲ್ಲಿ ಎಸ್.ಪಿ. ಭಟ್ ಸಭಾಂಗಣದಲ್ಲಿ ಮೇ 18ರಂದು ಸಂಜೆ 6 ಗಂಟೆಗೆ 'ಎತ್ತರದ ಕಟ್ಟಡಗಳು– ಅವಲೋಕನ' ಮೇಲೆ ಡಿ.ವಿ.ನರಸಿಂಹರಾವ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮುಖ್ಯ ಭಾಷಣಕಾರರಾಗಿ ಭಾಮೀಸ್ ಗ್ರೂಪ್ ಆಫ್ ಕಂಪನೀಸ್ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಡಾ. ರಾಘವೇಂದ್ರ ಪ್ರಸಾದ್ ಆಗಮಿಸುವರು. ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು ಅಧ್ಯಕ್ಷತೆ ವಹಿಸಲಿದ್ದು, ಡಿವಿಎನ್ ಮೆಮೋರಿಯಲ್ ಟ್ರಸ್ಟಿ ಪ್ರೊ.ಡಿ.ಎಸ್.ರಾಮಕೃಷ್ಣರಾವ್ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಛಾಯಾಗ್ರಹಣ, ಕಿರು ವಿಡಿಯೋ ಸ್ಪರ್ಧೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 16– ಪ್ರವಾಸೋದ್ಯಮ ಇಲಾಖೆ ವತಿಯಿಂದ 'ಮೈಸೂರಿನ ಅನ್ವೇಷಿಸದ ಪ್ರವಾಸಿ ತಾಣಗಳು' ಎಂಬ ಶೀರ್ಷಿಕೆಯಡಿಯಲ್ಲಿ ರಾಜ್ಯ ಮಟ್ಟದ ಛಾಯಾಚಿತ್ರ ಮತ್ತು ಕಿರು ವಿಡಿಯೋ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನದಿಗಳು, ಪ್ರಕೃತಿ ಮತ್ತು ರಮಣೀಯ ಸೌಂದರ್ಯ ತಾಣಗಳು, ಜಲಪಾತಗಳು, ವಸ್ತು ಸಂಗ್ರಹಾಲಯಗಳು, ಜಾನಪದ ಕಲೆಗಳು, ಸಾಂಪ್ರದಾಯಿಕ ಸ್ಥಳೀಯ ಹಬ್ಬಗಳು ಮತ್ತು ಕಲೆಗಳು, ಪಾರಂಪರಿಕ ಕಟ್ಟಡಗಳು, ಸ್ಮಾರಕಗಳು, ಧಾರ್ಮಿಕ, ಸಾಹಸ, ಪ್ರವಾಸೋದ್ಯಮ ಹಾಗೂ ಇತರೆ ತಾಣಗಳ ರಾಜ್ಯಮಟ್ಟದ ಛಾಯಾಗ್ರಹಣ ಮತ್ತು ಕಿರು ವೀಡಿಯೋ ಸ್ಪರ್ಧೆಯಾಗಿದೆ. ಆಯ್ಕೆಯಾದ ಅತ್ಯುತ್ತಮ ಸಲ್ಲಿಕೆಗಳಿಗೆ ಪ್ರಥಮ ಬಹುಮಾನವಾಗಿ ರೂ.25,000 ದ್ವಿತೀಯ ಬಹುಮಾನ ರೂ.15,000 ಹಾಗೂ ತೃತೀಯ ಬಹುಮಾನವಾಗಿ ರೂ.10,000ಗಳನ್ನು ನೀಡಲಾಗುವುದು. ಮಾಹಿತಿಗಾಗಿ visit mysurutourism@gmail.com ಹಾಗೂ 7411564510, 9008693409 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ವಿಭಾಗದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು https://Mysore.nic.inen/competitions/ ಮೂಲಕ ಅರ್ಜಿ ಸಲ್ಲಿಸಬಹುದು. ಜೂ.20 ಅಂತಿಮ ದಿನವಾಗಿದೆ.

ಬಸವಣ್ಣನ ತತ್ವ, ಆದರ್ಶದ ಬಗ್ಗೆ ಜನರಲ್ಲಿ ನಿರಾಸಕ್ತಿ

ಬಸವ ಜಯಂತಿ–ಗುರುವಂದನಾ ಕಾರ್ಯಕ್ರಮದಲ್ಲಿ ಸಾಹಿತಿ ಬನ್ನೂರು ಕೆ.ರಾಜು ವಿಷಾದ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಬಸವ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮೇ 16(ಜಿಎ)–ಬಸವಣ್ಣನವರನ್ನು ಎಲ್ಲರೂ ಸ್ಮರಿಸುತ್ತಾರೆ. ಆದರೆ ಅವರ ತತ್ವ, ಆದರ್ಶವನ್ನು ಪಾಲಿಸಲು ಯಾರೂ ಮನಸ್ಸು ಮಾಡುವುದಿಲ್ಲ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ವಿಷಾದ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬಸವಣ್ಣ ಇಡೀ ಮಾನವ ಕುಲದ ಉದ್ಧಾರಕರಾಗಿದ್ದು, ಅವರು ಈ ನಾಡಿನಲ್ಲಿ ಜನಿಸದೇ ಹೋಗಿದ್ದಲ್ಲಿ ಎಲ್ಲರೂ ತಾರತಮ್ಯದ ಕೂಪದಲ್ಲಿ, ಅನಿಷ್ಟ ಪದ್ಧತಿಗಳ ನಡುವೆ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು ಎಂದರು.

12ನೇ ಶತಮಾನದಲ್ಲಿ ಬಸವಣ್ಣ ವಚನ ಕ್ರಾಂತಿಗೆ ಕಾರಣರಾದರು. ಆ ಮೂಲಕ ಮನುಷ್ಯತ್ವದ ಬೀಜ ಬಿತ್ತಿದರು. ಕಾಲ ಕಾಲಕ್ಕೆ ಇಂತಹ ಮಹನೀಯರು ಬಂದು ಮಾನವತ್ವ ಸಾರಿದರೂ ಅದನ್ನು ನಿರ್ಲಕ್ಷಿಸುತ್ತಿದ್ದೇವೆಂದು ಬೇಸರಿಸಿ, ಜಾತಿ ನಿರ್ಮೂಲನೆಗೆ ಬಸವಣ್ಣ ಕ್ರಾಂತಿ ಮಾಡಿದರು. ಆದರೆ, ಇಂದು ಜಿಲ್ಲಾಡಳಿತದಿಂದ ವಿವಿಧ ಸಮುದಾಯದ ಮಹನೀಯರ ಜಯಂತಿ ಮಾಡಿದಾಗ ಪೂರ್ವಭಾವಿ ಸಭೆ ಮಾಡಲು ಮತ್ತು ಉಪನ್ಯಾಸ ನೀಡಲು ಆ ಸಮುದಾಯವರನ್ನೇ ಆಹ್ವಾನಿಸುತ್ತಾರೆ. ಇದು ಸರಿಯಾದ ಮಾರ್ಗವಲ್ಲ. ಬೇರೆ ಬೇರೆ ಸಮುದಾಯವರನ್ನು ಸಭೆ ಕರೆದು ಜಯಂತಿ ಆಚರಿಸಬೇಕು ಎಂದು ತಿಳಿಸಿದರು.

ನಂತರ ಅಖಿಲ ಕರ್ನಾಟಕ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಕೋಶಾಧ್ಯಕ್ಷ ವರುಣ ಮಹೇಶ್ ಮಾತನಾಡಿ, ನಾವೆಲ್ಲರೂ ಒಂದೇ ಎಂಬ ಸಂದೇಶವನ್ನು 12ನೇ ಶತಮಾನದಲ್ಲಿಯೇ ಬಸವಣ್ಣನವರು ಸಾರಿದ್ದು, ಅದರಂತೆ ನಾವು ಬದುಕಬೇಕಿದೆ. ಕಳೆದ ಬಾರಿ ದಾವಣಗೆರೆಯಲ್ಲಿ ನಡೆದ ವೀರಶೈವ–ಲಿಂಗಾಯತರ ಸಮಾವೇಶದಲ್ಲಿಯೂ ಇದೇ ಸಂದೇಶವನ್ನು ಸಾರಲಾಗಿದೆ. ವೀರಶೈವ–ಲಿಂಗಾಯತ ಸಮಾಜದಲ್ಲಿ ಸಾವಿರಾರು ಒಳಪಂಗಡಗಳಿದ್ದು ಇವೆಲ್ಲವೂ ಒಟ್ಟಾಗಬೇಕೆಂಬ ದೃಷ್ಟಿಯಿಂದ ಈ ಕರೆ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ.ವೀಣಾ, ಗೀತಾ ಕುಮಾರ್, ಸುಗುಣ ಪ್ರಭುದೇವ್, ಎನ್.ಅನಂತ, ಕಲ್ಮಳ್ಳಿ ನಟರಾಜು, ಟಿ. ಸುರೇಶ್, ಪಾರ್ಥಸಾರಥಿ, ದೊರೆಸ್ವಾಮಿ ಹಾಗೂ ಟಿ.ಎಂ.ಕಿಶೋರ್ ಅವರಿಗೆ ಬಸವ ಭೂಷಣ ಪ್ರಶಸ್ತಿಯನ್ನು ಗಣ್ಯರು ಪ್ರದಾನ ಮಾಡಿದರು. ಬಂಡಳ್ಳಿ ದೊಡ್ಡಮಠದ ಮಠಾಧ್ಯಕ್ಷರಾದ ಡಾ.ಫಲಹಾರ ಪ್ರಭುದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೇ 19ಕ್ಕೆ ಪ್ರೊ.ಸಿ.ಪಿ.ಸಿದ್ಧಾಶ್ರಮರ ಕೃತಿಗಳ ಬಿಡುಗಡೆ

ಮೈಸೂರು, ಮೇ 16(ಜಿಎ)–ಕನ್ನಡ ಸಾಹಿತ್ಯ ಪರಿಷತ್ತು ಮತ್ತು ರಚನ ಪ್ರಕಾಶನದ ವತಿಯಿಂದ ವಿಮರ್ಶಕ, ಕವಿ ಪ್ರೊ.ಸಿ.ಪಿ. ಸಿದ್ಧಾಶ್ರಮ ಅವರ ಮೂರು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಮೇ 19ರಂದು ಬೆಳಗ್ಗೆ 11 ಗಂಟೆಗೆ ವಿಜಯನಗರ 1ನೇ ಹಂತದಲ್ಲಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಪ್ರೊ.ಕೆ.ತಿಮ್ಮಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '110 ಆಧುನಿಕ ವಚನಗಳು', 'ನೆಲದ ಮರೆಯ ನಿಧಾನ' ಹಾಗೂ 'ನಾನೆಂಬುದು ನಾನಲ್ಲ' ಕೃತಿಗಳು ಬಿಡುಗಡೆಯಾಗಲಿವೆ. ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿದ್ವಾಂಸರಾದ ಪ್ರೊ.ರಾಗೌ ಕೃತಿ ಬಿಡುಗಡೆಗೊಳಿಸುವರು. ಕೃತಿ ಕುರಿತು ಪ್ರೊ.ಎಂ.ಎಚ್.ರುದ್ರಮುನಿ, ಡಾ.ಆರ್.ಗುರುಸ್ವಾಮಿ ಹಾಗೂ ಡಾ.ಎಂ.ಎಸ್.ಅನಿತ ಮಾತನಾಡಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಡ್ಡೀಕೆರೆ ಗೋಪಾಲ್, ಡಾ.ಆರ್.ಗುರುಸ್ವಾಮಿ, ಲತಾ ಮೋಹನ್, ಕೆ.ಸಿ.ಓಂಕಾರಪ್ಪ, ಡಾ.ಜಿ.ಮಾದಪ್ಪ ಉಪಸ್ಥಿತರಿದ್ದರು.

ಯುವತಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದ ಪೊಲೀಸರು

ದಸಂಸ ಸಂಚಾಲಕ ಚೋರನಹಳ್ಳಿ ಶಿವಣ್ಣ ಆರೋಪ

ಮೈಸೂರು, ಮೇ 16(ಜಿಎ)–ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದ ಪೊಲೀಸರ ವಿರುದ್ಧ ಕ್ರಮ ಕೈಗೊಂಡು ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ದಸಂಸ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ದಸಂಸ ಸಂಚಾಲಕ ಚೋರನಹಳ್ಳಿ ಶಿವಣ್ಣ ಮಾತನಾಡಿ, ಮೈಸೂರು ತಾಲೂಕಿನ ಪರಸಯ್ಯನಹುಂಡಿ ಗ್ರಾಮದ ಭಾನುಪ್ರಕಾಶ್ ಎಂಬುವವರ ಪುತ್ರಿ ಎಂ.ಬಿ.ನೇಹಾ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾರೆ. ಈಕೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಭಾವಿಗಳ ಸಂಪರ್ಕ ಇರುವ ಕುಟುಂಬದ ಯುವಕ ಕಾರಣ. ಪ್ರಕರಣ ಕುರಿತಂತೆ ಎಫ್‌ಐಆರ್ ದಾಖಲಿಸಿ ಕೆಲವು ತಿಂಗಳು ಕಳೆದರೂ ಪೊಲೀಸರು ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆತ್ಮಹತ್ಯೆ ಮಾಡಿಕೊಂಡ ನೇಹಾ ಮೈಸೂರಿನ ಎಂಐಟಿ ಕಾಲೇಜಿನಲ್ಲಿ ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿನಿಯಾಗಿದ್ದರು. ಈಕೆಯ ಸ್ನೇಹ ಬೆಳೆಸಿದ ಅದೇ ಕಾಲೇಜಿನ ಜವರೇಗೌಡ ಎಂಬುವವರ ಪುತ್ರ ರಾಕೇಶ್ ಪ್ರೇಮದ ನಾಟಕವಾಡಿ, ದೈಹಿಕ ಸಂಪರ್ಕ ಬೆಳೆಸಿ, ಕೊನೆಗೆ ಬೇರೊಂದು ಯುವತಿಯೊಡನೆ ಅಕ್ರಮ ಸಂಬಂಧ ಹೊಂದಿದ್ದ. ಇದನ್ನು ಪ್ರಶ್ನಿಸಿದ ನೇಹಾ ಅವರಿಗೆ ಮಾನಸಿಕ ಹಿಂಸೆ ನೀಡಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾನೆಂದು ಆರೋಪಿಸಿದರು.

ಕಳೆದ ಜನವರಿ 24ರಂದು ನೇಹಾ ಮೊಬೈಲ್ ಮೂಲಕ ರಾಕೇಶ್ ಜೊತೆಗೆ ಮಾತನಾಡಿ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿದ್ದರು. ಇದನ್ನು ತಡೆಯುವ ಬದಲು ರಾಕೇಶ್ ಪ್ರಚೋದನೆ ನೀಡಿದ್ದಲ್ಲದೆ, ಬಳಿಕ ಆಕೆಯ ಮನೆಗೆ ಬಂದು, ಬಾಗಿಲು ಹೊಡೆದು ಶವವನ್ನು ಆಸ್ಪತ್ರೆಗೆ ಸಾಗಿಸುವ ನಾಟಕವಾಡಿದ್ದಾನೆ. ಈ ವೇಳೆ ಈತನ ಜೊತೆ ಇನ್ನೊಬ್ಬ ಯುವತಿಯೂ ಇದ್ದರು. ಈ ಎಲ್ಲರ ಬಗ್ಗೆ ದೂರು ನೀಡಿದ ಹಲವಾರು ತಿಂಗಳ ಬಳಿಕ ಎಸ್‌ಪಿ ಅವರ ಮಧ್ಯಪ್ರವೇಶದ ಕಾರಣ ಅಂತಿಮವಾಗಿ ಎಫ್‌ಐಆರ್ ದಾಖಲಾಗಿದೆ. ಆದರೂ ಆರೋಪಿಗಳನ್ನು ಬಂಧಿಸಿಲ್ಲ. ರಾಕೇಶ್ ಇನ್ನಿತರ ಯುವತಿಯರಿಗೂ ಇದೇ ರೀತಿ ವಂಚಿಸಿರುವುದು ಬೆಳಕಿಗೆ ಬಂದಿದೆ. ಹೀಗಾಗಿ ಒಂದು ವಾರದೊಳಗೆ ಆರೋಪಿಗಳನ್ನು ಬಂಧಿಸದಿದ್ದಲ್ಲಿ ಹೋರಾಟ ನಡೆಸುವ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮೃತ ಯುವತಿ ತಂದೆ ಭಾನುಪ್ರಕಾಶ್, ಕಿರಂಗೂರು ಸ್ವಾಮಿ, ಹಾರೋಹಳ್ಳಿ ನಟರಾಜು, ಆಲಗೂಡು ಚಂದ್ರಶೇಖರ್ ಉಪಸ್ಥಿತರಿದ್ದರು.

ನೇಮಕ



ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಿಸಾನ್ ಘಟಕದ ಅಧ್ಯಕ್ಷರನ್ನಾಗಿ ದ್ಯಾವಪ್ಪ ನಾಯಕ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಅವರನ್ನು ನೇಮಕ ಮಾಡಲಾಗಿದೆ.

ವಿಶ್ವವಚನ ರಸಪ್ರಶ್ನೆ: ನಳಿನ ಚಂದ್ರಶೇಖರ್ ವಿಜೇತೆ



ಮೈಸೂರು: ಶರಣು ವಿಶ್ವ ವಚನ ಫೌಂಡೇಷನ್ ವತಿಯಿಂದ ಅಂತರ್ಜಾಲದ ಮೂಲಕ ನಡೆದ 84ನೇ ಥಟ್ ಅಂತ ಉತ್ತರಿಸಿ ವಿಶ್ವವಚನ ರಸಪ್ರಶ್ನೆ ಕಾರ್ಯಕ್ರಮದಲ್ಲಿ ತುಮಕೂರಿನ ನಳಿನ ಚಂದ್ರಶೇಖರ್ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ವಿಜೇತರಾಗಿದ್ದಾರೆ ಎಂದು ಶರಣು ಫೌಂಡೇಷನ್ ಸಂಸ್ಥಾಪಕಿ ರೂಪಾ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.05.2024 ಶುಕ್ರವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024 ರಿಂದ 24.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್, ಇಟ್ಟಿಗೆಗೂಡು :** 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವ, ಬೆಳಗ್ಗೆ 7ಕ್ಕೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಇಟ್ಟಿಗೆಗೂಡು ಶ್ರೀ ಸತ್ಯನಾರಾಯಣಸ್ವಾಮಿ ದೇವಸ್ಥಾನದ ಸರ್ಕಲ್‌ನಿಂದ ಪ್ರಾರಂಭವಾಗಿ, ಪೆರಿಯ ತಂಬಿ ರಸ್ತೆ, 2ನೇ ಕ್ರಾಸ್, ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಮಾರ್ಗವಾಗಿ ಅರುಣಾಚಲಂ ರಸ್ತೆಯಿಂದ ಲೋಕರಂಜನ್ ಮಹಲ್ ರಸ್ತೆ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಪೂಜೆ ಸ್ವೀಕರಿಸಿ, ಕಮ್ಮಾಳಗೇರಿಯಿಂದ ಜೂ ಗಾರ್ಡನ್ ಮಾರ್ಗವಾಗಿ ಭವಾನಿ ರಸ್ತೆಯವರೆಗೂ ಭಕ್ತಾದಿಗಳಿಂದ ಪೂಜೆ, ನಂತರ ಮಹಾಮಂಗಳಾರತಿ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 6ಕ್ಕೆ ರಥಾಂಗ ಹೋಮ, ರಥಸ್ನಪನ, ಯಾತ್ರಾದಾನ, ಮಂಟಪೋತ್ಸವ, ಬೆಳಗ್ಗೆ 7.15ಕ್ಕೆ ದಿವ್ಯರಥಾರೋಹಣ, ಗೋಕುಲಂ 3ನೇ ಹಂತದ ರಸ್ತೆಗಳಲ್ಲಿ ರಥೋತ್ಸವ, ಸಂಜೆ 6ಕ್ಕೆ ಚತುಸ್ಥಾನಾರ್ಚನೆ–ನಿತ್ಯಹೋಮ, ಶಾಂತ್ಯೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಆರ್ಟ್ ಆಫ್ ಲಿವಿಂಗ್ :** ಮೇಧಾ ಯೋಗ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂ, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ ಮನೋವಿಜ್ಞಾನ ಅಧ್ಯಯನ ವಿಭಾಗ:** ವಿಕಾಸಾತ್ಮಕ ಮನೋವಿಜ್ಞಾನ ಕುರಿತು ಪ್ರೊ. ಮೇವಾಸಿಂಗ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಮನೋವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಡಾ.ಸಂಪತ್‌ಕುಮಾರ್, ಸ್ಥಳ: ಸೆಮಿನಾರ್ ಹಾಲ್, ಮನೋವಿಜ್ಞಾನ ಅಧ್ಯಯನ ವಿಭಾಗ, ಬೆಳಗ್ಗೆ 10.30ಕ್ಕೆ.

■ **ದಿನೇಶ್ ಗುಂಡೂರಾವ್ ಅಭಿಮಾನಿ ಬಳಗ:** ಅಂಗವಿಕಲರಿಗೆ ಉಚಿತ ಸೇವೆಗಾಗಿ ಜನಸ್ನೇಹಿ ಕೇಂದ್ರ ಉದ್ಘಾಟನಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶಾಸಕ ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಸ್ಥಳ: ಕೆ.ಆರ್. ಮೊಹಲ್ಲಾ, ಎನ್.ಎಸ್. ರಸ್ತೆ, ಬೆಳಗ್ಗೆ 11ಕ್ಕೆ

■ **ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ, ಕನ್ನಡ ಸಾಹಿತ್ಯ ಕಲಾಕೂಟ:** ಬಸವ ಜಯಂತಿ, ಬಸವ ಸಾಂಸ್ಕೃತಿಕ ಪುರಸ್ಕಾರ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ರಂಗಾಯಣ ಮಾಜಿ ನಿರ್ದೇಶಕ ಸಿ. ಬಸವಲಿಂಗಯ್ಯ, ಪುರಸ್ಕೃತರ ಕುರಿತು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಅಧ್ಯಕ್ಷತೆ: ಸಂಸ್ಕೃತಿ ಪೋಷಕ ಡಾ.ಕೆ.ರಘುರಾಂ ವಾಜಪೇಯಿ, ಸ್ಥಳ: ಬಸವ ಪುತ್ಥಳಿ ಆವರಣ, ಗನ್‌ಹೌಸ್ ಹತ್ತಿರ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ :** ಉಪನ್ಯಾಸ ಮಾಲಿಕೆ, ಭಾರತೀಯ ಸಂವಿಧಾನ ಮತ್ತು ಪ್ರಸ್ತುತ ಸವಾಲುಗಳು ಕುರಿತು ಕಾನೂನು ಅಧ್ಯಯನ ಸಂಸ್ಥೆ ಅಧ್ಯಕ್ಷೆ ಡಾ.ಟಿ.ಆರ್. ಮಾರುತಿ, ಅಧ್ಯಕ್ಷತೆ: ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ, ಸ್ಥಳ: ಡಾ.ಎಸ್.ಆರ್. ರಂಗನಾಥನ್ ಸಭಾಂಗಣ, ಗ್ರಂಥಾಲಯ–ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಧ್ಯಾಹ್ನ 3.30ಕ್ಕೆ

■ **ವ್ಯವಸ್ಥಾಪಕರು:** ಡಾ.ಬಿ.ಪವಿತ್ರ ಅವರ ಸಂಶೋಧನಾ ಮಹಾಪ್ರಬಂಧ ಕಡಲೊಳಗಿನ ಕಿಡಿಗಳು ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ಹಂಪಿ ಕನ್ನಡ ವಿವಿ ಪ್ರಾಧ್ಯಾಪಕ ಡಾ.ಮಾಧವ ಪೆರಾಜೆ, ಕೃತಿ ಕುರಿತು ಮಾತನಾಡುವವರು: ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಜಪ್ಪ ದಳವಾಯಿ, ಗೌರವ ಅತಿಥಿಗಳು: ರೂಪ ಪ್ರಕಾಶನ ಪ್ರಕಾಶಕ ಯು.ಎಸ್.ಮಹೇಶ್, ಅಧ್ಯಕ್ಷತೆ: ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ, ಮುಖ್ಯ ಅತಿಥಿಗಳು: ಹೊಳೇನರಸೀಪುರ ಮಹಿಳಾ ಸರ್ಕಾರಿ ಗೃಹ ವಿಜ್ಞಾನ ಕಾಲೇಜು ಪ್ರಾಧ್ಯಾಪಕ ಡಾ. ಚಿಕ್ಕಮಗಳೂರು ಗಣೇಶ, ಸ್ಥಳ: ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಸಂಜೆ 4ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಉದ್ಘಾಟನೆ: ಸಾವಂತವಾಡಿ ರಾಜ ಸಂಸ್ಥಾನದ ರಾಜ ವಂಶಸ್ಥರಾದ ರಾಜ ಬಹದ್ದೂರ್ ನಾಲ್ವಡಿ ಖೇಮ್ ಸಾವಂತ್ ಭೋಂಸ್ಲೇ ಮತ್ತು ರಾಣಿ ಸಾಹೇಬ್ ಶುಭದಾದೇವಿ ಖೇಮ್ ಸಾವಂತ್ ಭೋಂಸ್ಲೇ, ಮುಖ್ಯ ಅತಿಥಿಗಳು: ಅಂತರರಾಷ್ಟ್ರೀಯ ಕಲಾವಿದ ಗಂಜೀಫಾ ರಘುಪತಿ ಭಟ್ಟ, ಸ್ಥಳ: ರಾಮ್‌ಸನ್ಸ್–ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಸಂಜೆ 5.30ಕ್ಕೆ.

■ **ನಾದ ವಿದ್ಯಾಲಯ, ಹೆಬ್ಬಾಳಿನ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡಾನ್ಸ್:** 'ನಾದ ನೃತ್ಯ ಸಮರ್ಪಣಂ' ಭರತನಾಟ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ವಿದುಷಿ ನಿರ್ದೇಶಕರು, ಶ್ರೀ ದುರ್ಗಾ ನೃತ್ಯ ಅಕಾಡೆಮಿ ನಿರ್ದೇಶಕರಾದ ವಿದುಷಿ ಶ್ರೀವಿದ್ಯಾ ಶಶಿಧರ್, ಭರತನಾಟ್ಯ ಕಲಾವಿದೆ ವಿದುಷಿ ವಿ. ಸುಮಾ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45ಕ್ಕೆ ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ:ಡಾ. ಎಸ್.ಜಾನ್ ಪೀಟರ್, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಮಡಿಕೇರಿ ನಾಗೇಂದ್ರ ಮತ್ತು ಸಂಗಡಿಗರು, 9.00 ನಮ್ಮ ಆರೋಗ್ಯ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ.ಆರ್.ಎನ್. ಶ್ರೀಲತಾ–ಹಾಡುಗಾರಿಕೆ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30ದೇವರನಾಮ–ಡಿ.ಪುರುಷೋತ್ತಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದನ್ನು ಕುರಿತು ಕೇಳುಗರ ಅಭಿಪ್ರಾಯಗಳು, 1.20 ಭಾವಗೀತೆ–ಎಸ್.ಜಿ.ರಘುರಾಂ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎ.ಕೆ.ಇ.ನಟರಾಜನ್–ಕ್ಲಾರಿಯೋನೆಟ್, 4.00 ಮಹಿಳಾರಂಗ, ಸಖಿ ಸಾಹಿತ್ಯ–ಪುಷ್ಪಲತಾ ಫಣಿರಾಜ್ ಅವರಿಂದ ಸಣ್ಣಕಥೆ–ಗೊಂಬೆಮನೆ, 4.30 ವೃತ್ತಿ ಮಾರ್ಗದರ್ಶನ– 'ಕಾಮರ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶ ಗಳು' ಕುರಿತು ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕಿನ ಚಿನಕುರಳಿಯ ಎಸ್.ಟಿ.ಜಿ ಪ್ರಥಮ ದರ್ಜೆಯ ಕಾಲೇಜಿನ ಪ್ರಾಂಶುಪಾಲರಾದ ಡಾ.ನಿಶಾಂತ್ ಎ.ನಾಯ್ಡು ಅವರೊಂದಿಗೆ ಮಾತುಕತೆ, 6.55 ಕೃಷಿರಂಗ–ಸಾವಯವ ಉತ್ಪನ್ನಗಳ ಪ್ರಮಾಣೀಕರಣ ಈ ಕುರಿತು ಬೆಂಗಳೂರಿನ ಪ್ರಾದೇಶಿಕ ಸಾವಯವ ಕೃಷಿ ಕೇಂದ್ರದ ನಿರ್ದೇಶಕರಾದ ಡಾ.ಹರೀಶ್ ಶ್ರೀವತ್ಸ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು ಚಂದನ್‌ಕುಮಾರ್–ಕೊಳಲು ವಾದನ, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 17 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 31 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ಬರ ನಿರ್ವಹಣೆ; ಕಾನೂನು–ಸುವ್ಯವಸ್ಥೆ ಕುರಿತು

ಇಂದು ಅನೌಪಚಾರಿಕ ಸಭೆ

● ನೀತಿಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಭೆ
● ಪ್ರಮುಖ ಇಲಾಖೆ ಅಧಿಕಾರಿಗಳು, ಸಚಿವರು ಪಾಲ್ಗೊಳ್ಳುವಂತೆ ಸೂಚನೆ

ಬೆಂಗಳೂರು, ಮೇ 16(ಕೆಎಂಶಿ)– ಬರ ನಿರ್ವಹಣೆ ಹಾಗೂ ಕಾನೂನು ಪರಿಸ್ಥಿತಿ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅನೌಪಚಾರಿಕ ಸಭೆ ಕರೆದಿದ್ದಾರೆ.



ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಅಡಿ ಮುಖ್ಯಮಂತ್ರಿ ಅವರು, ಯಾವುದೇ ಸರ್ಕಾರಿ ಮಟ್ಟದ ಸಭೆ ಕರೆಯಲಾಗದ ಕಾರಣ ಮುಖ್ಯಕಾರ್ಯದರ್ಶಿಯುವರ ಅಧ್ಯಕ್ಷತೆಯಲ್ಲಿ ಈ ಅನೌಪಚಾರಿಕ ಸಭೆ ಕರೆದಿದ್ದಾರೆ.

ಮುಂಗಾರು ಮಳೆ ತಡವಾಗಿರುವುದರಿಂದ ರಾಜ್ಯದೆಲ್ಲೆಡೆ ಕುಡಿಯುವ ನೀರು ಹಾಗೂ ಮೇವಿನ ಸಮಸ್ಯೆ ಅಗಾಧವಾಗಿದೆ. ಮತ್ತೊಂದೆಡೆ ಸಣ್ಣ–ಪುಟ್ಟ ಕಾರಣಗಳಿಗಾಗಿ ಹೆಣ್ಣು ಮಕ್ಕಳ ಕೊಲೆ ನಿರಂತರವಾಗಿ ನಡೆಯುತ್ತಿದೆ. ಚುನಾವಣಾ ನೆಪ ಮುಂದೊಡ್ಡಿ ಅಧಿಕಾರಿಗಳು ಬಿಗಿ ಕ್ರಮ ಕೈಗೊಳ್ಳದಿರುವುದರಿಂದ ಸಮಸ್ಯೆಗಳು ದಿನೇ ದಿನೆ ಉಲ್ಬಣಗೊಳ್ಳುತ್ತಿವೆ. ಬರ ಪರಿಹಾರ ನಿರ್ವಹಣೆ ಹಾಗೂ ತುರ್ತು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲು ಅನುಮತಿ ನೀಡುವಂತೆ ಮುಖ್ಯಮಂತ್ರಿ ಅವರು ಚುನಾವಣಾ ಆಯೋಗಕ್ಕೆ ಬರೆದ ಪತ್ರಕ್ಕೆ ಸಮ್ಮತಿ ದೊರೆತಿಲ್ಲ.

ಈ ಕಾರಣಕ್ಕಾಗಿ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲೇ ವಿಧಾನಸೌಧದಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಹಾಗೂ ಆಯ್ದ ಸಚಿವರ ಸಭೆಯನ್ನು ಕರೆಯಲಾಗಿದೆ. ಬರ ಹಾಗೂ ವಿದ್ಯುತ್ ಸಮಸ್ಯೆಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಸಲಹೆ ನೀಡುವ ಮುಖ್ಯಮಂತ್ರಿ ಅವರು, ಈ ಬಗ್ಗೆ ತಕ್ಷಣ ಕಾರ್ಯಪ್ರವೃತ್ತರಾಗುವಂತೆ ಸೂಚಿಸಲಿದ್ದಾರೆ. ಪ್ರಸಕ್ತ ಮುಂಗಾರು ಮೇ 30ರಂದು ಕೇರಳ ಪ್ರವೇಶಿಸಲಿದೆ ಎಂಬ ಮಾಹಿತಿಯನ್ನು ಹವಾಮಾನ ಇಲಾಖೆ ನೀಡಿದೆ. ಇನ್ನೂ 15 ದಿನಗಳ ಕಾಲ ಮಳೆ ಬೀಳದಿದ್ದರೆ ಕುಡಿಯುವ ನೀರು ಹಾಗೂ ಮೇವಿಗೆ ಭಾರಿ ತೊಂದರೆಯಾಗುತ್ತದೆ. ಇತ್ತ ಗಮನಹರಿಸಿ ಎಂದು ತಿಳಿಸಲಿದ್ದಾರೆ. ಕಾನೂನು ಸುವ್ಯವಸ್ಥೆ ಬಗ್ಗೆ ಬಿಗಿ ಕ್ರಮ ಕೈಗೊಳ್ಳಿ, ಸಣ್ಣ–ಪುಟ್ಟ ಕಾರಣಗಳಿಗೆ ಕೊಲೆಗಳು ನಡೆಯುತ್ತಿವೆ. ಇದನ್ನು ಹತ್ತಿಕ್ಕಲು ಮುಂಜಾಗ್ರತಾ ಕ್ರಮ ಕೈಗೊಳ್ಳಿ. ಕಳೆದ ಮುಂಗಡಪತ್ರದಲ್ಲಿ ಪ್ರಕಟಗೊಂಡಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಳ್ಳಿ, ಚುನಾವಣಾ ನೀತಿ ಸಂಹಿತೆ ಮುಗಿಯುತ್ತಿದ್ದಂತೆ ಆದೇಶಗಳು ಹೊರ ಬಂದು ಯುದ್ಧೋಪಾದಿಯಲ್ಲಿ ಕೆಲಸ ಮಾಡಲು ಸಜ್ಜಾಗಿ ಎಂದು ಹಿರಿಯ ಅಧಿಕಾರಿಗಳಿಗೆ ತಿಳಿಸಲಿದ್ದಾರೆ.

ನಾವು ಯಾವುದೇ ಆದೇಶ ಮತ್ತು ಸಲಹೆಗಳನ್ನು ಈ ಸಮಯದಲ್ಲಿ ನೀಡಲು ಸಾಧ್ಯವಿಲ್ಲ. ಆದರೆ, ನೀವು, ನಿಮ್ಮ ಇತಿಮಿತಿಯಲ್ಲಿ ಜನರ ಸಂಕಷ್ಟಗಳಿಗೆ ಸ್ಪಂದಿಸಲು ಅವಕಾಶವಿದೆ. ಬರದಿಂದ ತತ್ತರಿಸಿರುವ ಗ್ರಾಮೀಣ ಭಾಗದ ಕಡೆ ಗಮನ ಹರಿಸಿ, ಕೇಂದ್ರದಿಂದ ಬಿಡುಗಡೆಯಾಗಿರುವ ಬೆಳೆ ಪರಿಹಾರದ ಹಣ ಎಲ್ಲಾ ರೈತರ ಖಾತೆಗೆ ತಲುಪಿದೆಯೇ ಎಂಬ ಮಾಹಿತಿ ಪಡೆದುಕೊಳ್ಳುವಂತೆಯೂ ಸೂಚಿಸಲಿದ್ದಾರೆ. ನಾಳಿನ ಸಭೆಗೆ ಅಧಿಕಾರಿ ಗಳಲ್ಲದೆ, ಕಂದಾಯ, ಕೃಷಿ, ಪೌರಾಡಳಿತ, ಗೃಹ, ನಗರಾಭಿವೃದ್ಧಿ, ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರಲ್ಲದೆ, ಸಂಪುಟದ ಹಿರಿಯ ಸಹೋದ್ಯೋಗಿಗಳೂ ಬರುವಂತೆ ಆಹ್ವಾನಿಸಲಾಗಿದೆ.

ಮಹಿಳೆಗೆ ಲೈಂಗಿಕ ದೌರ್ಜನ್ಯ ಪ್ರಕರಣ

ರೇವಣ್ಣಗೆ 22 ಗಂಟೆ ಮಧ್ಯಂತರ ಜಾಮೀನು




ಬೆಂಗಳೂರು, ಮೇ16– ಹೊಳೆನರಸೀಪುರ ಮಹಿಳೆಗೆ ಲೈಂಗಿಕ ದೌರ್ಜನ್ಯ ಕೇಸ್‌ನಲ್ಲಿ ಮಾಜಿ ಸಚಿವ ಎಚ್‌ಡಿ ರೇವಣ್ಣ ಅವರಿಗೆ ಬೆಂಗಳೂರು 42ನೇ ಎಸಿಎಂಎಂ ನ್ಯಾಯಾಲಯವು ಒಂದು ದಿನದ ಮಟ್ಟಿಗೆ (22 ಗಂಟೆ) ಜಾಮೀನು ಮಂಜೂರು ಮಾಡಿದೆ. ಈಗಾಗಲೇ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಅಪಹರಣ ಮಾಡಿದ ಆರೋಪದಲ್ಲಿ ಬಂಧನಕ್ಕೀಡಾಗಿ, ಆರು ದಿನ ಜೈಲುವಾಸ ಅನುಭವಿಸಿದ ಬಳಿಕ ಎಚ್.ಡಿ.ರೇವಣ್ಣ ಬಿಡುಗಡೆಯಾಗಿತ್ತು. ಈಗ ಹೊಳೆನರಸೀಪುರದಲ್ಲಿ ದಾಖಲಾಗಿದ್ದ ಲೈಂಗಿಕ ದೌರ್ಜನ್ಯ ಕೇಸ್‌ನಲ್ಲಿ ಬಂಧನವಾಗುವ ಸಾಧ್ಯತೆ ಇತ್ತು. ಈ ಹಿನ್ನೆಲೆಯಲ್ಲಿ ಸ್ವತಃ ರೇವಣ್ಣ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಸದ್ಯ ಕೋರ್ಟ್ ಗುರುವಾರ ಸಂಜೆ 5 ಗಂಟೆಯಿಂದ ಶುಕ್ರವಾರ ಮಧ್ಯಾಹ್ನ 3 ಗಂಟೆಯವರೆಗೂ ಜಾಮೀನು ನೀಡಿದೆ. ಮತ್ತೆ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಎಚ್.ಡಿ.ರೇವಣ್ಣ ಅವರು ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ● 6ನೇ ಪುಟಕ್ಕೆ

ಕಾವೇರಿ ನೀರು ಬಿಡಲು ಸಾಧ್ಯವೇ ಇಲ್ಲ

ತಮಿಳುನಾಡು ಬೇಡಿಕೆ ತಿರಸ್ಕರಿಸಿದ CWRC

ನವದೆಹಲಿ, ಮೆ16– ಕಾವೇರಿ ನದಿ ನೀರು ಸಂಘರ್ಷ ವಿಚಾರದಲ್ಲಿ ತಮಿಳುನಾಡು ಬೇಡಿಕೆಯನ್ನು, ಕಾವೇರಿ ನೀರು ನಿಯಂತ್ರಣ ಸಮಿತಿ (CWRC) ತಿರಸ್ಕರಿಸಿದೆ 2023–2024 ಜಲ ವರ್ಷದ ಅಂತಿಮ ಸಭೆಯಲ್ಲಿ ನೀರು ಬಿಡಲು ಸಾಧ್ಯವಿಲ್ಲ ಎಂದು ಸಿಡಬ್ಲ್ಯೂಆರ್‌ಸಿ ಸ್ಪಷ್ಟಪಡಿಸಿದೆ.

ಕರ್ನಾಟಕದಲ್ಲಿ ಬರ ಪರಿಸ್ಥಿತಿ ಇರುವ ಕಾರಣ ನೀರು ಕೊಡಲು ಸಾಧ್ಯವಿಲ್ಲ, ಹಾಗಾಗಿ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆಯಿಂದ ನೈಸರ್ಗಿಕವಾಗಿ ನದಿ ಸೇರುವ ನೀರು ಬಳಸಿಕೊಳ್ಳಿ ಎಂದು ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಕಾವೇರಿ ನೀರು



ನಿಯಂತ್ರಣಾ ಸಮಿತಿ ತಮಿಳುನಾಡಿಗೆ ತಿಳಿಸಿದೆ. ಮೇ 21ರಂದು CWMA ಸಭೆ ನಡೆಯಲಿದೆ.

ತಮಿಳುನಾಡಿಗೆ ಭಾರಿ ಮುಖಭಂಗ: ಕರ್ನಾಟಕ ರಾಜ್ಯದಲ್ಲಿ ತೀವ್ರ ಬರಗಾಲ ಆವರಿಸಿದ್ದು, ಕುಡಿಯುವ ● 6ನೇ ಪುಟಕ್ಕೆ

ಟಿ–20 ವಿಶ್ವಕಪ್ ಟೂರ್ನಿಯಲ್ಲಿ ಐರ್ಲೆಂಡ್, ಸ್ಕಾಟ್ಲೆಂಡ್ ಆಟಗಾರರ ಜೆರ್ಸಿ ಮೇಲೆ

'ಕನ್ನಡ' ಮೆರೆಸುವ ನಮ್ಮ ನಂದಿನಿ



ಬೆಂಗಳೂರು: ಅಮೆರಿಕದಲ್ಲಿ ಜೂನ್ 1ರಿಂದ ಆರಂಭವಾಗಲಿರುವ ಐಸಿಸಿ ಪುರುಷರ ಟಿ–20 ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಬಾರಿಗೆ ಅಂತರ ರಾಷ್ಟ್ರೀಯ ಕ್ರಿಕೆಟಿಗರ ಜೆರ್ಸಿಯಲ್ಲಿ ಭಾರತೀಯ ಭಾಷೆಯೊಂದನ್ನು ಪ್ರದರ್ಶಿಸಲಾಗುವುದು. ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್‌ನ ಆಟಗಾರರು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕೆಎಂಎಫ್‌ನ ನಂದಿನಿಯ ಲಾಂಛನವಿರುವ ಜೆರ್ಸಿಯನ್ನು ಧರಿಸಿ ಕಣಕ್ಕಿಳಿಯಲಿದ್ದಾರೆ.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ (ಕೆಎಂಎಫ್) ನಂದಿನಿ ಲಾಂಛನವಿರುವ ಟಿ–20 ತಂಡದ ಜೆರ್ಸಿಯನ್ನು ಕ್ರಿಕೆಟ್ ಸ್ಕಾಟ್ಲೆಂಡ್ ಬುಧವಾರ ಜಂಟಿ ವರ್ಚುವಲ್ ಪತ್ರಿಕಾ ಗೋಷ್ಠಿಯಲ್ಲಿ ಬಹಿರಂಗಪಡಿಸಿದೆ. 2024ರ ಟಿ–20 ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ಕ್ರಿಕೆಟ್ ತಂಡಗಳಿಗೆ ಪ್ರಾಯೋಜಕತ್ವ ನೀಡುವುದಾಗಿ ಏಪ್ರಿಲ್ 21 ರಂದು ಕೆಎಂಎಫ್ ಘೋಷಿಸಿತ್ತು.

ಕೆಎಂಎಫ್ ಮುಖ್ಯಸ್ಥರೊಂದಿಗಿನ ಸಭೆಯಲ್ಲಿ ಎರಡೂ ತಂಡಗಳ ಆಟಗಾರರು ನಂದಿನಿ ಲಾಂಛನವಿರುವ ಜೆರ್ಸಿಯನ್ನು ವಾಸ್ತವಿಕವಾಗಿ ಪ್ರದರ್ಶಿಸಿದರು. ಒಕ್ಕೂಟವು ತನ್ನ ಡೈರಿ ಉತ್ಪನ್ನಗಳನ್ನು ಮಾರಾಟ ಮಾಡುವ ಬ್ರ್ಯಾಂಡ್ ಆಗಿರುವ ನಂದಿನಿಯ ಲಾಂಛನವು ಉಭಯ ತಂಡಗಳ ಜೆರ್ಸಿಗಳ ತೋಳಿನ ಮೇಲೆ ಇರುತ್ತದೆ.

ಈ ಮೂಲಕ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಪ್ರವೇಶಿಸಿರುವ ಕೆಎಂಎಫ್ ಕೇವಲ ಸ್ಥಳೀಯ ಬ್ರಾಂಡ್ ಅಲ್ಲ ಎಂದು ಜನರಿಗೆ ತಿಳಿಸುವ ಗುರಿ ಹೊಂದಲಾಗಿದೆ. ನಂದಿನಿ ಉತ್ಪನ್ನಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಲಭ್ಯವಿವೆ ಮತ್ತು ಇದರ ಮೂಲಕ ನಾವು ದೊಡ್ಡ ಅಂತರಾಷ್ಟ್ರೀಯ ಮಾರುಕಟ್ಟೆಯನ್ನು ಭೇದಿಸಲು ಬಯಸು ತ್ತೇವೆ. ಇದಲ್ಲದೆ, ನಾವು ಕ್ರೀಡೆಯನ್ನು ಉತ್ತೇಜಿಸಲು ಬಯಸುತ್ತೇವೆ. ಕಬಡ್ಡಿ ಲೀಗ್‌ನಲ್ಲಿ ನಾವು ಬೆಂಗಳೂರು ಬುಲ್ಸ್‌ಗೆ ಪ್ರಾಯೋಜಕತ್ವ ನೀಡಿದ್ದೇವೆ. ನಂದಿನಿಯು ಅಮುಲ್ ನಂತರ ಭಾರತದಲ್ಲಿ ಎರಡನೇ ಅತಿ ದೊಡ್ಡ ಹಾಲು ಒಕ್ಕೂಟವಾಗಿದೆ ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ತಿಳಿಸಿದರು. ● 9ನೇ ಪುಟಕ್ಕೆ

ನಂದಿನಿ ಜಾಗತಿಕ ಬ್ರಾಂಡ್

ಬೆಂಗಳೂರು, ಮೇ 16(ಕೆಎಂಶಿ)–ಮುಂಬರುವ ಟಿ–20 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯ ಸಂದರ್ಭದಲ್ಲಿ ಕರ್ನಾಟಕದ ಹೆಮ್ಮೆಯ ನಂದಿನಿ ಸಂಸ್ಥೆಯ ಹಾಲಿನ ಉತ್ಪನ್ನಗಳು ಜಾಗತಿಕ ಮಟ್ಟದಲ್ಲಿ ಕನ್ನಡದಲ್ಲಿ ರಾರಾಜಿಸಲಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.




ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಮಲೇಷಿಯಾ, ವಿಯೆಟ್ನಾಂ, ಸಿಂಗಾಪುರ, ಅಮೆರಿಕ, ದುಬೈ, ಯುಎಇ ಮುಂತಾದ ರಾಷ್ಟ್ರಗಳಲ್ಲಿ ಈಗಾಗಲೇ ಚಿರಪರಿಚಿತವಾಗಿರುವ ಕರ್ನಾಟಕದ ಹೆಮ್ಮೆಯ ನಂದಿನಿ ಸಂಸ್ಥೆ, ಟಿ–20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳ ಪ್ರಾಯೋಜಕತ್ವ ಪಡೆದುಕೊಂಡಿದೆ. ರಾಜ್ಯದ ಉತ್ಕೃಷ್ಟ ಗುಣಮಟ್ಟದ ಹಾಲಿನ ಉತ್ಪನ್ನಗಳು ಮತ್ತು ನಾಡಿನ ರೈತರ ಶ್ರಮವನ್ನೂ ವಿಶ್ವಕ್ಕೆ ಪರಿಚಯಿಸುವ ಸಂಕಲ್ಪ ಕರ್ನಾಟಕ ಸರ್ಕಾರದ್ದಾಗಿದ್ದು, ನಂದಿನಿಯನ್ನು ಜಾಗತಿಕ ಬ್ರಾಂಡ್ ಆಗಿ ರೂಪಿಸುವಲ್ಲಿ ಇದು ಮಹತ್ವದ ಹೆಜ್ಜೆಯಾಗಲಿದೆ ಎಂದಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ನಾಮಪತ್ರ ಸಲ್ಲಿಕೆ

ಹೆಚ್.ಡಿ.ಕುಮಾರಸ್ವಾಮಿ, ಆರ್.ಅಶೋಕ್, ಜಿಟಿಡಿ, ಯದುವೀರ್ ಉಪಸ್ಥಿತಿ

● ಬಿಜೆಪಿ, ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಒಗ್ಗಟ್ಟು ಪ್ರದರ್ಶನ ● ಕಾಂಗ್ರೆಸ್ ಸೋಲಿಸುವ ಒಮ್ಮತದ ತೀರ್ಮಾನ ● ಜೆಡಿಎಸ್ ಭದ್ರಕೋಟೆ ಎಂದು ಸಾಬೀತು ಮಾಡಿ ● ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್‌ಗೆ ಭವಿಷ್ಯವಿಲ್ಲ



ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಗುರುವಾರ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಅವರಿಗೆ ನಾಮಪತ್ರ ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಶಾಸಕ ಜಿ.ಟಿ.ದೇವೇಗೌಡ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ16(ಬಿಎಲ್‌ಯು)– ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ, ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಗುರುವಾರ ನಾಮಪತ್ರ ಸಲ್ಲಿಸಿದರು. ಮೈಸೂರಿನ ಹುಣಸೂರು ರಸ್ತೆಯ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಅವರಿಗೆ ವಿವೇಕಾನಂದ ಉಮೇದುವಾರಿಕೆ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿವೇಕಾನಂದ ನಾಮಪತ್ರ ಸಲ್ಲಿಸುವ ವೇಳೆ ಹಾಜರಿದ್ದರು. ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ರಾಜ್ಯ ನಾಯಕರು ನಾಮಪತ್ರ ಸಲ್ಲಿಸುವ ವೇಳೆ ಹಾಜರಿದ್ದು, ಮೈತ್ರಿ ಒಗ್ಗಟ್ಟು ಪ್ರದರ್ಶಿಸಿದರು. ಇದಕ್ಕೂ ಮೊದಲು ಮೈಸೂರಿನ ಗೋವಿಂದರಾವ್ ● 6ನೇ ಪುಟಕ್ಕೆ

ಕೆ.ಟಿ.ಶ್ರೀಕಂಠೇಗೌಡರ ಮನವೊಲಿಕೆ ವೇಳೆ

ನಡೀತು ಭಾರಿ ಹೈಡ್ರಾಮಾ

ಜೆಡಿಎಸ್ ನಾಯಕರು, ಶ್ರೀಕಂಠೇಗೌಡ ಬೆಂಬಲಿಗರ ನಡುವೆ ತಳ್ಳಾಟ–ನೂಕಾಟ; ಗೌಡರ ಬಲಗೈಗೆ ಪೆಟ್ಟು; ಕೊನೆಗೆ ಹೆಚ್‌ಡಿಕೆ ಭೇಟಿಗೆ ಸಮ್ಮತಿಸಿದ ಕೆಟಿಎಸ್

ಮೈಸೂರು, ಮೇ16(ಬಿಎಲ್‌ಯು)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸದಂತೆ ಮಾಜಿ ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡರನ್ನು ಜೆಡಿಎಸ್ ನಾಯಕರು ಮನವೊಲಿಸುವ ವೇಳೆ ಭಾರಿ ಹೈಡ್ರಾಮಾ ನಡೆದುಹೋಯ್ತು! ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಭೇಟಿ ಮಾಡಲು ಶ್ರೀಕಂಠೇಗೌಡರನ್ನು ಕರೆದೊಯ್ಯುವಾಗ ಅವರ ಬೆಂಬಲಿಗರು ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನಡೆದ ತಳ್ಳಾಟ–ನೂಕಾಟದಿಂದ ಕೆಲ ಸಮಯ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಶ್ರೀಕಂಠೇಗೌಡರ ಬಲಗೈಗೆ ಪೆಟ್ಟಾಗಿ ಕೊನೆಗೆ ಅವರು ಆಸ್ಪತ್ರೆ ಸೇರುವಂತಾಯಿತು. ದಕ್ಷಿಣ ಶಿಕ್ಷಕರ ಕ್ಷೇತ್ರದ ● 6ನೇ ಪುಟಕ್ಕೆ




ಮೈಸೂರಿನ ಆಲಮ್ಮ ಛತ್ರದಲ್ಲಿ ಗುರುವಾರ ಮಾಜಿ ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡರ ಮನವೊಲಿಸಿ ಜೆಡಿಎಸ್–ಬಿಜೆಪಿ ಮೈತ್ರಿ ಸಭೆಗೆ ಕರೆದೊಯ್ಯುವ ವೇಳೆ ತಳ್ಳಾಟ, ನೂಕಾಟದೊಂದಿಗೆ ಹೈ ಡ್ರಾಮಾವೇ ನಡೆಯಿತು.

92ನೇ ಹುಟ್ಟುಹಬ್ಬ ಆಚರಿಸಿಕೊಳ್ಳದಿರಲು ದೊಡ್ಡಗೌಡರು ನಿರ್ಧಾರ

● ಇದ್ದಲ್ಲಿಯೇ ಹಾರೈಸಿ ● ಪರಿಷತ್ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವಂತೆ ಮನವಿ

ಬೆಂಗಳೂರು, ಮೇ 16(ಕೆಎಂಶಿ)– ತಮ್ಮ ಹುಟ್ಟುಹಬ್ಬವನ್ನು ಸಾರ್ವಜನಿಕವಾಗಿ ಆಚರಣೆ ಮಾಡದಂತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ. ಮೇ 18ರಂದು ದೇವೇಗೌಡರು 91 ವರ್ಷ ಪೂರೈಸಿ 92ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ.



ಕಾರಣಾಂತರಗಳಿಂದ ನಾನು ಜನ್ಮದಿನ ಆಚರಣೆ ಮಾಡಿಕೊಳ್ಳುತ್ತಿಲ್ಲ. ಹೀಗಾಗಿ ತಾವೆಲ್ಲರೂ ಇದ್ದಲ್ಲಿಯೇ ಹಾರೈಸುವಂತೆ ಮನವಿ ಮಾಡಿದ್ದಾರೆ.

ಸಮಯ ಬಂದಾಗ ಸರ್ಕಾರದ ಭ್ರಷ್ಟ ತಿಮಿಂಗಿಲ ನುಂಗುವೆ!

ಡಿಸಿಎಂ ಡಿಕೆಶಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿರುಗೇಟು

ಮೈಸೂರು, ಮೇ16(ಬಿಎಲ್‌ಯು)–ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿರುವ ಭ್ರಷ್ಟ ತಿಮಿಂಗಿಲವನ್ನು ಸಮಯ ಬಂದಾಗ ನುಂಗುವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ತಿರುಗೇಟು ನೀಡಿದ್ದಾರೆ.

ಮೈಸೂರಿನ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸರ್ಕಾರದ ಭ್ರಷ್ಟ ತಿಮಿಂಗಿಲವನ್ನು ಕುಮಾರಸ್ವಾಮಿ ಅವರೇ ಹಿಡಿದು ನುಂಗಲಿ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಹೆಚ್‌ಡಿಕೆ ಟಾಂಗ್ ನೀಡಿದರು. ಸರ್ಕಾರದಲ್ಲಿರುವ ತಿಮಿಂಗಿಲ ಯಾವುದೆಂದು ಬಹಿರಂಗಪಡಿಸಲಿ ಎಂಬ ಗೃಹ ಸಚಿವ ಡಾ.ಪರಮೇಶ್ವರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ಸರ್ಕಾರದಲ್ಲಿರುವ ದೊಡ್ಡ ತಿಮಿಂಗಿಲ ಯಾವುದೆಂದು ಡಾ.ಪರಮೇಶ್ವರ್ ಅವರಿಗೆ ತಿಳಿದಿದೆ. ತಮ್ಮ ಪಕ್ಕದಲ್ಲೇ ತಿಮಿಂಗಿಲ ಕೂರಿಸಿಕೊಂಡು ಅದು ಯಾವುದೆಂದು ನನ್ನ ಕೇಳಿದರೆ ನಾನೇನು ಹೇಳಲಿ ಎಂದು ಪ್ರಶ್ನಿಸಿದರು. ಸರ್ಕಾರ ಪ್ರಾಮಾಣಿಕ ಹಾಗೂ ದಕ್ಷತೆಯಿಂದ ತನಿಖೆ ನಡೆಸಿದರೆ ಆ ತಿಮಿಂಗಿಲವನ್ನು ಕೇವಲ 10 ನಿಮಿಷದಲ್ಲಿ ಹಿಡಿಯಬಹುದು. ಆದರೆ ಸರ್ಕಾರಕ್ಕೆ ದಕ್ಷತೆ ಇಲ್ಲ, ಎಸ್‌ಐಟಿ ತನಿಖೆ ಪ್ರಾಮಾಣಿಕವಾಗಿಲ್ಲ ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾಲೀಕರು: (ಕಟ್ಟಡ ನಿರ್ಮಾಣ ಸ್ಥಳದಲ್ಲಿ) "ಏನಯ್ಯಾ ಎಲ್ಲರೂ 6 ಇಟ್ಟಿಗೆಗಳನ್ನು ಹೊರುತ್ತಿದ್ದರೆ ನೀನು ಮೂರೇ ಇಟ್ಟಿಗೆಗಳನ್ನು ಹೊರುತ್ತಿದ್ದೀಯಲ್ಲ?"
ಆತ: "ಅವರೆಲ್ಲಾ ಸೋಮಾರಿಗಳು ಸ್ವಾಮಿ,
ಎರಡೆರಡು ಸಾರಿ ಬರಬೇಕಾಗುತ್ತೆ ಅಂತ!"

ಮೈಸೂರು ಮಿತ್ರ

ಶುಕ್ರವಾರ, 17 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........


ಮೌನ ಆವರಿಸುವವರೆಗೆ ಬುದ್ಧಿವಂತನಾದವನು ಮಾತನಾಡಲು ಮುಂದಾಗುವುದಿಲ್ಲ. – ಬಸವರಾಜ ಕಟ್ಟೀಮನಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧಾನ್ಯ ಹೆಚ್ಚಿದವನಿಗೆ ಮಾನ್ಯ ಹೆಚ್ಚು

ನಿಮ್ಮ ಪತ್ರಗಳು

ಎಂ.ಜಿ.ರಸ್ತೆ ತರಕಾರಿ ಮಾರುಕಟ್ಟೆ ಅವ್ಯವಸ್ಥೆ





ಮಾನ್ಯರೆ,

ಮೈಸೂರಿನ ಎಂ.ಜಿ. ರಸ್ತೆಯಲ್ಲಿ ಜಾನುವಾರುಗಳು ತರಕಾರಿ ಮಾರಾಟಗಾರರು ಮಾರಾಟ ಮಾಡಿ ಬಿಸಾಡಿದ್ದ ಹಳಸಿದ ಹಾಗೂ ಕೆಟ್ಟ ತರಕಾರಿಗಳನ್ನು ಜಾನುವಾರುಗಳು ತಿಂದು ಅಡ್ಡಾಡುತ್ತಾ ಪಾದಚಾರಿಗಳಿಗೆ ಮತ್ತು ವಾಹನ ಸವಾರರಿಗೆ ಭಾರಿ ತೊಂದರೆಯನ್ನು ಉಂಟು ಮಾಡುತ್ತಿವೆ. ಆರೋಗ್ಯಕ್ಕೆ ಅಪಾಯಕಾರಿಯಾಗಿದೆ. ಇದರಿಂದ ಬಹಳಷ್ಟು ಕಸ ಸಂಗ್ರಹವಾಗುತ್ತಿದೆ. ಹಾಗೆಯೇ ಸೊಳ್ಳೆಗಳ ಸಂತಾನೋತ್ಪತ್ತಿ ಮತ್ತು ಕೀಟಗಳ ವಾಸ ಸ್ಥಳವಾಗಿದೆ. ಅಧಿಕಾರಿಗಳೊಂದಿಗೆ ಹಲವಾರು ಬಾರಿ ಚರ್ಚಿಸಲಾಗಿದ್ದು, ರಾಜಕಾರಣಿಗಳು ಮತ್ತು ಅಧಿಕಾರಿಗಳ ಅಸಹಾಯಕತೆಯಿಂದಾಗಿ ಇದೇ ಪರಿಸ್ಥಿತಿ ಮುಂದುವರೆದಿದೆ. ಪುನರಾವರ್ತಿತ ಮನವಿಗಳು ಮತ್ತು ವಿಸ್ತೃತ ಅವಧಿಯ ಕಾಳಜಿಯ ಹೊರತಾಗಿಯೂ ವಿಷಯವೂ ಬಗೆಹರಿಯದೆ ಉಳಿದಿದೆ. ರಸ್ತೆಗಳನ್ನು ವಿಭಜಿಸುವ ಮಧ್ಯದಲ್ಲಿ ತರಕಾರಿ, ಹಣ್ಣು, ಹೂವು ಮಾರಾಟಗಾರರ ವಾಹನಗಳ ಪರಿಸ್ಥಿತಿ ಹದಗೆಟ್ಟಿದೆ. ರಸ್ತೆ ದಾಟುವುದು ರಸ್ತೆ ಬಳಕೆದಾರರಿಗೆ ಅಪಾಯಗಳನ್ನು ಉಂಟು ಮಾಡುತ್ತಿದೆ.

– ಎಂ.ಆರ್. ಶಿಮಾ ರಂಜನ್, ಮೈಸೂರು.

ಫುಟ್‌ಪಾತ್ ಸಾರ್ವಜನಿಕರ ಓಡಾಟಕ್ಕೋ ಅಥವಾ ಹೋಟೆಲ್ ನಡೆಸುವ ವ್ಯಾಪಾರಸ್ಥರಿಗೋ?



ಮಾನ್ಯರೆ,

ಸುಂದರ ಪಾರಂಪರಿಕ ನಗರ ಮೈಸೂರಿನ ಮುಖ್ಯ ರಸ್ತೆಯ ಫುಟ್‌ಪಾತ್ (ಪಾದಚಾರಿ ಮಾರ್ಗ) ಗಳಿರುವುದು ಸಾರ್ವಜನಿಕರ ಓಡಾಟಕ್ಕೋ ಅಥವಾ ರಸ್ತೆ ಬದಿಯಲ್ಲಿ ಹೋಟೆಲ್ ನಡೆಸುವ ವ್ಯಾಪಾರಸ್ಥರಿಗೋ? ಎಂಬ ಅನುಮಾನ.

ಮೈಸೂರಿನ ಶಾರದಾದೇವಿ ನಗರದಲ್ಲಿರುವ, ಎಲ್‌ಐಸಿ, ಆಫೀಸ್ ಮುಂಭಾಗದ ಫುಟ್‌ಪಾತ್ ಮೇಲೆ ಆಟೋರಿಕ್ಷಾ, ವಾಹನಗಳು ಮತ್ತು ತಳ್ಳೋ ಗಾಡಿಗಳಲ್ಲಿ ಬೆಳಗ್ಗೆ ತಿಂಡಿಯಿಂದ ರಾತ್ರಿ ಊಟದ ತನಕ ವ್ಯಾಪಾರ ನಡೆಯುತ್ತಿರುತ್ತದೆ. ಇದರಿಂದಾಗಿ ಎಲ್‌ಐಸಿ ಕಚೇರಿಗೆ ಭೇಟಿ ನೀಡುವ ಗ್ರಾಹಕರಿಗೂ ಕಿರಿಕಿರಿ ಉಂಟಾಗುತ್ತಿದೆ. ಇಲ್ಲಿ ಬಜ್ಜಿ – ಬೋಂಡಾ ಹಾಕುವುದರಿಂದ, ಕರಿದ ಎಣ್ಣೆಯ ಪದಾರ್ಥಗಳು ಫುಟ್‌ಪಾತ್ ಮೇಲೆ ಬಿದ್ದು, ಗಬ್ಬು ಹಿಡಿದು ಹೋಗಿದೆ.

ಮೈಸೂರಿನ ಬಹುತೇಕ ಫುಟ್‌ಪಾತ್‌ಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ನಗರಪಾಲಿಕೆಯ ಆರೋಗ್ಯಾಧಿಕಾರಿಗಳ ಗಮನಕ್ಕೆ ತಂದರೂ, ಅವರು ಇದೂ ವರೆಗೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಇವರಿಗೆ ಸ್ಥಳೀಯ ನಗರಪಾಲಿಕೆಯ ಸದಸ್ಯರ ಸಹಕಾರವಿದೆ. ಇದಕ್ಕಾಗಿ ಇವರು ಅಂಗಡಿಗಳನ್ನು ತೆರವುಗೊಳಿಸುತ್ತಿಲ್ಲ ಎಂದು ಸಾರ್ವಜನಿಕರು ಹೇಳುತ್ತಾರೆ. ಈ ಬಗ್ಗೆ ನಗರಪಾಲಿಕೆಯ ಆಯುಕ್ತರು ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಶೈಕ್ಷಣಿಕ ಪ್ರಕ್ರಿಯೆಗೂ ಮುನ್ನ ಅನಧಿಕೃತ ಶಾಲೆಗಳಿಗೆ ಬೀಳಲಿ ಕಡಿವಾಣ!

ಮಾನ್ಯರೆ,

ರಾಜ್ಯದಲ್ಲಿ 2024–25ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭಗೊಂಡು ಈಗಾಗಲೇ ಕೆಲವು ಖಾಸಗಿ ಶಾಲೆಗಳಲ್ಲಿ ಪ್ರವೇಶ ಪ್ರಕ್ರಿಯೆಯು ಪ್ರಾರಂಭಗೊಂಡಿದೆ. ಆದರೆ ರಾಜ್ಯದಲ್ಲಿರುವ ಅಧಿಕೃತ ಹಾಗೂ ಅಕ್ರಮ ಶಾಲೆಗಳ ಮಾಹಿತಿಯ ಕೊರತೆಯಿಂದಾಗಿ ಪೋಷಕರು ತಮ್ಮ ಮಕ್ಕಳನ್ನು ಅಂತಹ ಶಾಲೆಗಳಿಗೆ ಕಳುಹಿಸುವ ಸಾಧ್ಯತೆ ಇದೆ. ಹೀಗಾಗಿ ಸರ್ಕಾರ ಆದಷ್ಟು ಬೇಗ ಅಧಿಕೃತ ಹಾಗೂ ಅನಧಿಕೃತ ಶಾಲೆಗಳ ಪಟ್ಟಿಯನ್ನು ಹೊರತರುವುದು ಅವಶ್ಯವಿದೆ.

ಅನಧಿಕೃತ ಶಾಲೆಗಳ ಹಾವಳಿಗೆ ಕಡಿವಾಣ ಹಾಕಲು ಪರಿಣಾಮಕಾರಿ ಕ್ರಮವನ್ನು ಶಿಕ್ಷಣ ಇಲಾಖೆ ಕೈಗೊಳ್ಳಬೇಕಿದೆ. ಕೆಲವೊಂದು ಶಾಲೆಗಳು ಅನುಮತಿ ಇಲ್ಲದೆ ಮಾಧ್ಯಮ ಬೋಧನೆ ಮಾಡುತ್ತಿರುವುದು, ನೋಂದಣಿ ಇಲ್ಲದೆಯೇ ತರಗತಿಗಳನ್ನು ಉನ್ನತೀಕರಿಸುವುದು ಹಾಗೂ ಒಪ್ಪಿಗೆ ಪಡೆಯದೇ ಹೆಚ್ಚುವರಿ ವಿಭಾಗಗಳನ್ನು ಹೊಂದಿರುವುದು ಸೇರಿದಂತೆ ವಿವಿಧ ರೀತಿಯಲ್ಲಿ ನಿಯಮ ಉಲ್ಲಂಘನೆ ಮಾಡುತ್ತಿವೆ. ಇಂತಹ ಶಾಲೆಗಳ ಕುರಿತು ಪಾಲಕರಿಗೆ ಅಗತ್ಯ ಮಾಹಿತಿ ಇರಲೇಬೇಕಿದೆ. ತಮ್ಮ ಮಕ್ಕಳಿಗೆ ಪ್ರವೇಶ ಪಡೆಯಲು ಬಯಸುವ ಪೋಷಕರ ಅನುಕೂಲಕ್ಕಾಗಿ ಶಾಲೆಯ ಸ್ಥಿತಿಗತಿಯನ್ನು ಸೂಚಿಸುವ ಸೂಚನೆಯನ್ನು ಶಾಲೆಯ ಪ್ರವೇಶದ್ವಾರದಲ್ಲಿ ಪ್ರದರ್ಶಿಸುವುದನ್ನು ಎಲ್ಲಾ ಖಾಸಗಿ ಶಾಲೆಗಳಿಗೆ ಕಡ್ಡಾಯಗೊಳಿಸಬೇಕಿದೆ. ಇದು ಪೋಷಕರನ್ನು ಎಚ್ಚರಗೊಳಿಸುವುದಲ್ಲದೇ ಅವರ ಹಣ ಮತ್ತು ಸಮಯವನ್ನು ಉಳಿಸುತ್ತದೆ. ಅಲ್ಲದೇ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಒಂದೆರಡು ತಿಂಗಳ ಮೊದಲೇ ಅನಧಿಕೃತ ಶಾಲೆಗಳ ಬಗ್ಗೆ ಮಾಹಿತಿ ನೀಡಿದರೆ ಪಾಲಕರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಪ್ರತಿವರ್ಷ ನಾಯಿಕೊಡೆಗಳಂತೆ ಬೆಳೆಯುತ್ತಿರುವ ಅನಧಿಕೃತ ಹಾಗೂ ಅಕ್ರಮ ಶಾಲೆಗಳಿಗೆ ಕಡಿವಾಣ ಹಾಕಲು ಸರ್ಕಾರ ಕಠಿಣ ಕಾನೂನು ಹಾಗೂ ನಿಯಮವನ್ನು ಜಾರಿಗೆ ತರುವುದು ಅಗತ್ಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಭಾರತದ ಬೆಳವಣಿಗೆಯ ಹತ್ತಿಕ್ಕುವ ಹುನ್ನಾರ...!?

1962ರಲ್ಲಿ ನಡೆದ ಭಾರತ–ಚೀನಾ ಯುದ್ಧದಲ್ಲಿ ಹಿಮಾಲಯದ ಕಠೋರ ಚಳಿಯನ್ನು ತಡೆಯುವ ಬೆಚ್ಚನೆ ಉಡುಪುಗಳಿಲ್ಲದೇ, ಶಸ್ತ್ರಾಸ್ತ್ರಗಳೂ ಇಲ್ಲದೇ ಭಾರತೀಯ ಸೇನೆಯಲ್ಲಿ ಭಾರಿ ಪ್ರಮಾಣದ ಸಾವು–ನೋವು ಸಂಭವಿಸಿತ್ತು. ಭಾರತಕ್ಕೆ ಅಪಮಾನಕಾರಿ ಸೋಲಾಗಿತ್ತು. ಆ ಸಂದರ್ಭದಲ್ಲಿ **ಕವಿ ಪ್ರದೀಪ್‌ರು** ರಚಿಸಿ **ಲತಾ ಮಂಗೇಶ್ಕರ್** ಹಾಡಿದ **'ಹೈ ಮೇರೆ ವತನ್ ಕೆ ಲೋಗೋ'** ಹಾಡು ಚೀನಿ ಸೇನೆಯನ್ನು ಹಿಮ್ಮೆಟ್ಟಿಸಲು ಸೇನೆಗೆ ಅವಶ್ಯವಿದ್ದ ಆತ್ಮವಿಶ್ವಾಸವನ್ನು, ದೇಶದ ಜನರಲ್ಲಿ ದೇಶಭಕ್ತಿಯ ಕಿಚ್ಚನ್ನು ಹೊತ್ತಿಸಿತು.

ದೇಶದ ಭಾವನೆಯನ್ನು ಗಮನಿಸಿದ ಆಗಿನ ಸರಕಾರವು ದೇಶದ ಖಜಾನೆ ಬರಿದಾಗಿದೆ. ಸೇನೆ ಪ್ರತ್ಯಾಕ್ರಮಣ ಮಾಡಲು ಬೇಕಾದ ಶಸ್ತ್ರಾಸ್ತ್ರಗಳು, ಅವಶ್ಯಕ ವಸ್ತುಗಳನ್ನು, ಸಾಧನಗಳನ್ನು ಪೂರೈಸಲು ಉದಾರದೇಣಿಗೆ ನೀಡುವಂತೆ ದೇಶದ ಜನತೆಗೆ ಕರೆ ಕೊಟ್ಟಿತು. **ಆಗಿನ ಪ್ರಧಾನಿ ನೆಹರೂಗಿದ್ದ ಮನೋಭಾವದಂತೆ ಭಾರತೀಯರಿಗೆ ಈ ಭೂಮಿ ಕೇವಲ ಕಲ್ಲು ಮಣ್ಣುಗಳಿಂದ ಕೂಡಿದ ನಿರ್ಜೀವ ಭೂಭಾಗವಾಗಿರಲಿಲ್ಲ. ಭಾರತೀಯರು ಈ ಭೂಮಿಯನ್ನು ತಾಯಿ ಜಗನ್ಮಾತೆ ಎಂದು ಗೌರವಿಸುತ್ತಿದ್ದಾರೆ, ಪೂಜಿಸುತ್ತಿದ್ದಾರೆ.** ಜನಸಾಮಾನ್ಯರು ದೇಶದ ರಕ್ಷಣೆಗಾಗಿ ಗೌರವದ ಮರು ಸ್ಥಾಪನೆಗಾಗಿ ಎಲ್ಲ ತ್ಯಾಗ ಮಾಡಲು ಸಿದ್ಧರಾದರು. ಇದೇ ಸಂದರ್ಭದಲ್ಲಿ ಕೆಲವು ಕಾಂಗ್ರೆಸ್ ನಾಯಕರ ಪರಿವಾರದವರು ತಮ್ಮ ಚಿನ್ನಾಭರಣಗಳನ್ನು ದಾನ ಮಾಡುವ ದೃಶ್ಯಗಳು ಪತ್ರಿಕೆಗಳಲ್ಲಿ ಮೂಡಿಬಂದವು. ಇವರಿಂದ ಉತ್ತೇಜಿತರಾದ ಕೋಟಿ ಕೋಟಿ ಭಾರತೀಯರು ತಮ್ಮಲ್ಲಿದ್ದ ಹಣವನ್ನು ಚೂರುಪಾರು ಚಿನ್ನವನ್ನು ಸರಕಾರಕ್ಕೆ ನೀಡಿದರು. ಭಾರತೀಯ ಹೆಣ್ಣು ಮಕ್ಕಳು ಹುತ್ತದಲ್ಲಿರುವ ವಿಷ ಸರ್ಪವನ್ನು ಕೈಹಾಕಿ ಹೊರ ತೆಗೆಯುತ್ತಾರೆ ವಿನಃ ಕುತ್ತಿಗೆಯಲ್ಲಿರುವ ಚಿನ್ನಾಭರಣ ತೆಗೆದುಕೊಡಲು ಸಿದ್ಧರಿಲ್ಲ ಎಂದು ಪ್ರಚಲಿತವಾಗಿದ್ದ ಪ್ರತೀತಿಯನ್ನು ಸುಳ್ಳು ಮಾಡುವಂತೆ ಸಾವಿರ ಸಾವಿರ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ತಮ್ಮ ಚಿನ್ನಾಭರಣಗಳನ್ನು ದೇಶ ರಕ್ಷಣೆಗಾಗಿ ನೀಡಿದರು. ದೇಶದಲ್ಲಿ ಚೀನಾ ವಿರುದ್ಧ ಎದ್ದ ಜನಾಕ್ರೋಶವನ್ನು ಗಮನಿಸಿದ ಚೀನಿ ಅಧಿಕಾರಿಗಳು ಏಕಪಕ್ಷೀಯವಾಗಿ ಘೋಷಿಸಿದ ಕದನ ವಿರಾಮದಿಂದ ಯುದ್ಧ ಸಮಾಪ್ತಿಯಾಯಿತು. ಆನಂತರ ಜನಸಾಮಾನ್ಯರು ನೀಡಿದ ಹಣ ಚಿನ್ನಾಭರಣಗಳು ಏನಾದವು ಎಂದು ಯಾವುದೇ ಮಾಹಿತಿಗಳು ಸಿಗಲಿಲ್ಲ. ಆಗಿನ ಕಾಲದ ಕೆಲವು ವಿಪಕ್ಷ ರಾಜಕಾರಣಿಗಳು, ಹಿರಿಯರು ನೀಡಿದ ಮಾಹಿತಿಯಂತೆ ಕಾಂಗ್ರೆಸ್ಸಿಗರ ಮನೆಗಳಲ್ಲಿದ್ದ ತಿಜೋರಿಯೊಳಗೆ ಸೇರಿದ್ದವು ಎಂಬ ಸುದ್ದಿ ಹರಡಿತ್ತು. ಈ ರೀತಿ ಭಾರತೀಯರಲ್ಲಿದ್ದ ದೇಶಭಕ್ತಿಯ ಭಾವನೆಯನ್ನು ಕಾಂಗ್ರೆಸ್ಸಿಗರು ದುರುಪಯೋಗ ಮಾಡಿದ್ದರು.

ಕಾಂಗ್ರೆಸ್ ಮತ್ತೆ ದೇಶದ ಜನಸಾಮಾನ್ಯರ ಬದುಕು, ಭಾವನೆಗಳ ಮೇಲೆ ಚೆಲ್ಲಾಟವಾಡುವ ದುಸ್ಸಾಹಸಕ್ಕಿಳಿದಿದೆ ಎಂದು ಅನ್ನಿಸುತ್ತಿದೆ. ಕಾಂಗ್ರೆಸ್ ಪಕ್ಷದ ಘೋಷಣಾ ಪತ್ರದಲ್ಲಿನ **ಸಂಪತ್ತಿನ ಮರು ಹಂಚಿಕೆಯ** ಪ್ರಸ್ತಾಪವು ಚುನಾವಣಾ ಪ್ರಚಾರದ ಚಿತ್ರಣ ಬದಲಾಯಿಸಿದೆ. ರಾಹುಲ್ ಗಾಂಧಿಯವರು ಜನರ ಆಸ್ತಿ, ಸಂಪತ್ತನ್ನೆಲ್ಲಾ ಎಕ್ಸ್–ರೇ ಮಾಡಿ ಎಲ್ಲವನ್ನೂ ಮರು ಹಂಚಿಕೆ ಮಾಡುವುದಾಗಿ ಹೇಳುತ್ತಿದ್ದಾರೆ. ಈ ಹೇಳಿಕೆಯ ಮೂಲಕ **ರಾಹುಲ್ ಗಾಂಧಿ ಭಾರತದ ರಾಬಿನ್‌ಹುಡ್** ಆಗಲು ಹೊರಟಿದ್ದಾರೆ ಎಂದೆನಿಸುತ್ತಿದೆ. ರಾಹುಲ್ ಗಾಂಧಿಯವರ ಈ ಹೇಳಿಕೆ ಚುನಾವಣಾ ಪ್ರಚಾರದ ದಿಕ್ಕನ್ನೇ ಬದಲಾಯಿಸಿದೆ ಮೊದಲ ಸುತ್ತಿನ ಪ್ರಚಾರದಲ್ಲಿ 'ಇಂಡಿಯಾ' ಕೂಟದ ವಿಶೇಷವಾಗಿ ಕಾಂಗ್ರೆಸ್ ನಾಯಕರು ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಲ್ಲಿ ದೇಶದಲ್ಲಿ ಇದೇ ಕೊನೆಯ ಚುನಾವಣೆಯಾಗಲಿದೆ. ಮೋದಿಯವರು ಸಂವಿಧಾನವನ್ನು ಬದಲಾಯಿಸಲಿದ್ದಾರೆ. ದಲಿತರ ಮೀಸಲಾತಿಯನ್ನು ರದ್ದುಪಡಿಸಲಿ



ದ್ದಾರೆ ಎಂದು ನಿರಂತರವಾಗಿ ಆಕ್ರಮಣಕಾರಿಯಾಗಿ ಅಪಪ್ರಚಾರವನ್ನು ಮಾಡುತ್ತಿದ್ದರು. ಪ್ರಧಾನಿ ಮೋದಿ ಸಹಿತ ಬಿಜೆಪಿ ನಾಯಕರು ಈ ಅಪಪ್ರಚಾರಕ್ಕೆ ಸಮರ್ಪಕವಾಗಿ ಪ್ರತ್ಯುತ್ತರ ನೀಡಲಾಗದೇ ರಕ್ಷಣಾತ್ಮಕವಾಗಿ ಪ್ರತಿಕ್ರಿಯೆ ನೀಡುತ್ತಿದ್ದರು. ಆದರೆ ಕಾಂಗ್ರೆಸ್ ಆಸ್ತಿ ಮರು ಹಂಚಿಕೆಯ ಪ್ರಸ್ತಾಪ ಮಾಡುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿಯವರು ಆಕ್ರಮಣಕಾರಿಯಾಗಿ ಕಟುವಾದ ಟೀಕಾ ಪ್ರಹಾರದೊಂದಿಗೆ ಈಗ ಕಾಂಗ್ರೆಸ್ ಅನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ.

ಕಾಂಗ್ರೆಸ್‌ಗೆ ನೀವು ಅಧಿಕಾರ ನೀಡಿದರೆ ಜನಸಾಮಾನ್ಯರ ಬಳಿ ಇರುವ ಚಿನ್ನಾಭರಣಗಳನ್ನು, ಮಂಗಳಸೂತ್ರವನ್ನೂ (ಹಿಂದೂಗಳ) ಕಿತ್ತು ಬಾಂಗ್ಲಾದೇಶದಿಂದ, ಬರ್ಮಾದಿಂದ ಬರುತ್ತಿರುವ ಅಕ್ರಮ ನುಸುಳುಕೋರರು, ರೋಹಿಂಗ್ಯಾಗಳಿಗೆ, ಹೆಚ್ಚು ಮಕ್ಕಳಿರುವವರಿಗೆ ಹಂಚಲಿದೆ. ಕಾಂಗ್ರೆಸ್ ಪಕ್ಷವು ಬಹುಸಂಖ್ಯಾತ ಸಮಾಜದವರ ಸಂಪತ್ತಿನ ಮೇಲೆ, ಪಿತ್ರಾರ್ಜಿತ ಆಸ್ತಿ ಮೇಲೆ ಭಾರಿ ಪ್ರಮಾಣದ ತೆರಿಗೆ ವಿಧಿಸಲಿದೆ. ಪೋಷಕರು ತಮ್ಮ ಮಕ್ಕಳು, ಮೊಮ್ಮಕ್ಕಳು ಸುಖವಾಗಿರಬೇಕೆಂದು ಕಷ್ಟಪಟ್ಟು ಕೂಡಿಟ್ಟ ಆಸ್ತಿಯ ಬಹು ಪಾಲನ್ನು ಕಿತ್ತುಕೊಳ್ಳಲಿದೆ ಅಥವಾ ಭಾರಿ ಪ್ರಮಾಣದ ತೆರಿಗೆ ವಿಧಿಸಲಿದೆ ಎಂದು ಪ್ರಧಾನಿ ಮೋದಿಯವರು ದೇಶದ ಬಹುಸಂಖ್ಯಾತರನ್ನು ಎಚ್ಚರಿಸಿದ್ದಾರೆ.

> “ ಕಾಂಗ್ರೆಸ್‌ಗೆ ನೀವು ಅಧಿಕಾರ ನೀಡಿದರೆ ಜನಸಾಮಾನ್ಯರ ಬಳಿ ಇರುವ ಚಿನ್ನಾಭರಣಗಳನ್ನು, ಮಂಗಳಸೂತ್ರವನ್ನೂ (ಹಿಂದೂಗಳ) ಕಿತ್ತು ಬಾಂಗ್ಲಾದೇಶದಿಂದ, ಬರ್ಮಾದಿಂದ ಬರುತ್ತಿರುವ ಅಕ್ರಮ ನುಸುಳುಕೋರರು, ರೋಹಿಂಗ್ಯಾಗಳಿಗೆ, ಹೆಚ್ಚು ಮಕ್ಕಳಿರುವವರಿಗೆ ಹಂಚಲಿದೆ. ಕಾಂಗ್ರೆಸ್ ಪಕ್ಷವು ಬಹುಸಂಖ್ಯಾತ ಸಮಾಜದವರ ಸಂಪತ್ತಿನ ಮೇಲೆ, ಪಿತ್ರಾರ್ಜಿತ ಆಸ್ತಿ ಮೇಲೆ ಭಾರಿ ಪ್ರಮಾಣದ ತೆರಿಗೆ ವಿಧಿಸಲಿದೆ. ಪೋಷಕರು ತಮ್ಮ ಮಕ್ಕಳು, ಮೊಮ್ಮಕ್ಕಳು ಸುಖವಾಗಿರಬೇಕೆಂದು ಕಷ್ಟಪಟ್ಟು ಕೂಡಿಟ್ಟ ಆಸ್ತಿಯ ಬಹು ಪಾಲನ್ನು ಕಿತ್ತುಕೊಳ್ಳಲಿದೆ ಅಥವಾ ಭಾರಿ ಪ್ರಮಾಣದ ತೆರಿಗೆ ವಿಧಿಸಲಿದೆ ಎಂದು ಮೋದಿಯವರು ದೇಶದ ಬಹುಸಂಖ್ಯಾತರನ್ನು ಎಚ್ಚರಿಸಿದ್ದಾರೆ.

ಏನಿದು ಸಂಪತ್ತಿನ ಮೇಲೆ ಪಿತ್ರಾರ್ಜಿತ ಆಸ್ತಿ ಮೇಲೆ ತೆರಿಗೆ?

ರಾಹುಲ್ ಗಾಂಧಿಯವರ ಆಸ್ತಿ ಮರು ಹಂಚಿಕೆ ಹೇಳಿಕೆಯ ಬೆನ್ನಲ್ಲೇ ಸ್ಯಾಮ್ ಪಿತ್ರೋಡಾ ಇದನ್ನು ಬೆಂಬಲಿಸಿ ನೀಡಿದ ಹೇಳಿಕೆಗಳು ವಿವಾದದ ಕಿಚ್ಚು ಹೊತ್ತಿಸಿದೆ. ಸ್ಯಾಮ್ ಪಿತ್ರೋಡಾರು ತಂದೆಯ ಆಸ್ತಿ ಮಕ್ಕಳಿಗೆ ಸೇರಬೇಕೆಂದರೆ ಅದರ ಶೇ. 55ರಷ್ಟನ್ನು ಸರಕಾರಕ್ಕೆ ತೆರಿಗೆಯಾಗಿ ಪಾವತಿಸುವ ಕಾನೂನಿನ ಅವಶ್ಯಕತೆ ಇದೆ. ಇದೊಂದು ಕುತೂಹಲಕರ ತೆರಿಗೆ ಪದ್ಧತಿಯಾಗಿದ್ದು, ಭಾರತದಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕು ಎಂದಿದ್ದರು. ಸ್ಯಾಮ್ ಪಿತ್ರೋಡಾ ಸಾಮಾನ್ಯ ವ್ಯಕ್ತಿಯಲ್ಲ. ರಾಜೀವ್ ಗಾಂಧಿ ಕಾಲದಿಂದಲೂ ಇವರು ಗಾಂಧಿ ಪರಿವಾರಕ್ಕೆ ಅತ್ಯಾಪ್ತರು, ಪ್ರಮುಖ ಸಲಹೆಗಾರರಾಗಿದ್ದಾರೆ. ಹಿಂದೆ ಪ್ರಧಾನಿಯಾಗಿದ್ದ ಡಾ.ಮನಮೋಹನ್ ಸಿಂಗ್‌ರಿಗೂ ಸಲಹೆಗಾರರಾಗಿದ್ದರು. ಪ್ರಸ್ತುತ ಪಿತ್ರೋಡಾ ಪ್ರತಿಪಾದಿಸುತ್ತಿರುವ ಪಿತ್ರಾರ್ಜಿತ ಆಸ್ತಿ ಮೇಲಿನ ತೆರಿಗೆ ಗಮನಿಸುವಾಗ ಡಾ. ಸಿಂಗ್‌ರು ಹೇಳಿದ "ಸಂಪನ್ಮೂಲಗಳಲ್ಲಿ ಮೊದಲ ಹಕ್ಕು ಮುಸಲ್ಮಾನರಿಗಿರಬೇಕು ಎಂಬುದು ಸ್ಯಾಮ್‌ರ ಚಿಂತನೆಯ ಕೂಸು (Brain Child) ಎಂದೆನಿಸುತ್ತಿದೆ.

ಪಿತ್ರೋಡಾ ಪ್ರತಿಪಾದಿಸುವ ಈ ಕಾಲಸಂದ (Outdated) ಪಿತ್ರಾರ್ಜಿತ ಆಸ್ತಿ ತೆರಿಗೆ (Inheritance Tax) ಅಮೇರಿಕದ ಕೇವಲ ಆರು ರಾಜ್ಯಗಳಾದ ಕೆಂಟುಕಿ, ನೆಬ್ರಸ್ಕಾ, ನ್ಯೂಜೆರ್ಸಿ, ಪೆನ್ಸಿಲ್ವೇನಿಯಾ, ಮೇರಿಲ್ಯಾಂಡ್ ಮತ್ತು ಅಯೋವಾ ರಾಜ್ಯಗಳು ಮಾತ್ರ ಈ ತೆರಿಗೆಯನ್ನು ವಿಧಿಸುತ್ತಿವೆ. ಅಯೋವಾ ಈ ತೆರಿಗೆಯನ್ನು 2025ರ ವೇಳೆಗೆ ರದ್ದುಪಡಿಸಲಿದ್ದು, ಉಳಿದ ರಾಜ್ಯಗಳು ಈ ತೆರಿಗೆ ಪದ್ಧತಿ ತೆಗೆದು ಹಾಕಲು ಸಿದ್ಧವಾಗುತ್ತಿವೆ. ಸ್ಯಾಮ್‌ರ ಪ್ರಕಾರ ಸಂಪತ್ತಿನ ಮರುಹಂಚಿಕೆ ಎಂದರೆ ಜನರ ಆಸ್ತಿ ಕಸಿದು ಹಂಚುವುದಲ್ಲ. ಬದಲಿಗೆ ಶ್ರೀಮಂತರಾದ ಹಿಡಿಯಷ್ಟು ವ್ಯಕ್ತಿಗಳು ಸರಕಾರ ನಿಯಂತ್ರಿಸದಂತೆ ನೀತಿ ರೂಪಿಸುವುದು. ಶ್ರೀಮಂತರಾಗುವುದು ತಪ್ಪಲ್ಲ ಆದರೂ ಅದಕ್ಕೊಂದು ಮಿತಿ ಇರಬೇಕು. ಈ ಮಾದರಿ ತೆರಿಗೆ ಪದ್ಧತಿ ಅಮೇರಿಕ ಸಹಿತ ಕೆಲವು ಪ್ರಜಾಸತ್ತಾತ್ಮಕ ದೇಶಗಳಲ್ಲಿದೆ ಎನ್ನುತ್ತಾರೆ ಸ್ಯಾಮ್. ಮೇಲ್ನೋಟಕ್ಕೆ ಇದೊಂದು ಸಂಪೂರ್ಣ ಎಡಪಂಥೀಯ ವಿಚಾರಧಾರೆಯಾಗಿದೆ. ಆದರೆ ಸಂಪತ್ತಿಗೆ ಮಿತಿ ಹೇರುವುದು ಸಾಧ್ಯವೇ? ಎಂಬ ಬಗ್ಗೆ ಸ್ಪಷ್ಟತೆ



ಸ್ಯಾಮ್ ಪಿತ್ರೋಡಾ

ಇಲ್ಲ. ಉದಾಹರಣೆಗೆ ಓರ್ವನ ಸಂಪತ್ತು ಒಂದು ನೂರು ಮಿಲಿಯನ್ ಡಾಲರ್ ಆಗಿದ್ದರೆ ಆತನ ಮಕ್ಕಳು ಸರಕಾರಕ್ಕೆ ಶೇ.55 ರಷ್ಟು ಪಾವತಿಸಿದ ನಂತರವೇ ಉಳಿದ ಸಂಪತ್ತಿನ ಮೇಲೆ ಹಕ್ಕು ಬರುತ್ತದೆ. ಭಾರತದಲ್ಲಿ ಇದೇ ಮಾದರಿಯಲ್ಲಿ ಪ್ರಧಾನಿ ನೆಹರುರವರು 1953ರಲ್ಲಿ ಎಸ್ಟೇಟ್ ಡ್ಯೂಟಿ ಎಂಬ ತೆರಿಗೆಯನ್ನು ಹಾಕಿದ್ದರು.

ದೇಶದಲ್ಲಿದ್ದ ಎಸ್ಟೇಟ್ ಡ್ಯೂಟಿ

ಭಾರತದಲ್ಲಿ ಶ್ರೀಮಂತ–ಬಡವರ ಮಧ್ಯೆ ಭಾರಿ ಅಂತರವಿದೆ. ಇದನ್ನು ತೊಡೆದು ಹಾಕಲು 1953ರಲ್ಲಿ ಪ್ರಧಾನಿ ನೆಹರುರವರು ದೇಶದಲ್ಲಿ ಎಸ್ಟೇಟ್ ಡ್ಯೂಟಿ (ESTATE DUTY) ವಿಧಿಸಿದರು. ಆಗ ಒಂದು ಲಕ್ಷಕ್ಕೆ (ಈಗಿನ ಅಂದಾಜು ರೂ. 1.19 ಕೋಟಿ) ಶೇ.7.5ರಷ್ಟು ಪಿತ್ರಾರ್ಜಿತ ಆಸ್ತಿ ಮೇಲೆ ತೆರಿಗೆ ವಿಧಿಸಲಾಗಿತ್ತು. ರೂ. 20 ಲಕ್ಷ ಮೀರಿದರೆ ಶೇ.40 ಇದೇ ರೀತಿ ಶೇ.85ರವರೆಗೂ ತೆರಿಗೆ ವಿಧಿಸಲಾಗಿತ್ತು. ಇದರಿಂದ 1984–85ರವರೆಗೆ ಸಂಗ್ರಹವಾದ ತೆರಿಗೆ ಕೇವಲ ರೂ. 20 ಕೋಟಿ. (ಈಗಿನ ಪ್ರಕಾರ ರೂ. 218 ಕೋಟಿ) ಆಗಿತ್ತು. ಈ ಮಾದರಿ ತೆರಿಗೆಯಿಂದ ದೇಶದಲ್ಲಿ ಬೇನಾಮಿ ಸಂಪತ್ತು ಹೆಚ್ಚಾಗಿ ಕಪ್ಪು ಆರ್ಥಿಕತೆ ಸೃಷ್ಟಿಯಾಯ್ತು. 1957ರಲ್ಲಿ ಸಂಪತ್ತಿನ ತೆರಿಗೆ (WEALTH TAX) ವಿಧಿಸಿದರು. ಈ ರೀತಿ ಸಂಪತ್ತಿನ ಮರು ಹಂಚಿಕೆ, ಬಡತನ ನಿವಾರಣೆ ಹೆಸರಿನಲ್ಲಿ ವಿಧಿಸಿದ ಕಠಿಣ ಮಾದರಿಯ ತೆರಿಗೆಗಳು ಸಂಪೂರ್ಣ ವಿಫಲವಾದವು. ಇಂದಿರಾಗಾಂಧಿಯವರು ದೇಶದಲ್ಲಿನ ಬಡತನ ನಿವಾರಿಸಲು (ಗರೀಬಿ ಹಟಾವೋ) ಆದಾಯ ತೆರಿಗೆ ಪ್ರಮಾಣವನ್ನು ದಾಖಲೆಯ ಶೇ.97.75ರಷ್ಟು ಹಾಗೂ ವೆಲ್ತ್ ಟ್ಯಾಕ್ಸನ್ನು ಶೇ.3.5ರಷ್ಟು ಹೆಚ್ಚಿಸಿದರು. ಆದರೂ ಬಡತನದ ಪ್ರಮಾಣ ಕಡಿಮೆಯಾಗಲಿಲ್ಲ. ಅದರ ಬದಲು ಜನಸಂಖ್ಯೆ ವೃದ್ಧಿಯಾದಂತೆ ಬಡತನದ ಪ್ರಮಾಣ ದ್ವಿಗುಣಗೊಂಡಿತು.

1985ರಲ್ಲಿ ರಾಜೀವ್ ಗಾಂಧಿ ಸರಕಾರದಲ್ಲಿ ವಿತ್ತ ಮಂತ್ರಿಯಾಗಿದ್ದ ವಿ.ಪಿ.ಸಿಂಗ್‌ರು ಈ ತೆರಿಗೆಯಿಂದ ಬರುವ ಆದಾಯಕ್ಕಿಂತ ಸಂಗ್ರಹಿಸುವ ಖರ್ಚೇ ಅಧಿಕ ಎಂಬ ಕಾರಣ ನೀಡಿ ರದ್ದುಗೊಳಿಸಿದ್ದರು. ಆದರೆ ವಾಸ್ತವವೇ ಬೇರೆಯೇ ಇತ್ತು. ಪ್ರಧಾನಿ ಇಂದಿರಾಜಿ ಮರಣಾನಂತರ ತಮ್ಮ 1.75 ಲಕ್ಷ ಡಾಲರ್ ಮೌಲ್ಯದ ಆಸ್ತಿಯನ್ನು ಮೊಮ್ಮಕ್ಕಳಾದ ರಾಹುಲ್, ವರುಣ್ ಹಾಗೂ ಪ್ರಿಯಾಂಕ ಗಾಂಧಿಯವರಿಗೆ ನೀಡುವಂತೆ ವಿಲ್ ಮಾಡಿದ್ದರು. ಈ ಸಂಪತ್ತು ಉಳಿಸಿಕೊಳ್ಳಲು ಎಸ್ಟೇಟ್ ಡ್ಯೂಟಿಯನ್ನೇ ಕಾಂಗ್ರೆಸ್ ಸರ್ಕಾರ ರದ್ದುಪಡಿಸಿತ್ತು ಕಾಂಗ್ರೆಸ್‌ನ ಶಾಹಿ ಪರಿವಾರ ತಮ್ಮ ಸ್ವಾರ್ಥಕ್ಕಾಗಿ ಯಾವುದೇ ಮಟ್ಟಕ್ಕೆ ಇಳಿಯಬಲ್ಲದು ಎಂದು ತೋರಿಸಿಕೊಟ್ಟಿತು.



ಪಿತ್ರಾರ್ಜಿತ ಆಸ್ತಿ ತೆರಿಗೆ ಬಗ್ಗೆ ಅಭಿಪ್ರಾಯಗಳು

ಪ್ರಧಾನಿ ಮೋದಿಯವರ ಮಂತ್ರಿ ಮಂಡಲದಲ್ಲಿ ಸೇರ್ಪಡೆಯಾಗುವ ಮೊದಲು 2013ರಲ್ಲಿ ಫೋರ್ಬ್ಸ್ ಫಿಲಾಂ ತ್ರಪಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಯಂತ ಸಿನ್ಹಾರು ದೇಶದಲ್ಲಿ ಶೇ.50ರಿಂದ 55ರಷ್ಟು ಪಿತ್ರಾರ್ಜಿತ ಆಸ್ತಿ ತೆರಿಗೆ ವಿಧಿಸಿದರೆ ಕುಟುಂಬದತ್ತ ಉದ್ಯಮಿಗಳಿಗೂ ಹೊಸ ಉದ್ಯಮಿಗಳಿಗೂ ಸಮಾನ ಅವಕಾಶ ಸೃಷ್ಟಿಸಿದಂತಾಗುತ್ತದೆ. ಕುಟುಂಬ ದತ್ತ ಉದ್ಯಮಿಗಳು ತೆರಿಗೆ ತಪ್ಪಿಸಲು ಹೆಚ್ಚೆಚ್ಚು ದಾನಿಗಳಾಗುತ್ತಾರೆ (ಫಿಲಾಂತ್ರಫಿಸ್ಟ್) ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. 2018ರಲ್ಲಿ AIIMSನಲ್ಲಿ ನೀಡಿದ ಭಾಷಣದಲ್ಲಿ ಅರುಣ್ ಜೇಟ್ಲಿಯವರು ಅಮೆರಿಕದ ವಿವಿಗಳು, ಸಂಶೋಧನಾ ಕೇಂದ್ರಗಳು ಭಾರಿ ಪ್ರಮಾಣದಲ್ಲಿ ಸಂಪನ್ಮೂಲ ಹೊಂದಿ ಶ್ರೀಮಂತರಾಗಿರುವುದು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಇದಕ್ಕೆ ಕಾರಣ ಪಿತ್ರಾರ್ಜಿತ ಆಸ್ತಿ ತೆರಿಗೆ ಎಂದಿದ್ದರು. START UP ICON ಝಿರೋದಾ ಸ್ಥಾಪಕ ನಿಖಿಲ್ ಕಾಮತ್ ಅವರು INHERITANCE TAX ಮಾದರಿ ತೆರಿಗೆ ತಂದಲ್ಲಿ ಉದ್ಯಮಗಳು ಹೆಚ್ಚಲಿವೆ ಎಂದು ಅಭಿಪ್ರಾಯಪಟ್ಟಿದ್ದರು.

ಸಿನ್ಹಾ ಮತ್ತು ಜೇಟ್ಲಿಯವರು ರಾಜಕಾರಣಿಗಳಿಗಿಂತ ಹೆಚ್ಚಾಗಿ ರಾಜನೀತಿಜ್ಞರಾಗಿದ್ದರು. ಇವರು ಪ್ರತಿಯೊಂದು ವಿಚಾರದಲ್ಲಿ ಸಮಗ್ರ ಅಧ್ಯಯನದ ನಂತರವೇ ದೇಶಕ್ಕೆ ಉತ್ತಮವಾದ ಸಲಹೆ ನೀಡುವ ಸಾಮರ್ಥ್ಯದವರಾಗಿದ್ದಾರೆ.

ಸಂಪತ್ತಿನ ಎಕ್ಸ್‌ರೇ ಏನಿದರ ಅಂತರ್ಯ?

ವಿಶ್ವದ ಆರ್ಥಿಕತೆ ಕುಸಿಯುತ್ತಿದ್ದರೆ ಭಾರತದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿರುವುದು ಶಕ್ತ ರಾಷ್ಟ್ರಗಳಿಗೆ ಸಹಿಸಲಸಾಧ್ಯವಾಗಿದೆ. ಭಾರತದ ಆರ್ಥಿಕತೆಯ ವೇಗ ಕುಂಠಿತಗೊಳಿಸಿ ಶಾಶ್ವತವಾಗಿ ದುರ್ಬಲ ರಾಷ್ಟ್ರವಾಗಿಸಲು ಪ್ರಧಾನಿ ಮೋದಿಯವರು ಮತ್ತೆ ಅಧಿಕಾರಕ್ಕೇರದಂತೆ ತಡೆಯಲು ಚೀನಾ, ಅಮೆರಿಕದಂತಹ ಶಕ್ತ ರಾಷ್ಟ್ರಗಳು ಪ್ರಸಕ್ತ ಚುನಾವಣೆಯಲ್ಲಿ ಆಸಕ್ತಿ ತೋರಿದಂತೆ ಕಾಣುತ್ತಿದೆ. ಕಾಂಗ್ರೆಸ್ ಹಾಗೂ ವಿಪಕ್ಷಗಳು ಈ ಅಂತರರಾಷ್ಟ್ರೀಯ ಪಿತೂರಿಗೆ ಕೈಜೋಡಿಸಿದಂತೆ ಭಾಸವಾಗುತ್ತಿದೆ.

ಭಾರತೀಯರು ವಿಶೇಷವಾಗಿ ಮೋದಿಯವರಿಗೆ ದೃಢವಾಗಿ ಬೆಂಬಲಿಸುತ್ತಿರುವ ಮಧ್ಯಮ ವರ್ಗದಲ್ಲಿರುವ ಉಳಿತಾಯ ಪ್ರವೃತ್ತಿ ಮತ್ತು ಚಿನ್ನ ಖರೀದಿಸುವ ಹವ್ಯಾಸದಿಂದ ಭಾರತದ ಆರ್ಥಿಕತೆ ಬಲಿಷ್ಠವಾಗಿದೆ. ಅಮೆರಿಕದ ಸೆಂಟ್ರಲ್ ಬ್ಯಾಂಕ್ ಬಳಿ ಅತಿ ಹೆಚ್ಚು ಚಿನ್ನ ಅಂದರೆ 8133 ಟನ್ ಇದ್ದರೆ, ಜರ್ಮನಿ ಬಳಿ 3352 ಟನ್, ಇಟಲಿ 2452 ಟನ್, ಚೀನಾ ಬಳಿ 2262 ಟನ್ ಇದ್ದರೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಬಳಿ ಸುಮಾರು 812 ಟನ್ ಚಿನ್ನವಿದೆ. ಭಾರತವು ಪ್ರತಿ ವರ್ಷ ಸುಮಾರು 70 ಟನ್ ಚಿನ್ನ ಖರೀದಿಸುತ್ತದೆ. ಭಾರತೀಯರ ಬಳಿ ಜಗತ್ತಿನಲ್ಲೇ ಅತೀ ಹೆಚ್ಚು ಅಂದರೆ 24000 ದಿಂದ 26000 ಟನ್ ಚಿನ್ನವಿದೆ. ಇದರಲ್ಲಿ ಹಿಂದುಳಿದ ವರ್ಗದವರೇ ಶೇ.39ರಷ್ಟು ಚಿನ್ನ ಹೊಂದಿದ್ದಾರೆ. ರಾಹುಲ್ ಗಾಂಧಿಯವರು ಹೇಳಿದಂತೆ ದೇಶದ ಜನರ ಸಂಪತ್ತಿನ ಎಕ್ಸ್–ರೇ ಮಾಡಿ. ಪಿತ್ರೋಡಾ ಹೇಳಿದಂತೆ ಶೇ.50ರಿಂದ 55ರಷ್ಟು ಸರ್ಕಾರ ಪಡೆದು ಡಾ.ಮನಮೋಹನ್ ಸಿಂಗ್‌ರು ಹೇಳಿದಂತೆ ಅಧಿಕ ಮಕ್ಕಳನ್ನು ಹೊಂದಿರುವವರಿಗೆ ನೀಡುತ್ತಾರಾ? ಎಂಬ ಬಗ್ಗೆ ಕಾಂಗ್ರೆಸ್ ಸ್ಪಷ್ಟನೆ ನೀಡಬೇಕಾಗಿದೆ. ಇದರಿಂದ ಹಿಂದುಗಳು ಕೂಡಿಟ್ಟ ಸಂಪತ್ತು ಕಳೆದುಕೊಳ್ಳುವ ಸಂಭಾವ್ಯತೆ ಇದೆ. ಸಾಲು ಸಾಲು ಹಗರಣಗಳ ಇತಿಹಾಸವಿರುವ ಕಾಂಗ್ರೆಸ್‌ನಿಂದ ಈ ಸಂಪತ್ತಿನ ಮರು ಹಂಚಿಕೆಯಲ್ಲೂ ಇನ್ನೊಂದು ಭ್ರಷ್ಟಾಚಾರ ಹಗರಣ ನಿರೀಕ್ಷಿಸಬಹುದು. ಈ ಯೋಜನೆ ಇನ್ನೊಂದು ಮಗ್ಗಲಿನಿಂದ ವಿಶ್ಲೇಷಿಸಿದರೆ ಭವಿಷ್ಯದಲ್ಲಿ ಜಗತ್ತು ಡಾಲರ್ ಮೇಲಿನ ಅವಲಂಬನೆ ಕಡಿಮೆ ಮಾಡಿ ಚಿನ್ನದಲ್ಲೇ ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳಾಗುವ ಸ್ಥಿತಿ ಬಂದಲ್ಲಿ ಅಧಿಕ ಚಿನ್ನವಿರುವ ಭಾರತಕ್ಕೆ ಇದರಿಂದ ಲಾಭವಾಗುತ್ತದೆ. ಆದ್ದರಿಂದ ಈ ಮರು ಹಂಚಿಕೆಯ ಕಲ್ಪನೆಯು ಕಮ್ಯೂನಿಸ್ಟ್ ವಿಚಾರಧಾರೆಯಾಗಿದ್ದು, ಚೀನಾ ಪ್ರೇರಿತ ಹಾಗೂ ಅಮೆರಿಕದಿಂದ ನಿರ್ದೇಶಿತ ಯೋಜನೆಯಾಗಿದೆ ಎಂದರೆ ತಪ್ಪಾಗಲಾರದು. ಈ ಯೋಜನೆಯು ಭಾರತ ವನ್ನು ದುರ್ಬಲಗೊಳಿಸಿ ಅರಾಜಕತೆ ಸೃಷ್ಟಿಸುವುದಕ್ಕೆ ಕಾರಣವಾಗಲಿದೆ.

ವಿರೋಧ ಪಕ್ಷದ ಜಾತಿ ಆಧಾರಿತ ಸಮೀಕ್ಷೆಯು ಭವಿಷ್ಯದಲ್ಲಿ ದೇಶದಲ್ಲಿ ದ್ವೇಷ, ಅಪನಂಬಿಕೆ, ಅರಾಜಕತೆಯ ವಾತಾವರಣ ಸೃಷ್ಟಿಸುವ ಸಾಧ್ಯತೆಗಳಿವೆ. ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ದೇಶದ ಪ್ರತ್ಯೇಕ ಜಾತಿ ಮತ್ತು ಅಲ್ಪಸಂಖ್ಯಾತ ಗುಂಪುಗಳ ಜನಗಣತಿ ಮಾಡಿ ಅದರ ಆದಾಯ ಮತ್ತು ಸಂಪತ್ತಿನ ಮಾಹಿತಿ ಕಲೆ ಹಾಕುವ ಸಾಮಾಜಿಕ–ಆರ್ಥಿಕ ಸರ್ವೆ ನಡೆಸಿ ಸಾಮಾಜಿಕ ನ್ಯಾಯದ ಆಶ್ವಾಸನೆ ನೀಡಿದೆ. ರಾಹುಲ್ ಗಾಂಧಿಯವರು ಈ ಬಗ್ಗೆ ಜಿತ್ನಿ ಆಬಾದಿ ಉತ್ನಾ ಹಕ್ (ಜನಸಂಖ್ಯೆಗೆ ಸರಿಯಾಗಿ ಹಕ್ಕು) ಎಂಬ ಘೋಷಣೆ ಮಾಡಿದ್ದಾರೆ. ಅವರ ಪ್ರಣಾಳಿಕೆಯು ಜನಸಂಖ್ಯೆ ಆಧಾರದಲ್ಲಿ ಮರುಹಂಚಿಕೆ ಪ್ರತಿಪಾದಿಸುತ್ತದೆ. ಬೇರೆ ಯಾವುದೇ ಮಾನದಂಡ ಸೂಚಿಸಿಲ್ಲ.

ಇಂಡಿಯಾ ಮೈತ್ರಿಕೂಟದಲ್ಲಿ ಇನ್ನೊಂದು ಪಕ್ಷ ಬಿಹಾರದ ಲಾಲೂ ಪ್ರಸಾದ್ ಯಾದವ್‌ರ ಆರ್‌ಜೆಡಿಯು ದೇಶದಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಜಿತ್ನಿ ಆಬಾದಿ ಉತ್ನಾ ಆರಕ್ಷಣ್ (ಜನಸಂಖ್ಯೆಗನುಗುಣವಾಗಿ ಮೀಸಲಾತಿ) ಎಂದು ಘೋಷಿಸಿದೆ. ಅಂದರೆ ಹಿಂದೂ ಸಮಾಜವನ್ನು ವಿಭಜಿತ ರೂಪದಲ್ಲಿ ಗುರುತಿನ ಮೀಸಲಾತಿ ನೀಡುವ ಅಪಾಯಕಾರಿ ನೀತಿಯನ್ನು ಪ್ರಸ್ತಾಪಿಸಿದೆ.

ರಾಜಕೀಯ ಮುತ್ಸದ್ದಿಯಾಗಿರುವ ಪ್ರಧಾನಿ ಮೋದಿಯವರು ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೇರಲು ರೂಪಿಸಿರುವ ಈ ನೀತಿಗಳ ಹಿಂದಿನ ಅಪಾಯವನ್ನು ದೇಶದ ಮುಂದೆ ಬಿಚ್ಚಿಟ್ಟಿದ್ದಾರೆ. ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ದೇಶದ ಜನರನ್ನು ಬದುಕಿದ್ದಾಗಲೂ ಬದುಕಿನ ನಂತರವೂ ಲೂಟಿ ಹೊಡೆಯುವ (ಜಿಂದಗಿ ಸಾಥ್‌ಭೀ ಜಿಂದಗೀ ಕೇ ಬಾದ್ ಭೀ) ನೀತಿಯೊಂದು ಕಟುವಾಗಿ ಟೀಕಿಸಿದ್ದಾರೆ. ಆಸ್ತಿ ಮರು ಹಂಚಿಕೆಯನ್ನು ಬಹುಸಂಖ್ಯಾತ ಹಿಂದುಗಳ ಆಸ್ತಿಯನ್ನು ಕಿತ್ತು ನುಸುಳುಕೋರರಿಗೆ, ರೊಹಿಂಗ್ಯಾಗಳಿಗೆ ಹಂಚುವ ಮೂಲಕ ಹಿಂದು ಸಮಾಜವನ್ನು ದುರ್ಬಲಗೊಳಿಸುವ ನೀತಿ ಎಂದು ದೇಶದ ಜನತೆಗೆ ತಿಳಿಸಿದ್ದಾರೆ. ಜನಸಂಖ್ಯಾ ಆಧಾರಿತ ಮೀಸಲಾತಿಯಂತಿರುವ ಸಮಾಜವನ್ನು ಒಡೆಯುವ, ಒಂದು ಸಮಾಜವನ್ನು ಸಂಘಟಿತವಾಗಿ ತಮ್ಮ ಮತ ಬ್ಯಾಂಕ್ ಮಾಡುವ ಯೋಜನೆ ಎಂದು ದೇಶಕ್ಕೆ ತಿಳಿಸಿದ್ದಾರೆ. ಕಾಂಗ್ರೆಸ್‌ನ ಬಂಧು ವರ್ಗದ ತುಷ್ಟೀಕರಣದ ನೀತಿ ಅನೇಕ ಸಂದರ್ಭಗಳಲ್ಲಿ ದೃಢಪಟ್ಟಿದೆ. ಕಾಂಗ್ರೆಸ್ ನಾಯಕರು ಅಯೋಧ್ಯೆಗೆ ತೆರಳಲಿಲ್ಲ. ಮಧ್ಯ ಪ್ರದೇಶದ ಓರ್ವ ಕಾಂಗ್ರೆಸ್ ನಾಯಕರು ಒಬ್ಬರಿಗೆ ಇಬ್ಬರು ಹೆಂಡರಿದ್ದರೆ ಎರಡು ಲಕ್ಷ ನೀಡಲಾಗುವುದೆಂದರೆ, ಕರ್ನಾಟಕದಲ್ಲಿ ಇತರ ಉದ್ದೇಶಗಳಿಗೆ ಮೀಸಲಿಟ್ಟಿದ್ದ ಹಣವನ್ನು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ವರ್ಗಾಯಿಸಿರುವುದು ಬಹಿರಂಗಗೊಂಡಿದೆ. ಕಾಂಗ್ರೆಸ್ ಮೈತ್ರಿಕೂಟದ ನೀತಿಗಳ ಹಿಂದೆ ಅಡಗಿರುವ ಅಪಾಯವನ್ನು ಮೋದಿಯವು ದೇಶದ ಜನರ ಮುಂದೆ ಬಹಿರಂಗಪಡಿಸಿದ್ದಾರೆ. ಆದರೆ ಇದನ್ನು ಸಹಿಸದ ಕೆಲವು ಬುದ್ಧಿಜೀವಿಗಳು, ಜಾತ್ಯಾತೀತ ಅಂಕಣಕಾರರು ಎನಿಸಿದವರು ಮೋದಿಯವರು ಈ ಬಾರಿಯ ಚುನಾವಣೆಯನ್ನು ಹಿಂದೂ–ಮುಸ್ಲಿಂ ಎಂಬ ಕೋಮು ಆಧಾರದಲ್ಲಿ ವಿಭಜಿಸಿದ್ದಾರೆ ಎಂದು ಟೀಕಿಸಿದ್ದಾರೆ. ವಾಸ್ತವವಾಗಿ ಮೋದಿಯವರು ದೇಶದ ಜನರ ಮುಂದೆ ಸತ್ಯವನ್ನು ವಿಶದಪಡಿಸಿದ್ದಾರೆ. ಜನಸಾಮಾನ್ಯರು ಇವುಗಳನ್ನು ಅರ್ಥಮಾಡಿಕೊಂಡು ಮುಂದಿನ ಹಂತಗಳಲ್ಲಿ ಮತದಾನ ಮಾಡಬೇಕಾಗಿದೆ.

ಇಬ್ಬರು ಖದೀಮರ ಸೆರೆ: 8.5 ಲಕ್ಷ ಮೌಲ್ಯದ ಶ್ರೀಗಂಧದ ಮರ ವಶಕ್ಕೆ

ಮೈಸೂರು, ಮೇ 16(ಆರ್‌ಕೆ)–ಸಿಸಿಬಿ ಪೊಲೀಸರು ಕಾರ್ಯಾಚರಣೆ ವೇಳೆ ಖದೀಮರಿಬ್ಬರ ಬಂಧಿಸಿ, ಅವರು ಅಕ್ರಮವಾಗಿ ಸಾಗಿಸುತ್ತಿದ್ದ 8,50,000 ರೂ. ಮೌಲ್ಯದ 56 ಕೆ.ಜಿ. ಶ್ರೀಗಂಧ ಮರದ ತುಂಡುಗಳನ್ನು ವಶಕ್ಕೆ ಪಡೆದಿದ್ದಾರೆ. ಮೇ 8ರಂದು ಖಚಿತ ಮಾಹಿತಿ ಆಧರಿಸಿ ದಾಳಿ ಮಾಡಿ, ಮೈಸೂರಿನ ವಿಜಯನಗರ 4ನೇ ಹಂತದ ಬಾರ್‌ವೊಂದರ ಬಳಿ ಇಬ್ಬರು ಯುವಕರು ಬಜಾಜ್ ಪಲ್ಸರ್ ಬೈಕ್‌ನಲ್ಲಿ ಸಾಗಿಸುತ್ತಿದ್ದ ಶ್ರೀಗಂಧದ ತುಂಡುಗಳ ವಶಪಡಿಸಿಕೊಂಡು ಈ ಸಂಬಂಧ ಆ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.

ಆರೋಪಿಗಳನ್ನು ವಿಚಾರಣೆಗೊಳಪಡಿಸಿದ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನದಂತೆ ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಎ.ಮಾರುತಿ, ಸಿಬ್ಬಂದಿಗಳಾದ ಸಲೀಂ ಪಾಷ, ಟಿ.ಪ್ರಕಾಶ್, ಆರ್.ಮಹೇಶ್, ಎ.ಉಮಾಮಹೇಶ್, ಎಂ.ಆರ್.ಗಣೇಶ್, ಹೆಚ್.ಎನ್.ಶಿವಣ್ಣ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ತಿ.ನರಸೀಪುರ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳಿಗೆ ಮೆಟ್ರಿಕ್ ಪೂರ್ವ 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು www.sw.kar.nic.inನಲ್ಲಿ ಆನ್‌ಲೈನ್ ಮೂಲಕ ಮೇ 31ರೊಳಗೆ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸಂಬಂಧಪಟ್ಟ ವಿದ್ಯಾರ್ಥಿನಿಲಯ ಮೇಲ್ವಿಚಾರಕರು ಅಥವಾ ತಿ.ನರಸೀಪುರದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಆಲೂರು ಕೆರೆಯಲ್ಲಿ ಈಜಲು ಹೋಗಿ ನಾಲ್ವರು ಮಕ್ಕಳು ನೀರುಪಾಲು

ಹಾಸನ, ಮೇ 16– ಆಲೂರು ತಾಲೂಕಿನ ತಿಮ್ಮನಹಳ್ಳಿ ಗ್ರಾಮದಲ್ಲಿ ಗುರುವಾರ ಈಜಲು ಹೋಗಿದ್ದ ನಾಲ್ವರು ಮಕ್ಕಳು ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮೃತರನ್ನು ಹಾಸನದ ಮುತ್ತಿಗೆ ಗ್ರಾಮದ ದೊರೆಸ್ವಾಮಿ ಅವರ ಪುತ್ರ ಜೀವನ್ (13), ಸತೀಶ್ ಅವರ ಪುತ್ರ ಸಾತ್ವಿಕ್(11), ಚಂದ್ರು ಅವರ ಪುತ್ರ ವಿಶ್ವಾಸ್ (12) ಮತ್ತು ಸೋಮಶೇಖರ್ ಅವರ ಪುತ್ರ ಪೃಥ್ವಿ (12) ಎಂದು ಗುರುತಿಸಲಾಗಿದೆ.



ತನ್ನ ಸ್ನೇಹಿತರೊಂದಿಗೆ ಈಜಲು ಹೋಗಿದ್ದ ಮತ್ತೊಬ್ಬ ಸ್ನೇಹಿತ ಚಿರಾಗ್ ದಡ ತಲುಪುವಲ್ಲಿ ಯಶಸ್ವಿಯಾಗಿದ್ದಾನೆ. ಬಿಸಿಲ ತಾಪ ತಣಿಸಲು ಈಜಾಡಲು ತಿಮ್ಮನಹಳ್ಳಿ ಕೆರೆಗೆ ಹೋಗಿದ್ದಾಗ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ಜೀವನ್ ನೀರಿನಲ್ಲಿ ಮುಳುಗಿದ್ದು, ಅವನನ್ನು ರಕ್ಷಿಸುವಾಗ ಉಳಿದವರೂ ಮುಳುಗಿದರು.

ಗ್ರಾಮಸ್ಥರೊಬ್ಬರು ಮೃತದೇಹವೊಂದು ಕೊಚ್ಚಿ ಹೋಗುತ್ತಿರುವುದನ್ನು ಕಂಡಾಗ ಈ ಘಟನೆ ಬೆಳಕಿಗೆ ಬಂದಿದೆ. ಸುದ್ದಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಮಕ್ಕಳ ಪೋಷಕರ ಆಕ್ರಂದನ ಮನಕಲಕುವಂತಿತ್ತು. ಅಗ್ನಿಶಾಮಕ ಮತ್ತು ತುರ್ತು ಚಿಕಿತ್ಸಾ ವಿಭಾಗದ ಅಧಿಕಾರಿಗಳು ಮತ್ತು ಈಜುಗಾರರ ಸಹಾಯದಿಂದ ಪೊಲೀಸರು ಮೃತದೇಹಗಳನ್ನು ಹೊರತೆಗೆದಿದ್ದಾರೆ. ಘಟನಾ ಸ್ಥಳಕ್ಕೆ ಆಲೂರು–ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಭೇಟಿ ನೀಡಿ, ಪೋಷಕರಿಗೆ ಸಾಂತ್ವನ ಹೇಳಿದರು.

ಹುಬ್ಬಳ್ಳಿಯಲ್ಲಿ ಅಂಜಲಿ ಕೊಲೆ ಪ್ರಕರಣ

ಇನ್ಸ್‌ಪೆಕ್ಟರ್ ಸೇರಿ ಇಬ್ಬರ ಅಮಾನತು

ಹುಬ್ಬಳ್ಳಿ, ಮೇ 16– ಮದುವೆ ಪ್ರಸ್ತಾಪ ತಿರಸ್ಕರಿಸಿದ ಹಿನ್ನೆಲೆಯಲ್ಲಿ ಚಾಕುವಿನಿಂದ ಇರಿದು ಯುವತಿ ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪದ ಆರೋಪದ ಮೇಲೆ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಮಹಿಳಾ ಹೆಡ್ ಕಾನ್‌ಸ್ಟೆಬಲ್ ಅವರನ್ನು ಅಮಾನತುಗೊಳಿಸಲಾಗಿದೆ.

ಬೆಂಡಿಗೇರಿ ಪೊಲೀಸ್ ಇನ್ಸ್‌ಪೆಕ್ಟರ್ ಚಂದ್ರಶೇಖರ ಚಿಕ್ಕೋಡಿ ಹಾಗೂ ಠಾಣೆ ಮುಖ್ಯಪೇದೆ ರೇಖಾ ಅವರನ್ನು ಅಮಾನತುಗೊಳಿಸಿ ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ್ ಆದೇಶ ಹೊರಡಿಸಿದ್ದಾರೆ. 20 ವರ್ಷದ ಅಂಜಲಿ ಅಂಬಿಗೇರ್‌ಗೆ ಕೊಲೆ ಆರೋಪಿ 22 ವರ್ಷದ ವಿಶ್ವನಿಂದ ಜೀವ ಬೆದರಿಕೆ ಇರುವುದಾಗಿ ಅಂಜಲಿ ಕುಟುಂಬಸ್ಥರು ಪೊಲೀಸರಿಗೆ ದೂರು ನೀಡಿದ್ದರು. ಪೊಲೀಸರು ನಿರ್ಲಕ್ಷ್ಯ ವಹಿಸಿದ್ದರಿಂದ ಹತ್ಯೆ ನಡೆದಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಅಂಜಲಿ ಕುಟುಂಬಸ್ಥರು ಠಾಣೆಗೆ ಬಂದು ಹೋಗಿರುವುದಕ್ಕೆ ಠಾಣೆಯ ಸಿಸಿಟಿವಿ ದೃಶ್ಯಗಳು ಸಾಕ್ಷಿಯಾಗಿವೆ. ಹೀಗಾಗಿಯೇ ಇಬ್ಬರನ್ನೂ ಅಮಾನತು ಮಾಡಲಾಗಿದೆ ಎನ್ನಲಾಗಿದೆ. ಈ ಕುರಿತು ಡಿಸಿಪಿ ಶ್ರೇಣಿಯ ಅಧಿಕಾರಿಯೊಬ್ಬರು ನಡೆಸಿದ ಆಂತರಿಕ ವಿಚಾರಣೆ ಮತ್ತು ವರದಿ ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ಏ.18ರಂದು 23 ವರ್ಷದ ನೇಹಾ ಹಿರೇಮಠ ಅವರನ್ನು ಕಾಲೇಜು ಆವರಣದಲ್ಲಿ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ನೇಹಾ ಹಿರೇಮಠ ಸ್ಥಿತಿಯೇ ನಿನಗೂ ಬರಲಿದೆ ಎಂದು ಆರೋಪಿ, ಅಂಜಲಿಗೆ ಬೆದರಿಕೆ ಹಾಕಿದ್ದ ಎಂದು ಅಂಜಲಿ ಕುಟುಂಬದವರು ಪೊಲೀಸರಿಗೆ ದೂರು ನೀಡಿದ್ದರು.

ಕೇರಳದಲ್ಲಿ ವೆಸ್ಟ್‌ನೈಲ್ ಜ್ವರದ ಹಾವಳಿ

ಬಾವಲಿ ಚೆಕ್‌ಪೋಸ್ಟ್‌ನಲ್ಲಿ ತೀವ್ರ ತಪಾಸಣೆ



ಕರ್ನಾಟಕ–ಕೇರಳ ಗಡಿಭಾಗದ ಬಾವಲಿ ಚೆಕ್‌ಪೋಸ್ಟ್ ಬಳಿ ಆರೋಗ್ಯ ಇಲಾಖೆ ಅಧಿಕಾರಿಗಳು ಗಡಿದಾಟುವವರ ತಪಾಸಣೆ ನಡೆಸಿದರು.

ಮೈಸೂರು, ಮೇ 16 (ಆರ್‌ಕೆ)– ಕೇರಳದಲ್ಲಿ ವೆಸ್ಟ್‌ನೈಲ್ ಜ್ವರ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಗಡಿಭಾಗದ ಬಾವಲಿ ಚೆಕ್‌ಪೋಸ್ಟ್‌ನಲ್ಲಿ, ಗಡಿದಾಟುವವರನ್ನು ತೀವ್ರ ತಪಾಸಣೆಗೊಳಪಡಿಸಿದ್ದಾರೆ.

ಹಕ್ಕಿ ಜ್ವರದ ನಂತರ ಇದೀಗ ಕೇರಳದಲ್ಲಿ ವೆಸ್ಟ್‌ನೈಲ್ ಜ್ವರ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಅಲ್ಲಿಂದ ಬರುವ ವಾಹನಗಳನ್ನು ತಡೆದು ಪ್ರಯಾಣಿಕರ ಆರೋಗ್ಯ ತಪಾಸಣೆ ಮಾಡುತ್ತಿರುವ ಅಧಿಕಾರಿಗಳು, ಜ್ವರದ ಲಕ್ಷಣ ಕಂಡು ಬಂದಲ್ಲಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಕೊಡಿಸಲು ವ್ಯವಸ್ಥೆ ಮಾಡಲಾಗಿದೆ.

ಹೆಚ್.ಡಿ.ಕೋಟೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಕುಟುಂಬ ಕಲ್ಯಾಣಾಧಿಕಾರಿ ಡಾ.ಗೋಪಿನಾಥ್ ಹಾಗೂ ಸಿಬ್ಬಂದಿ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಕಾರ್ಯಾಚರಣೆ ನಡೆಸಿ ಕೇರಳದಿಂದ ಬರುವ ವಾಹನಗಳ ಮೇಲೆ ನಿಗಾ ಇರಿಸಿ ಪ್ರಯಾಣಿಕರ ಆರೋಗ್ಯ ತಪಾಸಣೆ ಮಾಡಿಸಿದರು. ವೆಸ್ಟ್‌ನೈಲ್ ಜ್ವರ ಸೊಳ್ಳೆಯಿಂದ ಹರಡುವ ಏಕತಂತು ಆರ್‌ಎನ್‌ಎ ವೈರಸ್ ಆಗಿದ್ದು, ಫ್ಲೇವಿ ವೈರಸ್ ಮತ್ತು ಜಪಾನೀಸ್ ಎನ್ಸಿಫಾಲಿಟಿಸ್ ಹಾಗೂ ಹಳದಿ ಜ್ವರ ಉಂಟುಮಾಡುವ ವೈರಸ್‌ಗಳಿಗೆ ಸಂಬಂಧಪಟ್ಟದ್ದಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಕ್ಯೂಲೆಕ್ಸ್ ಜಾತಿಯ ಸೊಳ್ಳೆಗಳು ಈ ವೈರಸ್ ಅನ್ನು ಪಕ್ಷಿ, ಪ್ರಾಣಿಗಳು ಹಾಗೂ ಮನುಷ್ಯರಿಗೆ ಹರಡಿಸುತ್ತವೆ. ಅಧಿಕ ಜ್ವರ, ತಲೆನೋವು, ಕುತ್ತಿಗೆ ಬಿಗಿತ, ಸ್ನಾಯು ದೌರ್ಬಲ್ಯ, ಪಾರ್ಶ್ವವಾಯು ಲಕ್ಷಣಗಳು ಕಂಡುಬರುವುದರಿಂದ ಸಾರ್ವಜನಿಕರು ಎಚ್ಚರದಿಂದಿರಬೇಕೆಂದು ವೈದ್ಯರು ಸಲಹೆ ನೀಡಿದ್ದಾರೆ. ವೆಸ್ಟ್‌ನೈಲ್ ಜ್ವರದ ಹಿನ್ನೆಲೆಯಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಕಟ್ಟೆಚ್ಚರ ವಹಿಸಿದ್ದು, ರೋಗಲಕ್ಷಣ ಕಂಡುಬಂದರೆ ಹತ್ತಿರದ ಆರೋಗ್ಯ ಕೇಂದ್ರಕ್ಕೆ ತೆರಳಿ ವೈದ್ಯರ ಸಲಹೆ ಪಡೆಯುವಂತೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ತಿಳಿಸಿದ್ದಾರೆ.


ಎನ್.ಬೇಗೂರು ಬಳಿ ಹುಲಿ ಕಳೇಬರ ಪತ್ತೆ



ಮೈಸೂರು, ಮೇ 16(ಆರ್‌ಕೆ)– ಬಂಡೀಪುರ ಹುಲಿ ಯೋಜನೆಯ ಹೆಡಿಯಾಲ ಉಪವಿಭಾಗ ವ್ಯಾಪ್ತಿಯ ಎನ್.ಬೇಗೂರು ಸಮೀಪ ಪೊದೆಯಲ್ಲಿ ಹುಲಿ ಕಳೇಬರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಹೆಡಿಯಾಲ ಉಪ ವಿಭಾಗದ ಅರಣ್ಯ ಸಿಬ್ಬಂದಿ ಗಸ್ತಿನಲ್ಲಿದ್ದಾಗ ಅಲ್ಲಿನ ಟೈಗರ್ ರಸ್ತೆಯ ಹುಣಸೆಮರದ ಬಳಿ ಕಳೇಬರ ಮೇ 15ರಂದು ಮಧ್ಯಾಹ್ನ ಪತ್ತೆಯಾಗಿದ್ದು, 4 ವರ್ಷ ವಯಸ್ಸಿನ ಹುಲಿ ಎಂದು ತಿಳಿದು ಬಂದಿದೆಯಾದರೂ, ಸಂಪೂರ್ಣ ಕೊಳೆತಿರುವುದರಿಂದ ಲಿಂಗ ಗುರುತಿಸಲು ಸಾಧ್ಯವಾಗಿಲ್ಲ.

ಕಾಡಿನಲ್ಲಿ ವನ್ಯಜೀವಿಯೊಂದಿಗೆ ಕಾದಾಟದಿಂದಾಗಿ 12ರಿಂದ 15 ದಿನಗಳ ಹಿಂದೆ ಹುಲಿ ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಇದರ ಅಂಗಾಂಗದ ಭಾಗ ಸಂಗ್ರಹಿಸಿ ವಿಧಿ–ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕಳೇಬರದ ಅಂತ್ಯಕ್ರಿಯೆ ನಡೆಸಲಾಯಿತು. ಅರಣ್ಯಾಧಿಕಾರಿಗಳಾದ ಎಸ್.ಪ್ರಭಾಕರನ್, ಜಿ.ರವೀಂದ್ರ, ಡಿ.ಮಂಜುನಾಥ್, ಬಿ.ಬಿ.ಅಮೃತೇಶ್ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಮೇ 25ರಂದು ಭ್ರಮರ ಟ್ರಸ್ಟ್‌ನಿಂದ 'ಪ್ರೊ.ಜಿ.ಟಿ.ನಾರಾಯಣ ರಾವ್ ಅತ್ಯುತ್ತಮ ಯುವ ವಾದ್ಯಗಾರ ಪ್ರಶಸ್ತಿ' ಪ್ರದಾನ ಸಮಾರಂಭ



ಪ್ರೊ.ನಾರಾಯಣ ರಾವ್

ಮೈಸೂರು,ಮೇ 16(ಪಿಎಂ)– ವೈ.ಟಿ. ಮತ್ತು ಮಾಧುರಿ ತಾತಾಚಾರಿಯವರ ಭ್ರಮರ ಟ್ರಸ್ಟ್ ವತಿಯಿಂದ ಮೇ 25ರಂದು 'ಪ್ರೊ.ಜಿ.ಟಿ.ನಾರಾಯಣ ರಾವ್ ಅತ್ಯುತ್ತಮ ಯುವ ವಾದ್ಯಗಾರ ಪ್ರಶಸ್ತಿ'ಯನ್ನು ವಿದ್ವಾನ್ ಕೇಶವ್ ಮೋಹನ್‌ಕುಮಾರ್ ಅವರಿಗೆ ಪ್ರದಾನ ಮಾಡಲಾಗುತ್ತಿದೆ. ಮೈಸೂರಿನ ಗೋಕುಲಂ 3ನೇ ಹಂತದ ಶ್ರೀಕೃಷ್ಣ ಗಾನಸಭಾದಲ್ಲಿ ಅಂದು ಸಂಜೆ 6ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಯಾಗಿ ವಿದುಷಿ ಕೋವಿಲಾಡಿ ಕಲಾ ಅವರು ಪಾಲ್ಗೊಳ್ಳಲಿದ್ದು, ಗೌರವ ಅತಿಥಿಯಾಗಿ ರೋಟೇರಿಯನ್ ಶ್ರೀಧರ ರಾಜ್ ಅರಸ್ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ವಿದ್ವಾನ್ ರಾಜಗೋಪಾಲ್ ಭಾಗವತ್ (ಗಾಯನ), ವಿದ್ವಾನ್ ಎಂ.ಕೇಶವ ಮೋಹನ್‌ಕುಮಾರ್ (ಪಿಟೀಲು), ವಿದ್ವಾನ್ ಪಿ.ಎಸ್.ಶ್ರೀಧರ್ (ಮೃದಂಗ) ಮತ್ತು ವಿದ್ವಾನ್ ವಿ.ಎಸ್.ರಮೇಶ್ (ಮೋರ್ಸಿಂಗ್) ಅವರಿಂದ ದತ್ತಿ ಸಂಗೀತ ಕಛೇರಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಮೈಸೂರಲ್ಲಿ ಉದ್ಯೋಗ ಮೇಳ

ಮೈಸೂರು, ಮೇ 16(ಜಿಎ)–ಮೈಸೂರಿನ ಜೆ.ಪಿ.ನಗರದಲ್ಲಿರುವ ಹಿಂದುಸ್ತಾನ್ ಕಾಲೇಜಿನ ತರಬೇತಿ ಮತ್ತು ಉದ್ಯೋಗ ಮಾರ್ಗದರ್ಶಿ ಕೋಶದ ವತಿಯಿಂದ ಮೇ 17ರ ಬೆಳಗ್ಗೆ 9.30ಕ್ಕೆ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಾಶಾಸ್ತ್ರ ವಿಭಾಗದ ಮುಖ್ಯಸ್ಥ ವಿ.ಈಶ್ವರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2018ರಿಂದ 23ರ ನಡುವೆ ತೇರ್ಗಡೆ ಹೊಂದಿರುವ, ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಅಂತಿಮ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ, ಸ್ನಾತಕೋತ್ತರ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಈ ಮೇಳದಲ್ಲಿ ಪ್ರಾಧಾನ್ಯತೆ ನೀಡಲಾಗಿದ್ದು, ಉಚಿತ ನೋಂದಣಿ ಇದೆ. 15ಕ್ಕೂ ಹೆಚ್ಚು ಪ್ರಮುಖ ಸಂಸ್ಥೆಗಳು ಭಾಗವಹಿಸಲಿದ್ದು, ಆಸಕ್ತಿಯುಳ್ಳವರು ಅಗತ್ಯ ದಾಖಲಾತಿಗಳೊಡನೆ ಆಗಮಿಸಬೇಕು. ಮಾಹಿತಿಗೆ 9886638996, 9731145682 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ವಿಶೇಷಾಧಿಕಾರಿ ಎಬೆಲ್ ಮ್ಯಾಥ್ಯು, ಕನ್ನಡ ವಿಭಾಗದ ಪ್ರಾಧ್ಯಾಪಕ ಚಂದ್ರಮೋಹನ್, ಕಂಪ್ಯೂಟರ್ ವಿಜ್ಞಾನ ವಿಭಾಗದ ಎಸ್.ವಿನಂತಿ ಉಪಸ್ಥಿತರಿದ್ದರು.

ಮೈಸೂರಲ್ಲಿ ವಾಲ್ಮೀಕಿ ಶ್ರೀಗಳು



ಕಾರ್ಯಕ್ರಮದ ನಿಮಿತ್ತ ಮೈಸೂರು ನಗರಕ್ಕೆ ಆಗಮಿಸಿದ್ದ ರಾಜನಹಳ್ಳಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಭೇಟಿ ಮಾಡಿ, ಆಶೀರ್ವಾದ ಪಡೆದರು. ಈ ವೇಳೆ ರೈಲ್ವೆ ಅಭಿಯಂತರ ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಲೋಕಸಭಾ ಕ್ಷೇತ್ರ

ಮುಡಾ ಅಧ್ಯಕ್ಷ ಕೆ.ಮರೀಗೌಡರ ವಿಶ್ವಾಸ



ಮೈಸೂರು, ಮೇ 16– ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದು, ಮೈಸೂರು–ಕೊಡಗು ಹಾಗೂ ಚಾಮರಾಜನಗರದ ಕಾಂಗ್ರೆಸ್ ಅಭ್ಯರ್ಥಿಗಳಾದ ಎಂ.ಲಕ್ಷ್ಮಣ್ ಹಾಗೂ ಸುನೀಲ್‌ಬೋಸ್ ಜಯಭೇರಿ ಬಾರಿಸಲಿದ್ದಾರೆಂದು ಮುಡಾ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು.

ಮುಡಾ ಕಚೇರಿಯಲ್ಲಿ ಗುರುವಾರ ಮೈಸೂರು ತಾಲೂಕು ಕೈಗಾರಿಕಾ ಸಹಕಾರ ಸಂಘದ ವತಿಯಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2013ರಿಂದ 2018ರವರೆಗೆ ಜನರಿಗೆ ನೀಡಿದ ಕಾರ್ಯಕ್ರಮಗಳು, ಈಗ ಜಾರಿಗೊಳಿಸಿರುವ 5 ಜನಪರ ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲುವಿನತ್ತ ಕೊಂಡೊಯ್ಯಲಿದ್ದು ರಾಜ್ಯದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವ ಪಕ್ಷವಾಗಿದೆ. ಸಾಮಾಜಿಕ ನ್ಯಾಯದಡಿಯಲ್ಲಿ ಸಂವಿಧಾನದ ಆಶಯದಂತೆ ಬಸವಣ್ಣ ಅವರ ತತ್ವ ಸಿದ್ಧಾಂತಗಳಿಗೆ ಅನುಗುಣವಾಗಿ ಸಿದ್ದರಾಮಯ್ಯರವರು ಅಧಿಕಾರ ನಡೆಸುತ್ತಿದ್ದಾರೆ. ಆದ್ದರಿಂದ ರಾಜ್ಯದ ಬಡವರು ನೆಮ್ಮದಿಯಾಗಿದ್ದಾರೆ. ಬಿಜೆಪಿ ಕೋಮುವಾದದ ವಿಷಬೀಜ ಬಿತ್ತುತ್ತ ಹಿಂದು–ಮುಸ್ಲಿಂ ಎಂದು ಭೇದಭಾವ ಮಾಡುತ್ತ, ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಸುಳ್ಳು ಭರವಸೆಗಳನ್ನು ನೀಡುತ್ತಾ ಬಂದಿದೆ. ಈ ಬಾರಿ ಜನ ಅದಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮೈಸೂರು ತಾಲೂಕು ಕೈಗಾರಿಕಾ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್.ಶಿವಣ್ಣ, ಕಾರ್ಯದರ್ಶಿ ಮಂಜುನಾಥ್, ನಿರ್ದೇಶಕರಾದ ಚಿಕ್ಕಣ್ಣಗೌಡ, ನಂಜಪ್ಪ, ನಿಜಲಿಂಗಪ್ಪ, ರಾಜಶೇಖರ್, ಲಕ್ಷ್ಮಿ, ಸುನಂದಮ್ಮ, ನಾಡನಹಳ್ಳಿ ರವಿ, ಹೆಳವರಹುಂಡಿ ಸೋಮು, ಧನಗಳ್ಳಿ ಬಸವರಾಜು, ಬಿ.ರವಿ, ಪ್ರಕಾಶ್, ಸಣ್ಣಸ್ವಾಮಿ, ಹೂಟಗಳ್ಳಿ ಮಹೇಶ, ನಾಗರಾಜ್ ಹಾಜರಿದ್ದರು.

ಮೈಸೂರು ಮಿತ್ರ ಶುಕ್ರವಾರ 17 ಮೇ 2024

ಅರಣ್ಯ ಇಲಾಖೆ-ಹೆದ್ದಾರಿ ಪ್ರಾಧಿಕಾರದ ನಡುವೆ ತಿಕ್ಕಾಟ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಅರ್ಧಕ್ಕೆ ನಿಂತ ವನ್ಯಜೀವಿ ಕಾರಿಡಾರ್ ಕಾಮಗಾರಿ

ಕಾಡು ಪ್ರಾಣಿಗಳಿಗೆ ಓಡಾಡಲು ತೊಡಕು, ಹೆದ್ದಾರಿಗೆ ಬಂದು ಪ್ರಾಣಿಗಳ ಸಾವು



ಅರ್ಧಕ್ಕೆ ನಿಂತಿರುವ ಬೆಂಗಳೂರು-ಮೈಸೂರು ಹೆದ್ದಾರಿಯ ಫ್ಲೈಓವರ್ ಕಾಮಗಾರಿ

ವಿನಯ್ ಕಾರೇಕುರ

ಶ್ರೀರಂಗಪಟ್ಟಣ, ಮೇ 16–ಮೈಸೂರು-ಬೆಂಗಳೂರು ನೂತನ ಹೆದ್ದಾರಿ ಉದ್ಘಾಟನೆಗೊಂಡು ಒಂದು ವರ್ಷವೇ ಕಳೆದರೂ ಹೆದ್ದಾರಿಯಲ್ಲಿ ವನ್ಯಜೀವಿಗಳು ಓಡಾಟಕ್ಕಾಗಿ ನಿರ್ಮಾಣ ವಾಗಬೇಕಿದ್ದ ವನ್ಯ ಜೀವಿಗಳ ಅಂಡರ್ ಪಾಸ್ ಹಾಗೂ ಫ್ಲೈಓವರ್(ಮೇಲ್ ಸೇತುವೆ) ಕಾಮಗಾರಿ ಅರ್ಧಕ್ಕೆ ನಿಂತಿದೆ. ಹೆದ್ದಾರಿ ಗುತ್ತಿಗೆದಾರನಾಗಲಿ, ಮೈ-ಬೆಂ ಹೆದ್ದಾರಿ ಪ್ರಾಧಿಕಾರ ವಾಗಲಿ ಅಥವಾ ಅರಣ್ಯ ಇಲಾಖೆಯಾಗಲಿ ತಲೆಕೆಡಿಸಿಕೊಳ್ಳದಿರುವುದು ವನ್ಯ ಜೀವಿಗಳಿಗೆ ಕಂಟಕವಾಗಿ ಪರಿಣಮಿಸಿದ್ದು, ಪ್ರಾಣಿ ಪ್ರಿಯರಲ್ಲಿ ಆಕ್ರೋಶವನ್ನುಂಟುಮಾಡಿದೆ.

ಬೆಂಗಳೂರು-ಮೈಸೂರು ನಡುವಿನ ಅಂತರವನ್ನು ಕಡಿಮೆ ಮಾಡಿರುವ ದಶ ಪಥ ರಸ್ತೆ ವನ್ಯ ಜೀವಿಗಳ ಪಾಲಿಗೆ ಕಂಟಕ ವಾಗಬಾರದು ಎನ್ನುವ ಕಾರಣಕ್ಕೆ ಹೆದ್ದಾರಿ ಕಾಮಗಾರಿ ವೇಳೆ ಮಂಡ್ಯ ಜಿಲ್ಲೆಯ ಶ್ರೀರಂಗ ಪಟ್ಟಣ ತಾಲೂಕಿನ ಕೆಬ್ಬೆಹಳ್ಳ ಬಳಿ ಇರುವ ಕಿರು ಅರಣ್ಯದಿಂದ ಪ್ರಾಣಿಗಳು ರಸ್ತೆ ದಾಟಲು ಅನುಕೂಲ ಕಲ್ಪಿಸುವ ಸಲುವಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿ ಕಾರದ ವತಿಯಿಂದ 8.96 ಕೋಟಿ ವೆಚ್ಚ ದಲ್ಲಿ (ಅನಿಮಲ್ ಓವರ್ ಪಾಸ್) ಅಂಡರ್ ಪಾಸ್ ಹಾಗೂ ಫ್ಲೈಓವರ್(ಮೇಲ್ ಸೇತುವೆ) ಗಳನ್ನು ನಿರ್ಮಾಣ ಮಾಡಲು ಪ್ರಾಧಿಕಾರ ಮುಂದಾಗಿತ್ತು. ಶೇ.60 ರಷ್ಟು ಕಾಮಗಾರಿ ನಡೆದಿದ್ದು ವರ್ಷಗಳೇ ಕಳೆದರೂ ಕೂಡ ಇನ್ನೂ ಈ ಕಾಮಗಾರಿ ಪೂರ್ಣವಾಗದೆ ಇರುವುದರಿಂದ ಈ ಭಾಗದ ಕಾಡು ಪ್ರಾಣಿಗಳಿಗೆ ಮಾರಕವಾಗಿದೆ.

ಹಿಂದಿನಿಂದಲೂ ಈ ಭಾಗದಲ್ಲಿ ಪ್ರಾಣಿ ಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆ ದಾಟುತ್ತಿದ್ದವು, ಆದರೆ ದಶ ಪಥ ರಸ್ತೆ ಕಾಮಗಾರಿ ಪ್ರಾರಂಭವಾಗಿ ರಸ್ತೆಯ ಎರಡೂ ಬದಿಯಲ್ಲಿ ಬೇಲಿ ನಿರ್ಮಾಣ ಮಾಡಿರುವುದರಿಂದ ಈಗ ಪ್ರಸ್ತುತ ಪ್ರಾಣಿ ಗಳು ಹೆದ್ದಾರಿಯನ್ನೇ ದಾಟಲು ಮುಂದಾ ಗುತ್ತಿವೆ. ಇದರ ಪರಿಣಾಮ ಕೆಲ ಪ್ರಾಣಿ ಗಳು ವೇಗವಾಗಿ ಚಲಿಸುವ ವಾಹನ ಗಳಿಗೆ ಸಿಲುಕಿ ಸ್ಥಳದಲ್ಲೇ ಅಸು ನೀಗು ತ್ತಿರುವುದು ಕಂಡುಬಂದಿದೆ.

ಈ ಕಾರಿಡಾರ್ ಫ್ಲೈಓವರ್ (ಮೇಲ್ ಸೇತುವೆ) ಸುಮಾರು 100 ಮೀಟರ್ ಉದ್ದವಿದ್ದು ಸುಮಾರು 20 ಅಡಿ ಅಗಲ ವಿದೆ, ಹಾಗೂ 30 ಅಡಿ ಅಗಲ 100 ಅಡಿ ಅಗಲದ ಅಂಡರ್ ಪಾಸ್‌ನಲ್ಲಿ ಚಿರತೆ, ಕರಡಿ, ಜಿಂಕೆ, ಕಾಡು ಹಂದಿ, ಮೊಲ ಸೇರಿದಂತೆ ಇನ್ನಿತರ ಕಾಡು ಪ್ರಾಣಿಗಳು ರಸ್ತೆ ದಾಟಲು ಅನುಕೂಲವಾಗುತ್ತದೆ.

ಅರಣ್ಯ ಇಲಾಖೆ ಮತ್ತು ಹೆದ್ದಾರಿ ಪ್ರಾಧಿಕಾ ರದ ನಡುವಿನ ತಿಕ್ಕಾಟವೇ ಇದಕ್ಕೆಲ್ಲಾ ಕಾರಣ ಎನ್ನಲಾ ಗಿದೆ. ಅಗತ್ಯವಿರುವ ಭೂಮಿಯನ್ನು ಅರಣ್ಯ ಇಲಾಖೆ ನೀಡುತ್ತಿಲ್ಲ ಎಂಬುದು ಪ್ರಾಧಿಕಾರದವರ ವಾದ ವಾದರೆ, ಅಗತ್ಯವಿರುವ ಭೂಮಿ ಕೊಟ್ಟಾಗಿದೆ ಎಂದು ಅರಣ್ಯ ಇಲಾಖೆ ಹೇಳುತ್ತಿದೆ.

ದಶಪಥ ರಸ್ತೆ ಕಾಮಗಾರಿ ಮುಗಿದ ಮೇಲು ಹಲವು ಪ್ರಾಣಿಗಳು ಈ ಭಾಗದಲ್ಲಿ ಸತ್ತಿರುವ ಬಗ್ಗೆ ವರದಿಯಾಗಿದೆ. ಇದರಲ್ಲಿ 2023ರ ಫೆ.16 ಚಿರತೆಯೊಂದು ಹೆದ್ದಾರಿಯಲ್ಲಿ ಗಣಂಗೂರು ಗೇಟ್ ಬಳಿ ವಾಹನಕ್ಕೆ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿತ್ತು, ಇದರ ಜೊತೆ ಮತ್ತಷ್ಟು ವನ್ಯಜೀವಿಗಳ ಸಾವಾಗಿರುವ ಬಗ್ಗೆ ಸ್ಥಳೀಯರು ಮರುಗುತ್ತಾರೆ.



ಹೆದ್ದಾರಿಯಲ್ಲಿ ವಾಹನಕ್ಕೆ ಸಿಲುಕಿ ಸಾವನ್ನಪ್ಪಿರುವ ಚಿರತೆ.

ಉದ್ದೇಶಿತ ವನ್ಯ ಜೀವಿಗಳ ಅಂಡರ್ ಪಾಸ್ ಹಾಗೂ ಫ್ಲೈಓವರ್(ಮೇಲ್ ಸೇತುವೆ) ಕಾಮಗಾರಿ ಪೂರ್ಣಗೊಳಿಸುವುದು ಸಂಬಂಧ ಪಟ್ಟ ಹೆದ್ದಾರಿಯ ಗುತ್ತಿಗೆದಾರರು ಹಾಗೂ ಹೆದ್ದಾರಿ ಪ್ರಾಧಿಕಾರದ ಜವಾಬ್ದಾರಿಯಾಗಿದೆ. ಈ ಸಂಬಂಧ ನಾವು ಸಾಕಷ್ಟು ಬಾರಿ ಪತ್ರ ವ್ಯವಹಾರವನ್ನೂ ಕೂಡ ನಡೆಸಿದ್ದೇವೆ. ಆದರೆ ಇದರಿಂದ ಯಾವುದೇ ಪ್ರಯೋಜನವಾಗಿಲ್ಲ.

–ಜಿ.ವೈರಾಜು, ಮಂಡ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿ



ಅರ್ಧಕ್ಕೆ ಸ್ಥಗಿತಗೊಂಡಿರುವ ಬೆಂಗಳೂರು-ಮೈಸೂರು ಹೆದ್ದಾರಿಯ ಅಂಡರ್‌ಪಾಸ್ ಕಾಮಗಾರಿ

ವನ್ಯಜೀವಿ ಓಡಾಟಕ್ಕಾಗಿ ನಿರ್ಮಾಣ ಮಾಡುತ್ತಿರುವ ಈ ಕಾರಿಡಾರ್ ಇಡೀ ಎಕ್ಸ್‌ಪ್ರೆಸ್ ವೇ ಪ್ರಾಜೆಕ್ಟ್‌ನಲ್ಲಿ ಇದೊಂದೆಯಾಗಿದೆ. ಒಂದು ಒಳ್ಳೆಯ ಉದ್ದೇಶದಿಂದ ನಾವು ಅಲ್ಲಿ ವನ್ಯಜೀವಿಗಳು ಓಡಾಡಲು ಅಂಡರ್ ಪಾಸ್ ಹಾಗೂ ಫ್ಲೈ ಓವರ್(ಮೇಲ್ ಸೇತುವೆ) ನಿರ್ಮಾಣ ಮಾಡಿದ್ದೆವು. ಆದರೆ ಅರಣ್ಯ ಇಲಾಖೆಯವರು ಈ ಕಾಮಗಾರಿ ಪೂರ್ಣಗೊಳಿಸಲು ಅವಶ್ಯಕತೆ ಇರುವಷ್ಟು ಭೂಮಿ ನೀಡುತ್ತಿಲ್ಲ ಹಾಗಾಗಿ ಈ ಕಾಮಗಾರಿ ಅರ್ಧಕ್ಕೆ ನಿಂತಿದೆ. ಒಂದು ವೇಳೆ ಅರಣ್ಯ ಇಲಾಖೆ ಅಗತ್ಯವಿರುವಷ್ಟು ಭೂಮಿ ನೀಡಿದರೆ ಖಂಡಿತ ನಾವು ಅರ್ಧಕ್ಕೆ ನಿಂತಿರುವ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಿ ವನ್ಯ ಜೀವಿಗಳ ತಿರುಗಾಟಕ್ಕೆ ಅನುವು ಮಾಡಿ ಕೊಡುತ್ತೇವೆ.

–ಪ್ರತಾಪ್ ಸಿಂಹ, ಮೈಸೂರು–ಕೊಡಗು ಲೋಕಸಭಾ ಸದಸ್ಯ

ಚಿನಕುರಳಿಯಲ್ಲಿ ಹೆಚ್ಚುತ್ತಿರುವ ಬೈಕ್ ಕಳ್ಳತನ

ಪಾಂಡವಪುರ: ತಾಲೂಕಿನಲ್ಲಿ ಬೈಕ್ ಕಳ್ಳತನ ಪ್ರಕರಣ ಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಚಿನಕುರಳಿ ಗ್ರಾಮ ಒಂದರಲ್ಲೇ ತಿಂಗಳಿಂದೀಚೆಗೆ ಹಲವು ಬೈಕ್‌ಗಳು ಕಳ್ಳತನ ವಾಗಿದ್ದು ಗ್ರಾಮದ ಜನರಲ್ಲಿ ಸಾಕಷ್ಟು ಆತಂಕ ಎದುರಾಗಿದೆ.


ಗ್ರಾಮೀಣ ಪ್ರದೇಶದ ಭಾಗಗಳಲ್ಲಿ ಬೈಕ್ ಕಳ್ಳತನ ಪ್ರಕರ ಣಗಳು ಹೆಚ್ಚುತ್ತಿರುವುದು ಸಾರ್ವಜನಿಕರದಲ್ಲಿ ಆತಂಕ ಹೆಚ್ಚಾ ಗಿದೆ. ಚಿನಕುರಳಿ ಗ್ರಾಮದಲ್ಲಿ ಕಳ್ಳರು ಹಾಡುಹಗಲೇ ಬೈಕ್‌ಗಳನ್ನು ಕದ್ದು ಪರಾರಿಯಾಗುತ್ತಿದ್ದಾರೆ. ಮನೆಗಳು, ಅಂಗಡಿ–ಮುಂಗ ಟ್ಟುಗಳ ಮುಂದೆ ನಿಲ್ಲಿಸಿದ್ದ ಬೈಕ್‌ಗಳನ್ನು ಕಳ್ಳರು ಕದ್ದು ಪರಾ ರಿಯಾಗುತ್ತಿರುವ ದೃಶ್ಯಗಳು ಅಲ್ಲಿನ ಹಲವು ಸಿಸಿಟಿವಿಗಳು ಸೆರೆಯಾಗಿವೆ. ಸಾರ್ವಜನಿಕರು ಮನೆಗಳ ಮುಂದೆಯೂ ಬೈಕ್ ನಿಲ್ಲಿಸುವುದಕ್ಕೆ ಹೆದರುವ ಸ್ಥಿತಿ ಎದುರಾಗಿದೆ.

ಕಳೆದ ತಿಂಗಳಿಂದೀಚೆಗೆ ಮೂರ್‍ನಾಲ್ಕು ಬೈಕ್‌ಗಳು ಕಳ್ಳತನ ವಾಗಿವೆ. ಇನ್ಶೂರೆನ್ಸ್ ಇರುವ ಬೈಕ್‌ಗಳ ಮಾಲೀಕರು ಮಾತ್ರ ಪೊಲೀಸರಿಗೆ ದೂರು ನೀಡಿದ್ದಾರೆ, ಇನ್ಶೂರೆನ್ಸ್ ಇಲ್ಲದ ಬೈಕ್ ಮಾಲೀಕರು ಸುಮ್ಮನಾಗಿದ್ದಾರೆ. ಆದರೆ, ಬೈಕ್ ಕಳ್ಳರನ್ನು ಪತ್ತೆ ಹಚ್ಚುವಲ್ಲಿ ಪಾಂಡವಪುರ ಪೊಲೀಸರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಮರೆತುಹೋದ ವ್ಯಕ್ತಿಗಳನ್ನು ಮತ್ತೆ ಸ್ಮರಿಸುವುದು ಅತ್ಯವಶ್ಯಕ

ಮಂಡ್ಯ,ಮೇ16–ಜನರ ಬದುಕನ್ನು ಕಟ್ಟಿಕೊಡುವ ರೀತಿಯಲ್ಲಿ ಮರೆತುಹೋದ ವ್ಯಕ್ತಿಗಳನ್ನು ಮತ್ತೆ ಸ್ಮರಿಸುವುದು ಅವಶ್ಯವಾಗಿದೆ ಎಂದು ಆದಿಚುಂಚ ನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮ ಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕರ್ನಾಟಕ ಸಂಘ ಮಂಡ್ಯ, ಬಿ.ಜಿ.ದಾಸೇಗೌಡ ಕುಟುಂಬವರ್ಗದ ವತಿಯಿಂದ ನಗರದ ಕರ್ನಾಟಕ ಸಂಘದಲ್ಲಿ ಹಮ್ಮಿಕೊಂಡಿದ್ದ ಆಡಳಿತ ತಜ್ಞ ಬಿ.ಜಿ. ದಾಸೇಗೌಡ ಕೃತಿ ಬಿಡುಗಡೆ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶಗೌಡರು ಮರೆತುಹೋದ ಮಹನೀಯರನ್ನು ಸ್ಮರಣೆಗೆ ತಂದು ಕೊಟ್ಟು ಆದರ್ಶವೇ ಇಲ್ಲದೆ ನರಳುತ್ತಿರುವ ಸಮಾ ಜಕ್ಕೆ ಆದರ್ಶ ಪುರುಷರನ್ನು ನೆನಪಿಸುವ ಕೆಲಸ ಮಾಡುತ್ತಿದ್ದಾರೆ. ದಾಸೇ ಗೌಡರ ಚರಿತ್ರೆ ಮತ್ತು ಬದುಕಿನ ಇತಿಹಾಸ ನೋಡಿದರೆ ಸ್ಫೂರ್ತಿದಾ ಯಕ ವಿಚಾರವಾಗಿದೆ ಎಂದು ಶ್ಲಾಘಿಸಿದರು.



ದಾಸೇಗೌಡರ ಕೃತಿಯನ್ನು ಬಿಡುಗಡೆ ಮಾಡುತ್ತಿರುವ ಗಣ್ಯರು

ಬಿ.ಜಿ.ದಾಸೇಗೌಡರು ಜನರಲ್ ಮ್ಯಾನೇಜರ್ ಆಗಿದ್ದರೆ ಅವರ ಮಗ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ಮಾಡಿದರು. ಗುರುವಿಗಿಂತ ಶಿಷ್ಯ ಬೆಳೆದರೆ ಅಥವಾ ಅಪ್ಪನಿಗಿಂತ ಮಕ್ಕಳು ಬೆಳೆದರೆ ಸಮಾಜ ಸಂತೋಷ ಪಡುತ್ತದೆ. ಜಯಪ್ರಕಾಶ ಗೌಡ ಸುಮ್ಮನೆ ಕುಳಿತುಕೊಳ್ಳುವ ವ್ಯಕ್ತಿಯಲ್ಲ. ಪುಸ್ತಕ ಓದುವವರು ಕಡಿಮೆಯಾಗುತ್ತಿರುವ ದಿನಗಳಲ್ಲಿ ಪುಸ್ತಕ ಯಾರು ಓದುತ್ತಾರೆ ಎಂದು ಸುಮ್ಮನಾಗದೆ ನಾವು ಮಾಡುವ ಕೆಲಸವನ್ನು ಮಾಡಿದರೆ ಅದು ಕೆಲವರಿಗಾದರೂ ಸ್ಫೂರ್ತಿಯಾ ಗುತ್ತದೆ ಎಂದು ಕಾರ್ಯಪ್ರವೃತ್ತರಾಗಿದ್ದಾರೆ ಎಂದರು.

ಬಿ.ಜಿ.ದಾಸೇಗೌಡ ಅವರ ಬಗ್ಗೆ ಲೋಕೇಶ್ ಅವರು ಸಂಶೋಧನಾತ್ಮಕ ಕೃತಿಯನ್ನು ಸೂಕ್ಷ್ಮ ವಾಗಿ ಬರೆದಿರುವುದು ಮೆಚ್ಚತಕ್ಕ ಅಂಶ ಎಂದರು.

ಆಡಳಿತ ತಜ್ಞ ಬಿ.ಜಿ.ದಾಸೇಗೌಡ ಕೃತಿ ಬಿಡು ಗಡೆ ಮಾಡಿ ಮಾತನಾಡಿದ ಕೃಷಿಕ್ ಫೌಂಡೇಶನ್ ಅಧ್ಯಕ್ಷ ಟಿ.ತಿಮ್ಮೇಗೌಡ, ದಾಸೇಗೌಡರು ಕೂಲಿ ಮಠದಲ್ಲಿ ವಿದ್ಯಾಭ್ಯಾಸ ಮಾಡಿ ಬೆಳೆದ ರೀತಿ ಆಶ್ಚರ್ಯವಾಗಿದೆ. ಸಕ್ಕರೆ ಕಾರ್ಖಾನೆ ಮತ್ತು ಮಂಡ್ಯ ವಿಚಾರದಲ್ಲಿ ಅವರೊಂದು ದಂತಕಥೆ. ಎಲ್ಲರೂ ಈ ಕೆಲಸವನ್ನು ಮಾಡಲು ಸಾಧ್ಯ ವಿಲ್ಲ. ಇಂಥವರ ಸಂತತಿ ರಾಜ್ಯದಲ್ಲಿ ಬೆಳೆಯ ಬೇಕು ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಲೋಕೇಶ್ ಚಂದಗಾಲು ರಚಿ ಸಿರುವ ಆಡಳಿತ ತಜ್ಞ ಬಿ.ಜಿ.ದಾಸೇಗೌಡ ಕೃತಿಯನ್ನು ಗಣ್ಯರು ಬಿಡುಗಡೆ ಮಾಡಿದರು. ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದ ನಾಥ ಸ್ವಾಮೀಜಿ ಸಮಾರಂಭದ ಸಾನಿಧ್ಯ ವಹಿಸಿದ್ದರು.

ವೇದಿಕೆಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶಗೌಡ, ಬಿ.ಜಿ.ದಾಸೇಗೌಡ ಅವರ ಹಿರಿಯ ಪುತ್ರ ಬಿ.ಮೋಹನ್‌ದಾಸ್, ರೈತ ಮುಖಂಡ ಕೆ.ಬೋರಯ್ಯ, ಆಡಳಿತ ತಜ್ಞ ಬಿ.ಜಿ. ದಾಸೇಗೌಡ ಕೃತಿ ಕರ್ತೃ ಲೋಕೇಶ್ ಚಂದಗಾಲು, ಬಿ.ಜಿ.ದಾಸೇಗೌಡ ಅವರ ಕುಟುಂಬ ವರ್ಗ, ಕರ್ನಾಟಕ ಸಂಘದ ಪದಾಧಿಕಾರಿಗಳಾದ ಮಂಜುಳಾ ಉದಯಶಂ ಕರ್, ತಗ್ಗಹಳ್ಳಿ ವೆಂಕಟೇಶ್, ಹೆಚ್.ಡಿ.ಸೋಮ ಶೇಖರ್ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಮೇ 16– ಮದ್ದೂರು ಸೋಮ ನಹಳ್ಳಿಯಲ್ಲಿರುವ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ 2024–25ನೇ ಶೈಕ್ಷ ಣಿಕ ಸಾಲಿಗೆ 100% ಉದ್ಯೋಗಾವಕಾಶ ವುಳ್ಳ ಡಿಪ್ಲೋಮಾ ಇನ್ ಟೂಲ್ ಮತ್ತು ಡೈ ಮೇಕಿಂಗ್, ಡಿಪ್ಲೋಮಾ ಇನ್ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಮತ್ತು ಡಿಪ್ಲೋಮಾ ಇನ್ ಆಟೋಮೇಷನ್ ಅಂಡ್ ರೋಬೋ ಟಿಕ್ಸ್ ಕೋರ್ಸ್‌ಗಳಿಗೆ ಆನ್ ಐನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಮೇ 27 ಕೊನೆಯ ದಿನವಾಗಿದ್ದು, 10 ನೇ ತರಗತಿ ಉತ್ತೀರ್ಣರಾದವರು ಪ್ರಥಮ ವರ್ಷಕ್ಕೆ(3+1) ಮತ್ತು ಐಟಿಐ ಮತ್ತು ಪಿಯುಸಿ ಉತ್ತೀರ್ಣರಾದವರು ಲ್ಯಾಟರಲ್ ಎಂಟ್ರಿ ಮೂಲಕ ದ್ವಿತೀಯ ವರ್ಷಕ್ಕೆ (2+1 ವರ್ಷ) ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 6362883923 ಅನ್ನು ಸಂಪರ್ಕಿಸಬಹುದು.

ಮೂರನೇ ಪುಟದಿಂದ

ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ನಾಮಪತ್ರ ಸಲ್ಲಿಕೆ

ಮೆಮೋರಿಯಲ್ ಹಾಲ್‌ನಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರ ಸಭೆ ನಡೆಯಿತು. ಸಭೆ ಉದ್ಘಾಟಿಸಿ ಮಾತನಾಡಿದ ಹೆಚ್.ಡಿ.ಕುಮಾರ ಸ್ವಾಮಿ, 1994 ರಲ್ಲಿ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ಒಂದು ಲಕ್ಷ ಶಿಕ್ಷಕರ ನೇಮಕ ಮಾಡಿದ್ದರು. ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿ ಆಗಿದ್ದಾಗ 56 ಸಾವಿರ ಶಿಕ್ಷಕರನ್ನು ನೇಮಕ ಮಾಡಿದ್ದೇನೆ. ಶಿಕ್ಷಕರ ಪರವಾಗಿರುವ ನಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಶಾಶ್ವತವಾಗಿ ಮುಂದುವರೆಯಲಿದೆ. ಇದಕ್ಕೆ ದೆಹಲಿ ಮಟ್ಟದಲ್ಲಿ ರಾಷ್ಟ್ರ ನಾಯಕರ ಜೊತೆ ಒಪ್ಪಂದವಾಗಿದೆ. ಇದಕ್ಕೆ ರಾಜ್ಯ ಬಿಜೆಪಿ ನಾಯಕರು ಸಮ್ಮತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ಗೊಂದಲವಿಲ್ಲದೆ ಈ ಚುನಾವಣೆಯಲ್ಲಿ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು. ಮೈತ್ರಿ ಶಕ್ತಿಯಿಂದ ಲೋಕ ಸಭಾ ಚುನಾವಣೆಯಲ್ಲಿ 26 ಸ್ಥಾನ ಗೆಲ್ಲುತ್ತೇವೆ. ವಿಧಾನ ಪರಿಷತ್ ಚುನಾವಣೆಯಲ್ಲೂ ಜಯಭೇರಿ ಬಾರಿಸುತ್ತೇವೆ ಎಂದು ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು. ಇದೇ ವೇಳೆ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಜೂನ್ 4 ರಂದು ಪ್ರಕಟವಾಗುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತ ಪೂರ್ವ ಜಯ ಸಾಧಿಸಲಿದೆ. ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಧಾನಮಂತ್ರಿ ಆಗುತ್ತಾರೆ. ಇದು ಸೂರ್ಯ ಚಂದ್ರರಷ್ಟೆ ಸತ್ಯ. ಲೋಕಸಭಾ ಚುನಾವಣೆ ಫಲಿತಾಂಶಕ್ಕೂ ಮುನ್ನ ನಡೆಯುವ ವಿಧಾನ ಪರಿಷತ್ ಚುನಾವಣೆಯಲ್ಲಿ ಕೂಡ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರ ಜೆಡಿಎಸ್ ಭದ್ರ ಕೋಟೆಯಾಗಿದೆ. ಇದು ಜೆಡಿಎಸ್ ಭದ್ರ ಕೋಟೆ ಎಂದು ಮತ್ತೊಮ್ಮೆ ಸಾಬೀತು ಮಾಡಲು ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಲೋಕಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಯಲ್ಲಿ ಮೈತ್ರಿ ಅಭ್ಯರ್ಥಿ ಗೆಲುವು ಸಾಧಿಸುವ ಮೂಲಕ ತನ್ನ ಶಕ್ತಿ ಪ್ರದರ್ಶಿಸಲಿದೆ. ಈ ಮೂಲಕ ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್‌ಗೆ ಭವಿಷ್ಯವಿಲ್ಲ ಎಂಬುದು ಸಾಬೀತಾಗಲಿದೆ ಎಂದು ಪ್ರತಾಪ್ ಸಿಂಹ ಹೇಳಿದರು. ಈ ವೇಳೆ ಮಾತನಾ ಡಿದ ಯದುವೀರ್, ಲೋಕಸಭಾ ಚುನಾವಣೆ ಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಾರ ಮಾಡಿದ್ದೆ. ಎಲ್ಲೆಡೆ ಒಳ್ಳೆಯ ವಾತಾವರಣವಿದ್ದು, 28 ಸ್ಥಾನಗಳಲ್ಲೂ ಮೈತ್ರಿ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಯಾವುದೇ ಪರಿಸ್ಥಿತಿಯಲ್ಲೂ ಗಡ್ಡ ಬಿಟ್ಟ ಉದಾಹರಣೆ ಇಲ್ಲ. ಆದರೆ ಇದಕ್ಕೆ ಕಾಂಗ್ರೆಸ್ ನವರ ಕುತಂತ್ರ ರಾಜ ಕಾರಣ ಕಾರಣ. ಈ ವಿಧಾನ ಪರಿಷತ್ ಚುನಾವಣೆ ಯಲ್ಲಿ ಕಾಂಗ್ರೆಸ್ ಸೋಲಿಸಿ ಬುದ್ಧಿ ಕಲಿಸಬೇಕು ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ಮನವಿ ಮಾಡಿದರು.

ತರುವಾಯ ಮಾತನಾಡಿದ ಶ್ರವಣಬೆಳಗೊಳ ಶಾಸಕ ಬಾಲಕೃಷ್ಣ, ಜೆಡಿಎಸ್ ಪಕ್ಷದಲ್ಲಿ ಅಧಿಕಾರ ಅನುಭವಿಸಿ ಕಾಂಗ್ರೆಸ್ ಪಕ್ಷದ ಬಾಗಿಲು ತಟ್ಟಿರುವ ಮರಿತಿಬ್ಬೇಗೌಡರನ್ನು ಸೋಲಿಸಿ, ಅವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಕರೆ ನೀಡಿದರು.

ವಿಧಾನ ಪರಿಷತ್‌ನ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಎ.ಮಂಜು, ಸಿ.ಎನ್.ಮಂಜೇಗೌಡ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಸಾ.ರಾ.ಮಹೇಶ್, ಮಾಜಿ ಶಾಸಕರಾದ ಅಶ್ವಿನ್ ಕುಮಾರ್, ಡಾ.ಅನ್ನದಾನಿ, ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಕಂಠೇಗೌಡರೇ ಜವಾಬ್ದಾರಿ ತೆಗೆದುಕೊಂಡು ವಿವೇಕಾನಂದರ ಗೆಲ್ಲಿಸುತ್ತಾರೆ



ಮೈಸೂರು, ಮೇ16(ಬಿಎಲ್‌ಯು)– ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡರೇ ಎಲ್ಲಾ ಜವಾಬ್ದಾರಿ ತೆಗೆದುಕೊಂಡು ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ವಿವೇಕಾನಂದರನ್ನು ಗೆಲ್ಲಿಸುತ್ತಾರೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದರು. ನಗರದ ಗೋವಿಂದರಾವ್ ಮೆಮೊರಿಯಲ್ ಹಾಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಶ್ರೀಕಂಠೇಗೌಡರು ಜಾತ್ಯಾತೀತ ಜನತಾ ದಳದ ಕಟ್ಟಾಳು. ಹೆಚ್.ಡಿ. ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರ ಅಪ್ಪಟ ಶಿಷ್ಯ. ಈ ಹಿನ್ನೆಲೆಯಲ್ಲಿ ಶ್ರೀಕಂಠೇ ಗೌಡರ ಮುಂದಾಳತ್ವದಲ್ಲೇ ಈ ಚುನಾವಣೆ ನಡೆಯಲಿದೆ. ಈ ಬಗ್ಗೆ ಯಾರೂ ಅನುಮಾನ ಪಡುವ ಅಗತ್ಯವಿಲ್ಲ ಎಂದರು. ಸಣ್ಣ ವ್ಯತ್ಯಾಸ ದಿಂದ ನಿಂಗರಾಜ್‌ಗೌಡರಿಗೆ ಬಿಜೆಪಿ ಟಿಕೆಟ್ ಘೋಷಣೆ ಮಾಡಿತ್ತು. ಆದರೆ ವಿವೇಕಾನಂದರ ಪರ ಅವರು ಕೆಲಸ ಮಾಡುತ್ತಾರೆ. ಈ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಪ್ರಜ್ವಲ್ ಪೆನ್ ಡ್ರೈವ್ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಖಚಿತ

ಪ್ರಜ್ವಲ್ ರೇವಣ್ಣ ಪೆನ್ ಡ್ರೈವ್ ಪ್ರಕರಣದಲ್ಲಿ ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಆಗಲಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು. ಎಸ್‌ಐಟಿ ಅಧಿಕಾರಿಗಳು ತನಿಖೆ ಮಾಡುತ್ತಿದ್ದು, ಸತ್ಯಾಸತತೆ ಬಯಲಿಗೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪ್ರಜ್ವಲ್ ರೇವಣ್ಣ ಎಲ್ಲಿದ್ದಾರೆ ಎಂದು ನಮಗೂ ಮಾಹಿತಿ ಇಲ್ಲ. ಕುಟುಂಬಸ್ಥರ ಸಂಪರ್ಕಕ್ಕೂ ಸಿಗುತ್ತಿಲ್ಲ. ರಾಜ್ಯ ಸರ್ಕಾರ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಿದೆ. ಎಸ್‌ಐಟಿಯವರು ತನಿಖೆ ನಡೆಸುತ್ತಿದ್ದಾರೆ ಎಂದರು.

ತಮಿಳುನಾಡು ಸೇರಿದಂತೆ ಇತರೆಡೆ ಪೆನ್ ಡ್ರೈವ್ ತಯಾರಾಗಿದ್ದು, ಸಿಬಿಐಗೆ ಈ ಪ್ರಕರಣ ಹಸ್ತಾಂತರ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೆವು. ಆದರೆ ಈ ಕೇಸ್ ಸಿಬಿಐಗೆ ವಹಿಸಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿ ದ್ದಾರೆ. ಎಸ್‌ಐಟಿಯವರೇ ತನಿಖೆ ಮಾಡಿ ಸತ್ಯಾ ಸತ್ಯತೆ ತಿಳಿಸಲಿ ಎಂದು ಹೇಳಿದರು. ನಾವು ಹೆಚ್.ಡಿ. ರೇವಣ್ಣ ಪರವಾಗಿ ಪ್ರತಿಭಟನೆ ಮಾಡಿದ್ದೇವೆಯೇ ಹೊರತು, ಪ್ರಜ್ವಲ್ ರೇವಣ್ಣ ಪರ ಅಲ್ಲ ಎಂದು ಜಿ.ಟಿ.ದೇವೇಗೌಡರು ಇದೇ ವೇಳೆ ಸ್ಪಷ್ಟಪಡಿಸಿದರು.


ಭಾರೀ ಹೈಡ್ರಾಮಾ

ಚುನಾವಣೆಗೆ ಕೆ.ಟಿ.ಶ್ರೀಕಂಠೇಗೌಡರು ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ ಶ್ರೀಕಂಠೇಗೌಡರ ಬಿಟ್ಟು, ವಿವೇಕಾನಂದರಿಗೆ ಬಿ.ಫಾರಂ ನೀಡಲಾಗಿತ್ತು. ಇದರಿಂದ ಅಸಮಾಧಾನಗೊಂಡ ಶ್ರೀಕಂಠೇಗೌಡರು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಲು ನಿರ್ಧರಿಸಿದ್ದರು. ಈ ಸಂಬಂಧ ನಗರದ ವಿನೋಬಾ ರಸ್ತೆಯ ಆಲಮ್ಮ ಛತ್ರದಲ್ಲಿ ಬೆಂಬಲಿಗರ ಸಭೆ ನಡೆಸಿ, ನಾಮಪತ್ರ ಸಲ್ಲಿಸಲು ಸಜ್ಜಾಗಿದ್ದರು. ಅತ್ತ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಸಂಬಂಧ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರ ಸಭೆ ನಡೆಯುತ್ತಿತ್ತು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಇತರರು ಭಾಗಿಯಾಗಿದ್ದರು.

ಶ್ರೀಕಂಠೇಗೌಡರನ್ನು ಸಮಾಧಾನ ಮಾಡಿ ಈ ಸಭೆಗೆ ಕರೆ ತರಲು ಶಾಸಕರಾದ ಜಿ.ಟಿ.ದೇವೇಗೌಡ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು ಆಲಮ್ಮ ಛತ್ರಕ್ಕೆ ಆಗಮಿಸಿದರು. ಶ್ರೀಕಂಠೇಗೌಡರನ್ನು ಹೆಚ್.ಡಿ.ಕುಮಾರಸ್ವಾಮಿ ಭಾಗಿಯಾಗಿದ್ದ ಸಭೆಗೆ ಕರೆದೊಯ್ಯಲು ಮನವೊಲಿಸುವಲ್ಲಿ ಜೆಡಿಎಸ್ ಶಾಸಕರು ಯಶಸ್ವಿಯಾದರು. ಆದರೆ ಶ್ರೀಕಂಠೇಗೌಡರು ಆ ಸಭೆಗೆ ಹೋಗಲು ಅವರ ಬೆಂಬಲಿಗರು ತೀವ್ರ ವಿರೋಧ ವ್ಯಕ್ತಪಡಿಸಿದರು. ಸ್ವತಃ ಶ್ರೀಕಂಠೇಗೌಡರೇ ಸಭೆಗೆ ಹೋಗಲು ಸಮ್ಮತಿಸಿದರೂ ಅವರ ಬೆಂಬಲಿಗರು ಹೋಗದಂತೆ ತಡೆದರು. ಈ ಸಂದರ್ಭದಲ್ಲಿ ಶ್ರೀಕಂಠೇಗೌಡರನ್ನು ಜೆಡಿಎಸ್ ನಾಯಕರು ಹಾಗೂ ಅವರ ಬೆಂಬಲಿಗರು ತಡೆಯಾಗಿದ್ದ ಎಲ್ಲರನ್ನೂ ತಳ್ಳಿ ಕರೆದೊಯ್ಯಲು ಯತ್ನಿಸಿದ್ದಾರೆ. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣ ವಾಯಿತು. ಈ ವೇಳೆ ದೊಡ್ಡ ಹೈಡ್ರಾಮಾವೆ ನಡೆಯಿತು.

ಶ್ರೀಕಂಠೇಗೌಡರನ್ನು ತೀವ್ರವಾಗಿ ಪರಸ್ಪರ ಎಳೆದಾಡಿದ ಕಾರಣ ಅವರ ಬಲಗೈಗೆ ಪೆಟ್ಟಾಯಿತು. ಕೂಡಲೇ ಅವರನ್ನು ನಗರದ ಅಪೋಲೊ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ನಾಮಪತ್ರ ಸಲ್ಲಿಸಲು ಬರುತ್ತಾರೆ ಎಂದು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಅವರ ಬೆಂಬಲಿಗರು ಕಾಯುತ್ತಿದ್ದರು. ಆದರೆ ನಾಮಪತ್ರ ಸಲ್ಲಿಸಲು ಅಂತಿಮ ಸಮಯ ಮಧ್ಯಾಹ್ನ 3 ಗಂಟೆವರೆಗೂ ಶ್ರೀಕಂಠೇ ಗೌಡರು ಬರಲೇ ಇಲ್ಲ. ಆಸ್ಪತ್ರೆಯಲ್ಲಿ ಜೆಡಿಎಸ್ ನಾಯಕರು ನಡೆಸಿದ ಸಂಧಾನ ಮಾತುಕತೆ ಯಶಸ್ವಿಯಾಯಿತು. ಅಂತಿಮವಾಗಿ ಶ್ರೀಕಂಠೇ ಗೌಡರು ಸ್ಪರ್ಧಾ ಕಣದಿಂದ ಹಿಂದೆ ಸರಿದರು. ಆದರೆ ಶ್ರೀಕಂಠೇಗೌಡರ ಈ ನಡೆಯಿಂದ ಅವರ ಬೆಂಬಲಿಗರು ಸಿಟ್ಟಾಗಿ ಪ್ರಾದೇಶಿಕ ಆಯುಕ್ತರ ಕಚೇರಿಯಿಂದ ನಿರ್ಗಮಿಸಿದರು. ಬಲಗೈಗೆ ಪೆಟ್ಟಾಗಿದ್ದ ಶ್ರೀಕಂಠೇಗೌಡರು ಚಿಕಿತ್ಸೆ ಪಡೆದ ನಂತರ ಸಂಜೆ 4 ಗಂಟೆಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದರು.

ನಾನು ಜೆಡಿಎಸ್ ಪಾರ್ಟಿಯಲ್ಲೇ ಇರುತ್ತೇನೆ




ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನನ್ನೊ ಡನೆ ಮಾತನಾಡಿದ್ದು, ನಾನು ಪಾರ್ಟಿಯಲ್ಲೇ ಇರುವೆ ಎಂದು ಕೆ.ಟಿ.ಶ್ರೀಕಂಠೇಗೌಡರು ಸ್ಪಷ್ಟಪಡಿ ಸಿದ್ದಾರೆ. ಇಂದು ಬೆಳಿಗ್ಗೆ ನಡೆದ ಸಭೆಯಲ್ಲಿ ಗದ್ದಲ ಏರ್ಪಟ್ಟ ಸಂಬಂಧ 'ಮೈಸೂರು ಮಿತ್ರ' ನಿಗೆ ಪತ್ರಿಕ್ರಿಯೆ ನೀಡಿದ ಅವರು, ಜೆಡಿಎಸ್ ನಿಂದ ಟಿಕೆಟ್ ನೀಡದಿರುವ ಬಗ್ಗೆ ನನ್ನ ಬೆಂಬಲಿಗರಿಗೆ ತೀವ್ರ ಅಸಮಾಧಾನವಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಬೇಡಿ. ನಾಮಪತ್ರ ಸಲ್ಲಿಸಿ. ನಾಳೆ ಬೇಕಾದರೆ ಕುಮಾರಸ್ವಾಮಿ ಭೇಟಿ ಮಾಡಿ ಎಂದು ನನ್ನ ಬೆಂಬಲಿಗರು ಪಟ್ಟು ಹಿಡಿದರು ಎಂದು ತಿಳಿಸಿದರು.

ಆದರೆ ಕುಮಾರಸ್ವಾಮಿ ಅವರೇ ಕರೆದಿರುವಾಗ ಹೋಗದಿರಲು ನನಗೆ ಮನಸ್ಸಾಗಲಿಲ್ಲ. ಈ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಭೇಟಿ ಮಾಡಲು ಮುಂದಾಗಿದ್ದೆ. ಆದರೆ ನನ್ನ ಬೆಂಬಲಿಗರು ತಡೆದರು ಎಂದರು. ಈ ಸಂದರ್ಭದಲ್ಲಿ ಜೆಡಿಎಸ್ ನಾಯಕರು ತಮ್ಮ ಜೊತೆ ಬರುವಂತೆ ಕರೆದರು. ಆದರೆ ನನ್ನ ಬೆಂಬಲಿಗರು ಇದಕ್ಕೆ ಆಸ್ಪದ ನೀಡಲಿಲ್ಲ. ಆ ವೇಳೆ ಎಳೆದಾಟ–ನೂಕಾಟ ನಡೆದು ನನ್ನ ಬಲಗೈಗೆ ಪೆಟ್ಟಾಗಿದೆ. ಚಿಕಿತ್ಸೆ ಪಡೆದು ಈಗ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದೇನೆ ಎಂದು ಶ್ರೀಕಂಠೇಗೌಡರು ತಿಳಿಸಿದರು.

ಭ್ರಷ್ಟ ತಿಮಿಂಗಿಲ ನುಂಗುವೆ!

ಎಂದು ದೂರಿದರು. ಒಂದು ವಾರದಲ್ಲಿ ತಿಮಿಂಗಿಲ ಸಿಗುತ್ತದೆ ಎಂದು ಮಂಡ್ಯ ಶಾಸಕರು ಹೇಳಿದ್ದಾರೆ. ಅವರಿಗೆ ಇರುವಷ್ಟು ಮಾಹಿತಿ ಪಾಪ ಗೃಹ ಸಚಿವ ಡಾ.ಪರಮೇಶ್ವರ್ ಅವರಿಗೆ ಇಲ್ಲ. ಗೃಹ ಇಲಾಖೆಯನ್ನು ಕಾಣದ ಕೈ ನಿಯಂತ್ರಿಸುತ್ತಿದೆ ಎಂದು ಆಪಾದಿಸಿದರು. ಪ್ರಜ್ವಲ್ ರೇವಣ್ಣ ವಿಡಿಯೋ ಮಾಡಿದವರು ಹಾಗೂ ವೈರಲ್ ಮಾಡಿದವರ ಬಗ್ಗೆ ಈ ತನಕ ತನಿಖೆ ಮಾಡಿಲ್ಲ. ತಂದೆ–ತಾಯಿಗೆ ಗೌರವ ಕೊಡುವ ಹಾಗೂ ಸಹೋದರಿಯರ ಜೊತೆ ಬೆಳೆದಿರುವ ಎಸ್‌ಐಟಿ ಅಧಿಕಾರಿಗಳು ಸಂತ್ರಸ್ತೆಯ ಪರಿಸ್ಥಿತಿ ತಿಳಿಯಬೇಕು. ಈ ಮೂಲಕ ಯಾವ ರಾಜಿಗೂ ಒಳಗಾಗದೆ ಪ್ರಾಮಾಣಿಕ ಹಾಗೂ ದಕ್ಷತೆಯಿಂದ ತನಿಖೆ ಮಾಡಬೇಕು ಎಂದು ಆಗ್ರಹಿಸಿದರು. ವಿದೇಶದಲ್ಲಿರುವ ಪ್ರಜ್ವಲ್ ರೇವಣ್ಣ ಬಂಧಿಸುವ ಪ್ರಕ್ರಿಯೆ ಸಂಬಂಧ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಸಮನ್ವಯತೆ ಸಾಧಿಸಬೇಕು. ಕಾನೂನು ಚೌಕಟ್ಟಿನಲ್ಲಿ ಕ್ರಮ ವಹಿಸಬೇಕು. ಆದರೆ ಈ ಪ್ರಕರಣದಲ್ಲಿ ಸರ್ಕಾರ ತನ್ನ ತಪ್ಪು ಮುಚ್ಚಿಕೊಳ್ಳಲು ಮುಂದಾಗುತ್ತಿದೆ ಎಂದು ದೂರಿದರು. ಸರ್ಕಾರದಲ್ಲಿ ರುವ ಭ್ರಷ್ಟ ತಿಮಿಂಗಿಲದ ಬಗ್ಗೆ ಬಹಳಷ್ಟು ಮಾಹಿತಿ ಕೊಡುತ್ತೇನೆ. ಆದರೆ ತನಿಖೆ ನಡೆಸುವ ಧೈರ್ಯ, ಶಕ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಇದೆಯೇ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ನನ್ನ ಹಿಟ್ ಅಂಡ್ ರನ್ ಅಂತಾರೆ. ಆದರೆ ಈ ಮೊದಲೆ ಸಾಕ್ಷಿ ಸಮೇತ ಬಹಳಷ್ಟು ಹಗರಣ ಬಯಲು ಮಾಡಿದರೂ ಏಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಮರು ಪ್ರಶ್ನಿಸಿದರು. ಅಧಿಕಾರಿಗಳು ಭ್ರಷ್ಟಾಚಾರಕ್ಕೆ ಹಣ ಹೊಂದಿಸಲು ಯಾವ ರೀತಿ ಪರದಾಡುತ್ತಿದ್ದಾರೆ ಎಂಬ ಸ್ಪಷ್ಟ ಮಾಹಿತಿ ಇದೆ. ಆದರೆ ಈ ಬಗ್ಗೆ ಕ್ರಮ ಕೈಗೊಳ್ಳಲು ಸಿದ್ದರಾಮಯ್ಯಗೆ ಧೈರ್ಯ ಇದೆಯೇ ಎಂದು ಕುಮಾರಸ್ವಾಮಿ ಸವಾಲು ಹಾಕಿದರು.

ವಿದೇಶಕ್ಕೆ ಹೋಗಿ ಪ್ರಜ್ವಲ್‌ನನ್ನು ನಾನು ಹುಡುಕಲು ಸಾಧ್ಯವೆ?



ವಿದೇಶದಲ್ಲಿರುವ ಪ್ರಜ್ವಲ್ ರೇವಣ್ಣನನ್ನು ನಾನು ಹುಡುಕಿಕೊಂಡು ಬರಲು ಸಾಧ್ಯವೆ? ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಅವರು ಇಲ್ಲಿ ಇದ್ದಾಗಲೇ ನನ್ನ ಸಂಪರ್ಕದಲ್ಲಿ ಇರಲಿಲ್ಲ. ಈಗ ಬಹಿರಂಗಗೊಂಡಿರುವ ವಿಡಿಯೋ ವಿಚಾರ ಕೂಡ ನನ್ನ ಗಮನಕ್ಕೆ ಬಂದಿರಲಿಲ್ಲ. ಇಲ್ಲಿರುವಾಗಲೇ ನಮ್ಮ ಸಂಪರ್ಕದಲ್ಲಿ ಇಲ್ಲದ ಪ್ರಜ್ವಲ್ ರೇವಣ್ಣ ಈಗ ವಿದೇಶದಲ್ಲಿದ್ದು, ನಮ್ಮ ಸಂಪರ್ಕಕ್ಕೆ ಸಿಗುತ್ತಾನೆಯೇ ಎಂದು ಪ್ರಶ್ನಿಸಿದರು.

ಜೆಡಿಎಸ್ ಪಕ್ಷದ ವರ್ಚಸ್ಸು ಹಾಳು ಮಾಡಲು ವಿಡಿಯೋ ವೈರಲ್ ಮಾಡಿದರು. ಆದರೆ ಇಂತಹ ಬೆಳವಣಿಗೆಗಳಿಂದ ಪಕ್ಷಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆಯಾಗಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಸರ್ಕಾರಕ್ಕೇ ಹೆದರಿಕೆ ಹುಟ್ಟಿಸುವ ಆಡಿಯೋ ಪಡೆಯಲು ದೇವರಾಜೇಗೌಡ ಬಂಧನ

ಸರ್ಕಾರಕ್ಕೆ ಹೆದರಿಕೆ ಹುಟ್ಟಿಸಿರುವ ಆಡಿಯೋ ಪಡೆಯಲು ಎಸ್‌ಐಟಿ ಬಿಜೆಪಿ ಮುಖಂಡ ದೇವರಾಜೇಗೌಡನನ್ನು ಬಂಧಿಸಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಅತ್ಯಾಚಾರ ಪ್ರಕರಣದಲ್ಲಿ ದೇವರಾಜೇಗೌಡನನ್ನು ಪೊಲೀಸರು ಬಂಧಿಸಿದ್ದಾರೆ. ಆದರೆ ಸರ್ಕಾರದ ಪ್ರಮುಖ ವ್ಯಕ್ತಿಯ ಆಡಿಯೋ ದೇವರಾಜೇಗೌಡನಲ್ಲಿ ಇರುವ ಕಾರಣ ಅದನ್ನು ಪಡೆದುಕೊಳ್ಳುವ ಯತ್ನ ಮಾಡುತ್ತಿದ್ದಾರೆ ಎಂದು ಆಪಾದಿಸಿದರು. ದೇವರಾಜೇಗೌಡನನ್ನು ಪೊಲೀಸರು ನಾಲ್ಕು ದಿನಗಳಿಂದ ವಿಚಾರಣೆ ಮಾಡುತ್ತಿದ್ದಾರೆ. ಇವರಿಗೆ ನಿಜವಾಗಿಯೂ ಬೇಕಿರುವ ವಿಚಾರ ಏನು ಎಂದು ಹಾಸನ ಎಸ್ಪಿ ಸ್ಪಷ್ಟಪಡಿಸಬೇಕು ಎಂದು ಕೇಳಿದರು. ಈ ಪ್ರಕರಣದಲ್ಲಿ ಎರಡು ಭಾಗವಿದೆ. ಒಂದು ವಿಡಿಯೋ ಮಾಡಿದವನ ಅಪರಾಧ, ಮತ್ತೊಂದು ವಿಡಿಯೋ ವೈರಲ್ ಮಾಡಿ ಸಂತ್ರಸ್ತ ಕುಟುಂಬವನ್ನು ಬೀದಿಗೆ ತಂದಿರುವುದು ದೊಡ್ಡ ಅಪರಾಧವಾಗಿದೆ. ಆದರೆ ವಿಡಿಯೋ ವೈರಲ್ ಮಾಡಿ ಘೋರ ಅಪರಾಧ ಎಸಗಿದವನನ್ನು ಈ ತನಕ ಎಸ್‌ಐಟಿಯವರು ಬಂಧಿಸಿಲ್ಲವೇಕೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಮಧ್ಯಂತರ ಜಾಮೀನು


ಹಾಜರಾಗಬೇಕು ಎಂದು ಕೋರ್ಟ್ ಸೂಚಿಸಿದೆ. ಆ ಬಳಿಕ ವಿಚಾರಣೆ ನಡೆಸಿ, ಜಾಮೀನು ಅವಧಿಯನ್ನು ವಿಸ್ತರಣೆ ಮಾಡಬಹುದು ಇಲ್ಲವೇ ಜಾಮೀನು ನಿರಾಕರಿಸಬಹುದು. ಎಚ್.ಡಿ.ರೇವಣ್ಣ ಅವರಿಗೆ ಜಾಮೀನು ಮಂಜೂರು ಮಾಡಿರುವ ಕೋರ್ಟ್ ಐದು ಲಕ್ಷ ರೂಪಾಯಿ ಭದ್ರತಾ ಠೇವಣಿಯನ್ನು ಇಡುವಂತೆ ಸೂಚನೆ ನೀಡಿದೆ. ಲೈಂಗಿಕ ದೌರ್ಜನ್ಯ ಕೇಸ್‌ನಲ್ಲೂ ಮೊದಲನೇ ಆರೋಪಿ ಆಗಿರುವ ರೇವಣ್ಣ, ಬೆಂಗಳೂ ರಿನ ಸಿಟಿ ಸಿವಿಲ್ ಕೋರ್ಟ್‌ಗೆ ಹಾಜರಾ ಗಿದ್ದರು. ನ್ಯಾಯಾಧೀಶರ ಮುಂದೆಯೇ ಹಾಜರಾಗಿ ಜಾಮೀನಿಗೆ ಅರ್ಜಿ ಸಲ್ಲಿಸಿ ದ್ದರು. ಜಾಮೀನು ನೀಡಬಹುದಾದ ಅಪರಾಧವಾಗಿರುವುದರಿಂದ ಆಕ್ಷೇಪಿಸು ವಂತಿಲ್ಲ. ಹೀಗಾಗಿ, ಜಾಮೀನು ನೀಡ ಬೇಕು ಎಂದು ಎಚ್.ಡಿ.ರೇವಣ್ಣ ಪರ ವಕೀಲ ಅರುಣ್ ನ್ಯಾಯಾಲಯಕ್ಕೆ ಮನವಿ ಮಾಡಿದರು. ಇದಕ್ಕೆ ತಕರಾರು ಎತ್ತಿರುವ ಎಸ್‌ಐಟಿ, ಜಾಮೀನು ಅರ್ಜಿ ವಿಚಾರಣೆ ಈ ಕೋರ್ಟ್‌ನಲ್ಲಿ ನಡೆಯು ವಂತಿಲ್ಲ. ನ್ಯಾಯಾಂಗ ಬಂಧನಕ್ಕೆ ವಹಿಸಲು ಮನವಿ ಮಾಡಿತು

ಸಾಧ್ಯವೇ ಇಲ್ಲ

ನೀರಿಗೂ ಹಾಹಾಕಾರ ಶುರುವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳ ತಮ್ಮ ಪಾಲಿನ ನೀರು ಬಿಡುವಂತೆ ಅರ್ಜಿ ಸಲ್ಲಿಸಿದ ತಮಿಳು ನಾಡು ಸರ್ಕಾರಕ್ಕೆ ಕಾವೇರಿ ನೀರು ನಿಯಂತ್ರಣ ಸಮಿತಿ ಮಹಾಮಂಗಳಾ ರತಿ ಮಾಡಿ ಬರಿಗೈಯಲ್ಲಿ ಕಳಿಸಿದೆ. ನೀರು ಬಿಡುವಂತೆ ಸಲ್ಲಿಕೆ ಮಾಡಿದ ಅರ್ಜಿಯನ್ನು ತಿರಸ್ಕರಿಸಿದೆ. ಕಾವೇರಿ ನೀರು ನಿರ್ವಹಣೆ ಬಿಕ್ಕಟ್ಟು ವಿಚಾರದಲ್ಲಿ ಆಗಿಂದಾಗ ಕರ್ನಾಟಕಕ್ಕೆ ಭಾರೀ ಸಂಕಷ್ಟ ತಂದಿಡುತ್ತಿದ್ದ ತಮಿಳುನಾಡಿಗೆ ಈ ಬಾರಿ ಕಾವೇರಿ ನೀರು ನಿಯಂತ್ರಣ ಸಮಿತಿ ಯಿಂದ ಮುಖಭಂಗವಾಗಿದೆ.

ನಿಧನ

ಭಾಸ್ಕರ್



ಮೈಸೂರು, ಮೇ 16– ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಭಾಸ್ಕರ್ (45) ಗುರು ವಾರ ನಿಧನರಾದರು.

ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಆದಿಚುಂಚನಗಿರಿ ಶ್ರೀಗಳ ಆಶೀರ್ವಾದ ಪಡೆದ ವಿವೇಕಾನಂದ



ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷದ ಅಭ್ಯರ್ಥಿ ವಿವೇಕಾನಂದ ಅವರು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರನ್ನು ಮಂಡ್ಯದಲ್ಲಿ ಭೇಟಿ ಮಾಡಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದ ಜಿಲ್ಲಾಧ್ಯಕ್ಷ ಟಿ.ಆರ್.ನವೀನ್.ಕುಮಾರ್, ಡಾ.ಆದರ್ಶ, ಒಕ್ಕಲಿಗರ ಸಂಘದ ತಿಮ್ಮೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಿಕ್ಷಣ ಸಚಿವರಿಗೆ ಸನ್ಮಾನ



ನೈರುತ್ಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆಯನೂರು ಮಂಜುನಾಥ್ ಅವರು ಮೈಸೂರಿನಲ್ಲಿ ನಾಮಪತ್ರ ಸಲ್ಲಿಸುವ ಮುನ್ನ ಸಚಿವ ಮಧು ಬಂಗಾರಪ್ಪ ಅವರನ್ನು ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ವತಿಯಿಂದ ಸ್ವಾಗತಿಸಿ, ಸನ್ಮಾನಿಸಿದರು. ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಪ್ರಸನ್ನಕುಮಾರ್, ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ರಾಜು ಉಪ್ಪಾರ್, ಮಹೇಶ್ ಮಡಿವಾಳ್, ರವಿಕುಂಬಾರ್, ಲೋಕೇಶ್‌ಕುಮಾರ್ ಮಾದಾಪುರ, ವಿನೋದ್‌ರಾಜ್, ವೆಂಕಟೇಶ್ ಗುಂಡ ಇನ್ನಿತರರು ಉಪಸ್ಥಿತರಿದ್ದರು.

ಅಭಿನಂದನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾದ ಕ್ಯಾತನಹಳ್ಳಿ ನಾಗರಾಜು, ಎಂ.ಮಹದೇಶ್, ಡಾ.ಶಿಲ್ಪ, ಹೆಚ್.ಎಸ್.ನಟರಾಜು ಶುಭ ಕೋರಿದರು.

ಇಂದಿನ ಮಕ್ಕಳಿಗೆ ನೈತಿಕ ಮೌಲ್ಯ ಶಿಕ್ಷಣ ಅತ್ಯಂತ ಅವಶ್ಯಕ

ಚಿಣ್ಣರ ಬೇಸಿಗೆ ಶಿಬಿರದಲ್ಲಿ ಬ್ರಹ್ಮಾಕುಮಾರಿ ಆಶಾಜೀ ಅಭಿಮತ




ಮೈಸೂರು, ಮೇ 16– ಇಂದಿನ ಶಿಕ್ಷಣ ವ್ಯವಸ್ಥೆ ವ್ಯಾಪಾರೀಕರಣವಾಗುತ್ತಿದೆ. ಅಡಿಪಾಯವಿಲ್ಲದ ಶಿಕ್ಷಣ ಪದ್ಧತಿಯಾಗಿದೆ. ನೈತಿಕ ಮೌಲ್ಯವುಳ್ಳ ಶಿಕ್ಷಣ ಪದ್ದತಿಯು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿ ಎಂದು ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾಜೀ ಇಂದಿಲ್ಲಿ ಅಭಿಪ್ರಾಯಪಟ್ಟರು.

ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿರುವ ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ 3 ದಿನಗಳ ಚಿಣ್ಣರ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಿ ಅವರು ಮಾತನಾಡುತ್ತಿದ್ದರು.

ಇಂದಿನ ಮಕ್ಕಳಿಗೆ ಗುರುಕುಲ ಶಿಕ್ಷಣ ಪದ್ಧತಿಯೂ ಅವಶ್ಯಕ. ಹಿಂದೆ ರಾಮ ಕೃಷ್ಣಾದಿಯಾಗಿ ಗುರುಕುಲದಲ್ಲೇ ಅಭ್ಯಾಸ ಮಾಡಿ, ಗುರುಗಳ ಸೇವೆ ಮಾಡಿ ನಂತರ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರು.

ಓಂ ಶಾಂತಿ ನ್ಯೂಸ್ ಸರ್ವೀಸ್ ಬಿ.ಕೆ. ಆರಾಧ್ಯ ಮಾತನಾಡಿ, ಮಕ್ಕಳ ಮನೋವಿಕಾಸಕ್ಕೆ ಆಧ್ಯಾತ್ಮಿಕ, ಜ್ಞಾನ,ಧ್ಯಾನ,ಕಲೆ, ಸಂಸ್ಕೃತಿ, ಅಜ್ಜಿ ಹೇಳುವ ಕತೆಗಳು ಇವೆಲ್ಲವು ಶಿಬಿರದಲ್ಲಿ ಮಕ್ಕಳ ಮೇಲೆ ಪ್ರಭಾವ ಬೀರಿವೆ ಎಂದರು. ಮಕ್ಕಳು ತಾವೇ ತಯಾರಿಸಿದ ಕಿರೀಟ ಧರಿಸಿಕೊಂಡು ಸಂಭ್ರಮಿಸಿದರು. ಸಮಾರಂಭದಲ್ಲಿ ಸುಶೀಲ, ನೇತ್ರ, ಸಂಗೀತ, ವೇದ, ಸರಳ, ಅನಿತ, ಲೋಕೇಶ್, ಹರ್ಷ ಹಾಜರಿದ್ದರು.

ಹೊಯ್ಸಳ ಕರ್ನಾಟಕ ಸಂಘದಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿ ಆಚರಣೆ



ಮೈಸೂರು, ಮೇ 16– ಆದಿ ಜಗದ್ಗುರು ಶಂಕರಾಚಾರ್ಯರ ತತ್ವ ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೊಯ್ಸಳ ಕರ್ನಾಟಕ ಟ್ರಸ್ಟ್ ಅಧ್ಯಕ್ಷ ಎಸ್.ಅಚ್ಯುತ ತಿಳಿಸಿದರು.

ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಸಂಘದಲ್ಲಿ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಭಕ್ತಿ ಭಾವದಿಂದ ಆಚರಿಸಲಾಯಿತು.

ರುದ್ರಾಭಿಷೇಕ, ಮಹಾ ನೈವೇದ್ಯ, ಮಹಾಮಂಗಳಾರತಿ ನಂತರ ಆದಿಗುರು ಶ್ರೀ ಶಂಕರರ ಅದ್ವೈತ ತತ್ವದ ವಿಷಯಗಳನ್ನು ತಿಳಿಸಿದ ಅವರು, ಶಂಕರಾಚಾರ್ಯರು ಶೃಂಗೇರಿ ಸೇರಿದಂತೆ ದೇಶದಲ್ಲಿ ಜೋಷಿಮಠ, ಪುರಿ, ದ್ವಾರಕಾಗಳಲ್ಲಿ 4 ಮಠಗಳನ್ನು ಸ್ಥಾಪಿಸಿದರು.

ಪ್ರತಿಯೊಬ್ಬರು ಇಂದ್ರಿಯ, ಮನಸ್ಸನ್ನು ನಿಯಂತ್ರಿಸುವುದರ ಜೊತೆಗೆ ದೇವರನ್ನು ಸ್ಮರಿಸಬೇಕು ಎಂದು ತಿಳಿಸಿದರು. ಅದ್ವೈತ ಸಿದ್ಧಾಂತದ ಮೂಲಕ ದೇಶದ ಉದ್ದಗಲಕ್ಕೂ ಸಂಚರಿಸಿ, ಸನಾತನ ಧರ್ಮವನ್ನು ಶಾಶ್ವತವಾಗಿ ಉಳಿಸುವಲ್ಲಿ ಶಂಕರಾಚಾರ್ಯರ ಜೀವನ, ಸಾಧನೆ ಇಂದಿನ ಯುವಪೀಳಿಗೆಗೆ ದಿಗ್ದರ್ಶಿಯಾಗಿದೆ ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಜಯಸಿಂಹ ಎನ್.ಎಸ್., ಖಜಾಂಚಿ ಸುಂದರಮೂರ್ತಿ, ಸಹಕಾರ್ಯದರ್ಶಿ ವಿಜಯಕುಮಾರ್, ನಿರ್ದೇಶಕರಾದ ಜಿ.ಆರ್. ವೀಣಾ, ಸದಸ್ಯರಾದ ಮಂದಗೆರೆ ಮಂಜುನಾಥ್, ನಾಗೇಂದ್ರ, ಅನಂತು ಮತ್ತಿತರರು ಇದ್ದರು. ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಲೂಟಿಯಿಂದ ಕರ್ನಾಟಕ ಪಾಪರ್

- ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಸ್ತಿ ವಿವರದಿಂದ ಸಾಬೀತು
- ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪ
- ಮೋದಿ ಆಸ್ತಿ ಮೂರು ಕೋಟಿಯಾದರೆ ಇವರಿಬ್ಬರ ಆಸ್ತಿ ಎಷ್ಟಿದೆ?
- ಪಾಕಿಸ್ತಾನ, ಕೇರಳದಂತೆ ಕರ್ನಾಟಕದಲ್ಲಿ ಆರ್ಥಿಕ ದುಸ್ಥಿತಿ
- ಸರ್ಕಾರಕ್ಕೆ ಚೆಕ್ ಮೇಟ್ ಇಡಲು ಒಳ್ಳೆಯ ಅವಕಾಶ



ಮೈಸೂರಿನ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಗುರುವಾರ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಸಂಬಂಧ ನಡೆದ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಇತರರು ಒಗ್ಗಟ್ಟು ಪ್ರದರ್ಶಿಸಿದರು.

ಮೈಸೂರು, ಮೇ16(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಲೂಟಿಯಲ್ಲಿ ನಿರತರಾಗಿರುವುದರಿಂದ ಕೇರಳ ಹಾಗೂ ಪಾಕಿಸ್ತಾನದಂತೆ ಕರ್ನಾಟಕವೂ ಪಾಪರ್ ಆಗಿದೆ ಎಂದು ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಮೈಸೂರಿನ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದರ ನಾಮಪತ್ರ ಸಲ್ಲಿಕೆಗೂ ಮುನ್ನ ನಡೆದ ಉಭಯ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಇಬ್ಬರು ನಾಯಕರು ಚುನಾವಣಾ ಆಯೋಗಕ್ಕೆ ನೀಡಿರುವ ಅಂಕಿ ಅಂಶಗಳನ್ನು ಅವಲೋಕಿಸಿದರೆ ವಾಸ್ತವಾಂಶ ತಿಳಿಯಲಿದೆ ಎಂದರು.

ಕಳೆದ 20 ವರ್ಷದ ಹಿಂದೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಆಸ್ತಿ ಎಷ್ಟಿತ್ತು. ಆದರೆ ಈಗ ಎಷ್ಟಿದೆ ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಇತಿಹಾಸದ ಮಾಹಿತಿಯಿಂದ ಇದು ತಿಳಿದು ಬರಲಿದೆ ಎಂದರು.

ನರೇಂದ್ರ ಮೋದಿ ಎರಡು ಬಾರಿ ಪ್ರಧಾನಮಂತ್ರಿ ಆಗಿದ್ದು, ಈಗ ಅವರಿಗೆ 72 ವರ್ಷ ವಯಸ್ಸಾಗಿದೆ. ಆದರೆ ನರೇಂದ್ರ ಮೋದಿ ಆಸ್ತಿ ಕೇವಲ 3 ಕೋಟಿ ರೂ. ಆದರೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಆಸ್ತಿ ಎಷ್ಟಿದೆ ಎಂಬುದು ಚುನಾವಣಾ ಆಯೋಗಕ್ಕೆ ಅವರು ನೀಡಿರುವ ಮಾಹಿತಿಯೇ ಸ್ಪಷ್ಟ ಪಡಿಸಲಿದೆ ಎಂದರು.

ಇವರು ಲೂಟಿಗೆ ಇಳಿದಿರುವ ಕಾರಣ ಕರ್ನಾಟಕ ಪಾಪರ್ ಆಗಿದೆ. ಹಲವು ಅಂಕಿ–ಅಂಶಗಳೇ ಇದನ್ನು ಹೇಳುತ್ತವೆ. ಹಾಲು ಉತ್ಪಾದಕರಿಗೆ ನೀಡಬೇಕಾದ 800 ಕೋಟಿ ಹಣ ನೀಡಿಲ್ಲ, ಅಂಬು ಲೆನ್ಸ್ ನೌಕರರಿಗೆ ವೇತನ ನೀಡಿಲ್ಲ, ಗುತ್ತಿಗೆಯಾಧಾರಿತ ಪೌರ ಕಾರ್ಮಿಕರ ವೇತನ ನೀಡಿಲ್ಲ. ಸರ್ಕಾರದ ಈ ಆರ್ಥಿಕ ದುಸ್ಥಿತಿ ಪಾಪರ್ ಆಗಿರುವುದಕ್ಕೆ ಸ್ಪಷ್ಟ ನಿದರ್ಶನ ಎಂದು ಆಪಾದಿಸಿದರು.

ಪಾಕಿಸ್ತಾನದಲ್ಲಿ 1 ಕೆ.ಜಿ.ಅಕ್ಕಿ, ಗೋಧಿ 2 ಸಾವಿರ ರೂಪಾಯಿ, ಹಾಲು, ಕಾಫಿ, ಟೀ ಎಲ್ಲಾ ಆಹಾರ ಪದಾರ್ಥಗಳ ಬೆಲೆ ದುಬಾರಿಯಾಗಿದೆ. ಪಾಕಿಸ್ತಾನ ಹಾಗೂ ಕೇರಳದ ಆರ್ಥಿಕ ಪರಿಸ್ಥಿತಿ ಕರ್ನಾಟಕದಲ್ಲೂ ಬರಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಒಂದು ವರ್ಷ ಪೂರೈಸಿದ ಈ ಸರ್ಕಾರದಲ್ಲಿ ಬಹಳಷ್ಟು ಅವ್ಯವಸ್ಥೆ ಇದೆ. ಇದನ್ನು ಸರಿಪಡಿಸದೆ ಕಾಂಗ್ರೆಸ್ ನವರು ಮೆರೆಯುತ್ತಿದ್ದಾರೆ. ಒಂದೇ ಒಂದು ಒಳ್ಳೆಯ ಕೆಲಸ ಮಾಡಿಲ್ಲ ಬರೀ ಮನೆ ಹಾಳು ಕೆಲಸದಲ್ಲಿ ತಲ್ಲೀನರಾಗಿದ್ದಾರೆ ಎಂದು ಕಿಡಿಕಾರಿದರು. ಇಂತಹ ಭ್ರಷ್ಟ ಸರ್ಕಾರಕ್ಕೆ ಬುದ್ಧಿ ಕಲಿಸಿ ಚೆಕ್ ಮೆಟ್ ಇಡಲು ವಿಧಾನ ಪರಿಷತ್ ಚುನಾವಣೆ ಒಳ್ಳೆಯ ಅವಕಾಶವಾಗಿದ್ದು, ಶಿಕ್ಷಕ ಮತದಾರರು ಕಾಂಗ್ರೆಸ್ ಸೋಲಿಸಬೇಕು ಎಂದು ಕರೆನೀಡಿದರು.

ಡಾ.ನಿಂಗರಾಜ್‌ಗೌಡ ನಾಮಪತ್ರ ವಾಪಸು ಪಡೆಯುತ್ತಾರೆ

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಗೆ ಬಿಜೆಪಿಯಿಂದ ನಾಮಪತ್ರ ಸಲ್ಲಿಸಿರುವ ಡಾ.ಈ.ಸಿ.ನಿಂಗರಾಜ್ ಗೌಡ ತಮ್ಮ ಉಮೇದುವಾರಿಕೆ ವಾಪಸ್ಸು ಪಡೆಯಲಿದ್ದಾರೆ ಎಂದು ಅಶೋಕ್ ಸ್ಪಷ್ಟಪಡಿಸಿದರು. ನಿಂಗರಾಜ್‌ಗೌಡರ ಜೊತೆ ಇಂದು ಮಾತುಕತೆ ನಡೆಸಿದ್ದೇನೆ. ಅವರು ನಾಮ ಪತ್ರ ವಾಪಸ್ಸು ಪಡೆಯಲಿದ್ದಾರೆ. ಇದ ರಲ್ಲಿ ಯಾವುದೇ ಗೊಂದಲ ಬೇಡ ಎಂದರು. ಎಲ್ಲರೂ ಒಗ್ಗಟ್ಟಾಗಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದರನ್ನು ಗೆಲ್ಲಿಸೋಣ ಎಂದು ಅಶೋಕ್ ಎರಡು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

ಸಿದ್ದರಾಮಯ್ಯ ಕಾಲ್ಗುಣದಿಂದ ಬರಗಾಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಲ್ಗುಣದಿಂದ ಕರ್ನಾಟಕದಲ್ಲಿ ಬರಗಾಲ ಬಂದಿದೆ ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಲೇವಡಿ ಮಾಡಿದರು. ಈ ಹಿಂದೆ ಐದು ವರ್ಷದ ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ ಕೂಡ ಇದೇ ರೀತಿಯ ಬರಗಾಲ ಬಂದಿತ್ತು ಈಗಿನ ಅಧಿಕಾರವಧಿಯಲ್ಲೂ ಕರ್ನಾಟಕಕ್ಕೆ ಬರಗಾಲ ಬಂದಿದೆ. ಸಿದ್ದರಾಮಯ್ಯ ಅಧಿಕಾರಾವಧಿಯ ಇತಿಹಾಸ ತೆಗೆದರೆ ಬರಗಾಲ ಇರುವುದು ಸ್ಪಷ್ಟವಾಗುತ್ತದೆ ಎಂದರು.

ಬರಗಾಲ ನಿಭಾಯಿಸುವ ಸಮರ್ಥ ಕೆಲಸ ಕೂಡ ಮಾಡಿಲ್ಲ. ಕೇಂದ್ರ ಸರ್ಕಾರ 3,545 ಕೋಟಿ ಬರ ಪರಿಹಾರ ನೀಡಿದೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ತನ್ನ ಪಾಲಿನ ಎಷ್ಟು ಹಣ ನೀಡಿದೆ ಎಂಬ ಬಗ್ಗೆ ಮಾಹಿತಿ ನೀಡಲಿ ಎಂದು ಸವಾಲು ಹಾಕಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ನೇಹಾ ಕೊಲೆಯ ದುಃಖ ಮರೆಯಾಗುವ ಮುನ್ನವೇ ಹುಬ್ಬಳ್ಳಿಯಲ್ಲಿ ಅಂಜಲಿ ಹತ್ಯೆಯಾಗಿದೆ. ಪೊಲೀಸ್ ಇಲಾಖೆ ಹಾಗೂ ಸರ್ಕಾರ ಬದುಕಿದೆಯೇ ಇಲ್ಲ ಸತ್ತಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಒಂದೆಡೆ ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆ ಆಗುತ್ತಿದೆ, ಮತ್ತೊಂದೆಡೆ ಲವ್ ಜಿಹಾದ್ ಹೆಸರಿನಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕಲು ರಾಜ್ಯ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು.

ವಂಚನೆ ಪ್ರಕರಣ: ಮೈಸೂರು ಪಾಲಿಕೆ ಸೀನಿಯರ್ ಮೆಡಿಕಲ್ ಆಫೀಸರ್ ಸೇರಿ ಇಬ್ಬರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮೇ 16(ಎಂಕೆ)– ಮುಂಗಡ ಹಣದ ಭದ್ರತೆಗಾಗಿ ನೀಡಿದ್ದ ಚೆಕ್ ಅನ್ನು ದುರುಪಯೋಗಪಡಿಸಿಕೊಂಡಿರುವ ಆರೋಪದಡಿ ನಗರಪಾಲಿಕೆ ಸಿನಿಯರ್ ಮೆಡಿಕಲ್ ಆಫೀಸರ್ ಎನ್.ಪಿ.ವೆಂಕಟೇಶ್ ಹಾಗೂ ಹಾಸನ ನಿವಾಸಿ ಕೆ.ಟಿ.ಕೇಶವ ಮೂರ್ತಿ ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಸರಸ್ವತಿಪುರಂನಲ್ಲಿ ಅನ್ನಪೂರ್ಣ ಆಫ್ ಸೆಟ್ ಪ್ರಿಂಟರ್ಸ್‌ನ ಬಿ.ಸಿ.ಮೀರಾ ಎಂಬುವರು ದೂರು ನೀಡಿದ್ದು, 2018ರಿಂದ ಪರಿಚಯವಿದ್ದ ವೆಂಕಟೇಶ್ ಅವರು ಕೆಲವು ರಿಜಿಸ್ಟರ್‌ಗಳನ್ನು ಮುದ್ರಿಸುವಂತೆ ತಿಳಿಸಿದ್ದರು. ಕೆಲಸ ಮುಗಿದ ಬಳಿಕ ಸರ್ಕಾರದ ಚೆಕ್ ಮೂಲಕ ಬಿಲ್ ಪಾವತಿ ಮಾಡುತ್ತಿದ್ದರು. ಅದರಂತೆ 2021ರಿಂದ ನಮ್ಮ ನಡುವೆ ಸಾಕಷ್ಟು ವಹಿವಾಟು ನಡೆದಿದೆ.

2022ರ ಜ.5 ರಂದು ಕಾಗದ, ಶಾಯಿ, ಮುದ್ರಣ ಕಚ್ಚಾ ಸಾಮಗ್ರಿಗಳನ್ನು ಸರಬರಾಜು ಮಾಡಲು ತಿಳಿಸಿ, ಸ್ವಲ್ಪ ಮುಂಗಡ ಹಣ ನೀಡಿ ಅದರ ಭದ್ರತೆಗಾಗಿ ನನ್ನಿಂದ ಸಹಿ ಮಾಡಿಸಿಕೊಂಡು ಖಾಲಿ ಚೆಕ್ ಪಡೆದಿದ್ದು, ವಹಿವಾಟು ಮುಗಿದ ನಂತರ ಚೆಕ್ ವಾಪಸ್ ನೀಡುವಂತೆ ಕೇಳಿದಾಗ ಇಲ್ಲಸಲ್ಲದ ನೆಪವೊಡ್ಡಿದ್ದಾರೆ.

ಬಳಿಕ ಬ್ಯಾಂಕ್‌ನಲ್ಲಿ ವೆಂಕಟೇಶ್ ಅವರಿಗೆ ನೀಡಿದ್ದ ಚೆಕ್ ಪಾವತಿಯನ್ನು ರದ್ದು ಮಾಡಿಸಿದ್ದೇನೆ. ಅದಾಗ್ಯೂ ಭದ್ರತೆಗಾಗಿ ನೀಡಿದ ಚೆಕ್ ಅನ್ನು ದುರುಪಯೋಗಪಡಿಸಿ ಕೊಂಡಿದ್ದು, ನಾನು ಹಾಸನದ ಕೆ.ಟಿ.ಕೇಶವ ಮೂರ್ತಿ ಅವರಿಂದ 4,50,000 ರೂ. ಸಾಲ ಪಡೆದು ಭದ್ರತೆಗಾಗಿ ಅದೇ ಚೆಕ್ ನೀಡಿರು ವಂತೆ ಬರೆದುಕೊಂಡು ಬೌನ್ಸ್ ಮಾಡಿಸಿ ದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣದ ಬಗ್ಗೆ ಇಬ್ಬರ ವಿರುದ್ಧ ಮೀರಾ, ಮೈಸೂರಿನ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ನ್ಯಾಯಾಲಯವು ಈ ಇಬ್ಬರ ವಿರುದ್ಧ ವಂಚನೆ ಪ್ರಕರಣ ದಾಖಲಿಸುವಂತೆ ನೀಡಿದ ಆದೇಶದ ಮೇರೆಗೆ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಪೋರೇಟ್ ವಲಯದಲ್ಲಿನ ಸಾಮಾಜಿಕ ಜವಬ್ದಾರಿ ಕುರಿತು ವಿಶೇಷ ಉಪನ್ಯಾಸ



ಮೈಸೂರು, ಮೇ 16(ಎಸ್‌ಬಿಡಿ)– ಕಂಪನಿಗಳ ಸಮರ್ಪಕ ಸಾಮಾಜಿಕ ಜವಾಬ್ದಾರಿ ನಿರ್ವಹಣೆಯಿಂದ ಸಮಾಜದಲ್ಲಿ ಸುಧಾರಣೆ ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕಿ ಪ್ರೊ. ಎಂ.ಎಸ್.ಸಪ್ನಾ ಅಭಿಪ್ರಾಯಿಸಿದರು.

ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಗುರುವಾರ ಕಾರ್ಪೊರೇಟ್ ವಲಯದಲ್ಲಿನ ಸಾಮಾಜಿಕ ಜವಾಬ್ದಾರಿ ಕುರಿತ ವಿಶೇಷ ಉಪನ್ಯಾಸ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಎಂಬುದು ಎಲ್ಲಾ ಕಂಪನಿಗಳೂ ತಮ್ಮ ವ್ಯವಹಾರದಲ್ಲಿ ಅಳವಡಿಸಿಕೊಳ್ಳಬೇಕಾದ ತಂತ್ರ ಎಂದರು. ಕಾರ್ಪೊರೇಟ್ ಸಂಸ್ಥೆಗಳು ಉತ್ತಮ ಕಾರ್ಯಗಳ ಮೂಲಕ ಸಮಾಜದ ಸುಧಾ ರಣೆಯೊಂದಿಗೆ ಜಗತ್ತಿನ ಬದಲಾವಣೆಗೆ ಸಹಕಾರಿಯಾಗಬಹುದು. ಮಾನವ ಹಕ್ಕುಗಳ ಮೌಲ್ಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ ನೈತಿಕ ವ್ಯವಹಾರ ನಡೆಸುವ ಬದ್ಧತೆಯನ್ನು ಸಂಸ್ಥೆಗಳು ಹೊಂದಬೇಕು. ಸಿಎಸ್‌ಆರ್ ನಿಧಿ ಸೇವೆಗಳಿಗೆ ಸೀಮಿತವಾಗದೆ ಪರಿಸರ ಸಂರಕ್ಷಣೆಯ ಹವ್ಯಾಸಗಳನ್ನು ರೂಡಿಸಿಕೊಳ್ಳಬೇಕು ಎಂದು ಹೇಳಿದರು. ಉಪನ್ಯಾಸದ ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಇದೇ ವೇಳೆ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಯರಾದ ಡಾ.ಯಮುನಾ ಬಿ.ರಾಜ್ ಹಾಗೂ ಸಿಸ್ಟರ್ ಅರ್ಚನಾ ಮೇರಿ ಅವರು ಪ್ರೊ.ಸಪ್ನಾ ಅವರನ್ನು ಅಭಿನಂದಿಸಿದರು.

ಕಂದಾಯ ಸೇವೆಗಳ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ

ಮೈಸೂರು,ಮೇ 16(ಪಿಎಂ)– ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಮೇ 13ರಿಂದ 27ರವರೆಗೆ 15 ದಿನಗಳ ಕಾಲ ನಡೆಯುವ ಕಂದಾಯ ಸೇವೆಗಳ ವಿಶೇಷ ಅಭಿಯಾನಕ್ಕೆ ನಾಲ್ಕನೇ ದಿನವಾದ ಗುರುವಾರವೂ ಉತ್ತಮ ಪ್ರಕ್ರಿಯೆ ವ್ಯಕ್ತವಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಕಂದಾಯ ಇಲಾಖೆ ಸೇವೆಗಳನ್ನು ಸಾರ್ವಜನಿಕರಿಗೆ ತ್ವರಿತಗತಿಯಲ್ಲಿ ತಲುಪಿಸಲು ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ಜಿಲ್ಲೆಯ 9 ತಾಲೂಕುಗಳಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಆಯಾಯ ಗ್ರಾಮಗಳಲ್ಲೇ ಸೇವೆ ಒದಗಿಸಲಿದ್ದಾರೆ. ಅಂತೆಯೇ ಗುರುವಾರ 19,069 ಆರ್‌ಟಿಸಿ–ಆಧಾರ್ ಸೀಡಿಂಗ್, 92 ಎನ್‌ಪಿಸಿಐ, 1,331 ಫ್ರೂಟ್ಸ್ ಐಡಿ ಅಪ್ಡೇಷನ್ ಮಾಡಲಾಗಿದೆ.

2,248 ಲ್ಯಾಂಡ್ ಬೀಡ್ ಅಪ್ಡೇಷನ್ ಆಗಿದ್ದು, ಬರ ಪರಿಹಾರ ಸಂಬಂಧ 258, ಬಗರ್‌ಹುಕುಂ 730, ಮಳೆ ಹಾನಿ ಸಂಬಂಧ 28 ಪ್ರಕರಣಗಳಲ್ಲಿ ಪ್ರಗತಿ ಸಾಧಿಸಲಾಗಿದೆ. ಸಕಾಲ ಸಂಬಂಧ 962 ಅರ್ಜಿಗಳನ್ನು ಸ್ವೀಕೃತಗೊಂಡಿವೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅಭಿಯಾನದ ಪ್ರಯೋಜನ ಪಡೆದುಕೊಳ್ಳುವಂತೆ ಸಾರ್ವಜನಿಕರಲ್ಲಿ ಕೋರಲಾಗಿದೆ.

ಸಾಮಾಜಿಕ ಕಾರ್ಯ ಸಂಬಂಧ ವಾರ್ಷಿಕ ರಾಷ್ಟ್ರೀಯ ಸಮ್ಮೇಳನ

ಕೌಶಲ್ಯತೆ ಇದ್ದರೆ ಸಮಸ್ಯೆಗೆ ಪರಿಹಾರ ಸುಲಭ

- ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಅಭಿಮತ
- ಸಾಮಾಜಿಕ ಕಾರ್ಯದಿಂದ ಮಾನವ ಸಂಬಂಧ ಸುಧಾರಣೆ



'ಸಾಮಾಜಿಕ ಕಾರ್ಯದಲ್ಲಿ ಹೊಸ ಆಯಾಮಗಳು; ಬದಲಾಗುತ್ತಿರುವ ಸಂಚರಣೆ, ಶಿಕ್ಷಣದ ವ್ಯಾಪ್ತಿ, ಸಂಶೋಧನೆ ಮತ್ತು ಅಭ್ಯಾಸ' ಶೀರ್ಷಿಕೆಯ ಮೂರು ದಿನಗಳ 'ವಾರ್ಷಿಕ ರಾಷ್ಟ್ರೀಯ ಸಮ್ಮೇಳನ'ವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಪ್ರೊಫೆಷನಲ್ ಸೋಶಿಯಲ್ ವರ್ಕ್(ಐಎಫ್‌ಎಸ್‌ಡಬ್ಲ್ಯೂ) ಖಜಾಂಚಿ ಎಂ.ವಿ.ಶ್ರೀಗಣೇಶ್ ಮತ್ತಿತರರಿದ್ದರು.

ಮೈಸೂರು, ಮೇ 16(ಎಂಕೆ)– ಪ್ರತಿಯೊಂದು ಸಮಸ್ಯೆಗಳಿಗೂ ಪರಿಹಾರವಿದೆ. ಆದರೆ ಸಂಕೀರ್ಣವಾಗಿರುವ ಪರಿಹಾರಗಳನ್ನು ಕಂಡುಕೊಳ್ಳಲು ನಮ್ಮಲ್ಲಿ ಬದ್ಧತೆ, ಸಹಾನುಭೂತಿ, ಕಲಿಕಾ ಸ್ಥಿರತೆ, ಸಂವಹನ ಹಾಗೂ ಕೌಶಲ್ಯತೆಯ ಅವಶ್ಯವಿದ್ದು, ಸದಾ ಸಾಧ್ಯತೆಗಳ ಕಡೆಗೆ ಗಮನಹರಿಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸಮಾಜ ಕಾರ್ಯ ಅಧ್ಯಯನ ಮಾಡುತ್ತಿರುವ ಪದವಿ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಗುರುವಾರ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗ ಹಾಗೂ ಇಂಡಿಯನ್ ಸೊಸೈಟಿ ಆಫ್ ಪ್ರೊಫೆಷನಲ್ ಸೋಶಿಯಲ್ ವರ್ಕ್(ಐಎಸ್‌ಪಿಎಸ್‌ಡಬ್ಲ್ಯೂ) ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಸಾಮಾಜಿಕ ಕಾರ್ಯದಲ್ಲಿ ಹೊಸ ಆಯಾಮಗಳು; ಬದಲಾಗುತ್ತಿರುವ ಸಂಚರಣೆ, ಶಿಕ್ಷಣದ ವ್ಯಾಪ್ತಿ, ಸಂಶೋಧನೆ ಮತ್ತು ಅಭ್ಯಾಸ' ಶೀರ್ಷಿಕೆಯ ಮೂರು ದಿನಗಳ 'ವಾರ್ಷಿಕ ರಾಷ್ಟ್ರೀಯ ಸಮ್ಮೇಳನ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ಸಮ್ಮೇಳನವು ಸಮಾಜ ಕಾರ್ಯದ ಹಲವಾರು ಹೊಸ ಹೊಸ ಆಲೋಚನೆಗಳ ವಿನಿಮಯಕ್ಕೆ ಸಹಕಾರಿಯಾಗಲಿದೆ ಎಂಬ ವಿಶ್ವಾಸವಿದೆ. ಆಧುನಿಕ ತಂತ್ರಜ್ಞಾನ ಯುಗದಲ್ಲಿ ಅವಕಾಶಗಳು ಹೆಚ್ಚಾದಂತೆ, ಸಮಸ್ಯೆಗಳು ಮತ್ತು ಸವಾಲುಗಳು ಹೆಚ್ಚಾಗುತ್ತವೆ. ಆದರೆ ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದ್ದು, ಸದಾ ಸಾಧ್ಯತೆಯ ಕಡೆಗೆ ನಮ್ಮ ಗಮನ ಹರಿಸುವುದರಿಂದ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಮುಖ್ಯವಾಗಿ ಸಮಾಜ ಕಾರ್ಯ ಅಧ್ಯಯನ ವಿದ್ಯಾರ್ಥಿಗಳ ನೋಟ ಸಾಧ್ಯತೆಗಳ ಕಡೆಯೇ ಇರಬೇಕೇ ಹೊರತು ಸಮಸ್ಯೆಗಳ ಕಡೆಗಿರಬಾರದು ಎಂದು ಕಿವಿಮಾತು ಹೇಳಿದರು.

ಸಾಮಾಜಿಕ ಕಾರ್ಯಗಳಿಂದ ಮಾನವ ಸಂಬಂಧ ಗಟ್ಟಿಯಾಗಲಿದೆ. ಹಾಗಾಗಿ ನಮ್ಮ ಚಿಂತನೆ ಸಾಧ್ಯತೆಗಳತ್ತ ಇರಬೇಕು. ಆಧುನಿಕ ತಂತ್ರಜ್ಞಾನ ಯುಗದಲ್ಲಿ ಸಮಸ್ಯೆಗಳ ಪರಿಹಾರಕ್ಕೆ ನಮ್ಮಲ್ಲಿ ಬದ್ದತೆ, ಸಹಾನುಭೂತಿ, ಕಲಿಕಾ ಸ್ಥಿರತೆ, ಸಂವಹನ ಹಾಗೂ ಕೌಶಲ್ಯತೆಯ ಅವಶ್ಯವಿದೆ. ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಅರಿತು ಪರಿಹಾರ ಕಂಡುಕೊಳ್ಳಬೇಕು ಎಂಬ ಕೌಶಲ್ಯತೆ ನಮ್ಮಲ್ಲಿದ್ದರೆ, ಪರಿಹಾರ ಸುಲಭವಾಗಿ ದೊರೆಯಲಿದೆ. ಸಂಕೀರ್ಣವಾಗಿರುವ ಪರಿಹಾರಗಳನ್ನು ಕಂಡು ಕೊಳ್ಳುವ ಸಾಮರ್ಥ್ಯ, ಪ್ರೇರಣೆ ಹಾಗೂ ನಮ್ಮ ವರ್ತನೆಯೂ ಮುಖ್ಯವಾಗುತ್ತದೆ ಎಂದರು.

ಸೂಪರ್ ಪವರ್: ಆತ್ಮ ವಿಶ್ವಾಸ, ಸ್ವಯಂ ನಂಬಿಕೆ ಮತ್ತು ಕಠಿಣ ಪರಿಶ್ರಮ ನಿಮ್ಮನ್ನು ಸಾಧನೆಯತ್ತ ಮುನ್ನಡೆಸುವ ಸೂಪರ್ ಪವರ್‌ಗಳಾಗಿವೆ. ಅದರಂತೆಯೇ ಸ್ವ–ಪ್ರಯತ್ನ ಹಾಗೂ ಸತ್ಯದ ಮೇಲೆ ನಂಬಿಕೆ ಇರಬೇಕು. ಮಾಡುವ ಕೆಲಸದಲ್ಲಿ ಸತ್ಯ ಅಡಗಿರಬೇಕು. ಇತರರನ್ನು ನಂಬುವುದಕ್ಕಿಂತ ಸ್ವಯಂ ನಂಬಿಕೆಯೂ ಸಾಮಾಜಿಕ ಕಾರ್ಯ ಕ್ಷೇತ್ರದಲ್ಲಿ ಪರಿಣಾಮಕಾರಿ. ಆತುರದ ನಿರ್ಧಾರಗಳಿಗಿಂತ ಆಲೋಚನಾ ನಿರ್ಧಾರಗಳು ಸಮಸ್ಯೆಗಳಿಗೆ ಪರಿಹಾರ ನೀಡಲಿವೆ ಎಂದು ತಿಳಿಹೇಳಿದರು.

ಹೊಸತನ ಅಳವಡಿಕೆ: ಮುಂಬೈನ ಟಾಟಾ ಸಮಾಜ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಪ್ರೊ.ಮನೀಶ್ ಕುಮಾರ್ ಝಾ ಮಾತನಾಡಿ, ಸಮಾಜ ಕಾರ್ಯ ಅಧ್ಯಯನದಲ್ಲಿ ಪಠ್ಯಕ್ರಮ ಮತ್ತು ಬೋಧನಾ ಕ್ರಮದಲ್ಲಿ ಹೊಸತನ ಅಳವಡಿಸಿಕೊಳ್ಳಬೇಕು. ಸಂಶೋಧನೆಗಳು ವಾಸ್ತವ ಅಂಶಗಳನ್ನು ಒಳಗೊಂಡಿರಬೇಕು. ಹಾಗೆಯೇ ಸಂಶೋಧನೆಗಳಲ್ಲಿ ಭಾಗವಹಿಸುವಿಕೆ ಇರಬೇಕು ಎಂದು ಸಲಹೆ ನೀಡಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಪ್ರೊಫೆಷನಲ್ ಸೋಶಿಯಲ್ ವರ್ಕ್(ಐಎಫ್‌ಎಸ್‌ಡಬ್ಲ್ಯೂ) ಖಜಾಂಚಿ ಎಂ.ವಿ.ಶ್ರೀಗಣೇಶ್, ಬೆಂಗಳೂರು ನಿಮ್ಹಾನ್ಸ್‌ನ ಮನೋವೈದ್ಯಕೀಯ ಸಾಮಾಜಿಕ ಕಾರ್ಯ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಐ.ಎ.ಷರೀಫ್, ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ, ಕೆಎಸ್‌ಒಯು ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಐಎಸ್‌ಪಿಎಸ್‌ಡಬ್ಲ್ಯೂ ಅಧ್ಯಕ್ಷ ಹಾಗೂ ತುಮಕೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಬಿ. ರಮೇಶ್, ಐಎಸ್‌ಪಿಎಸ್‌ಡಬ್ಲ್ಯೂ ಉಪಾಧ್ಯಕ್ಷರಾದ ಪ್ರೊ.ಕೆಜಿ.ಪರಶುರಾಮ, ಪ್ರೊ.ಆರ್. ಶಿವಪ್ಪ, ಕಾರ್ಯದರ್ಶಿ ಪ್ರೊ.ಆರ್.ಧನಶೇಖರ ಪಾಂಡಿಯನ್, ಸಮ್ಮೇಳನ ಸಂಘಟನಾ ಕಾರ್ಯದರ್ಶಿಗಳಾದ ಪ್ರೊ.ಬಿ.ಎಸ್. ಗುಂಜಾಲ್, ಡಾ.ಚಂದ್ರಮೌಳಿ, ಡ.ಹೆಚ್.ಪಿ.ಜ್ಯೋತಿ ಮತ್ತಿತರರಿದ್ದರು.

ಕೊಡಗಿನ ರಕ್ಷಣೆಗೆ ಕೊಡಗು ಬಚಾವೊ ಆಂದೋಲನಕ್ಕೆ ಸಂಕಲ್ಪ



ಶ್ರೀಮಂಗಲದಲ್ಲಿ ಕೊಡಗು ಮಾರಕ ಯೋಜನೆಗಳ ವಿರೋಧಿ ಹೋರಾಟ ವೇದಿಕೆಯ ಪ್ರಮುಖರ ತುರ್ತು ಸಭೆ ನಡೆಯಿತು.

ಶ್ರೀಮಂಗಲ, ಮೇ 16–ಈಗಾಗಲೇ ಕೊಡಗಿನಲ್ಲಿ ಭೂ ಮಾಫಿಯಾಗಳು, ಪ್ರಭಾವಿಗಳು ಬಂಡವಾಳ ಹೂಡಿಕೆ ಮಾಡುತ್ತಿದ್ದು, ಜಾಗ ಖರೀದಿಸಿ ಕೃಷಿಯೇತರ ಮತ್ತು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಲ್ಲಿ ತೊಡಗಿದ್ದಾರೆ. ಇದರಿಂದ ಕೊಡಗಿನ ಭೂಸ್ವರೂಪಕ್ಕೆ ದೊಡ್ಡ ಅಪಾಯ ಉಂಟಾಗಲಿದೆ. ಆದ್ದರಿಂದ ಭೂ ಪರಿವರ್ತನೆಗಳನ್ನು ರದ್ದುಗೊಳಿಸಬೇಕು ಎಂದು ಕೊಡಗು ಮಾರಕ ಯೋಜನೆಗಳ ವಿರೋಧಿ ಹೋರಾಟ ವೇದಿಕೆ ಪ್ರಮುಖರು ಒತ್ತಾಯಿಸಿದರು.

ಈ ಸಂಬಂಧ ನಡೆದ ತುರ್ತು ಸಭೆಯಲ್ಲಿ ಮಾತನಾಡಿದ ವೇದಿಕೆ ಸಂಚಾಲಕ ಚೊಟ್ಟೆಕ್ ಮಾಡ ರಾಜೀವ್ ಬೋಪಯ್ಯ, ಕೊಡಗಿನ ಭೂ ಸ್ವರೂಪ ರಕ್ಷಣೆಗೆ ಕೊಡಗು ಬಚಾವೊ ಆಂದೋಲನ ಹಮ್ಮಿಕೊಳ್ಳಲಾಗುವುದು. ಕೊಡಗಿನಲ್ಲಿ ಅವ್ಯಹತವಾಗಿ ಭೂ ಪರಿವರ್ತನೆಯಿಂದ ಪರಿಸರ ನಾಶವಾಗಿ ಕೊಡಗಿನ ಮೂಲ ಭೂ ಸ್ವರೂಪ ಬದಲಾಗುತ್ತಿದ್ದು, ಈ ಬಗ್ಗೆ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಕೊಡಗು ತನ್ನ ಭೂ ಸ್ವರೂಪವನ್ನು ಕಳೆದುಕೊಳ್ಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈಗಾಗಲೇ ವೇದಿಕೆ ವತಿಯಿಂದ 10 ವರ್ಷಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಈ ಬಗ್ಗೆ ಯಾವುದೇ ಪರಿಹಾರವಾಗಿಲ್ಲ. ಕೊಡಗಿನಲ್ಲಿ ನಿರಂತರವಾಗಿ ನೂರಾರು ಎಕರೆ ಭೂ ಪರಿವರ್ತನೆಯಿಂದ ತೋಟಗಳಲ್ಲಿರುವ ಸಾವಿರಾರು ಮರಗಳು ಹನನವಾಗುತ್ತಿವೆ. ಗದ್ದೆಗಳು ಸಹ ಕೃಷಿಯಿಂದ ವಿಮುಖವಾಗಿ ವಾಣಿಜ್ಯ ಚಟುವಟಿಕೆಗಳ ಕೇಂದ್ರವಾಗುತ್ತಿವೆ. ಇದರಿಂದ ಜಿಲ್ಲೆಯ ನದಿಗಳು ಮುಂದಿನ ದಿನಗಳಲ್ಲಿ ಬರಡಾಗುವ ಅಪಾಯವಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕೊಡಗಿಗೆ ಟಿಂಬರ್, ಬಾಳೆ, ಕಾಫಿ, ಕಾಳುಮೆಣಸು, ಹೋಟೆಲ್, ಆಭರಣ ವ್ಯಾಪಾರಕ್ಕೆ ಬಂದವರು ರಿಯಲ್ ಎಸ್ಟೇಟ್ ಮೂಲಕ ಕೊಡಗಿನ ಪವಿತ್ರ ಭೂಮಿಯನ್ನು ಮಾರಾಟ ಮಾಡುವ ಕಸುಬಿನಲ್ಲಿ ತೊಡಗಿಸಿಕೊಂಡಿದ್ದಾರೆ. ಕೊಡಗಿನಲ್ಲಿ ಸಾವಿರಾರು ಎಕರೆ ಭೂ ಮಾಫಿಯಾ ಹಾಗೂ ಪ್ರಭಾವಿಗಳ ವಶದಲ್ಲಿದ್ದು, ಸಾಮಾನ್ಯ ಜನರಿಂದ ದುಬಾರಿ ದರಕ್ಕೆ ಖರೀದಿ ಮುಂದುವರೆದಿದೆ ಎಂದು ಆರೋಪಿಸಿದರು.

ಭಾರತೀಯ ಕಿಸಾನ್ ಸಂಘ ಜಿಲ್ಲಾಧ್ಯಕ್ಷ ಮುಕ್ಕಾಟೀರ ಪ್ರವೀಣ್ ಭೀಮಯ್ಯ ಮಾತನಾಡಿ, ಕಾವೇರಿ ನದಿಯ ತವರು ಕೊಡಗಿನಲ್ಲಿ ನಿರಂತರವಾಗಿ ನಡೆಯುತ್ತಿರುವ ಇಂತಹ ಭೂ ಪರಿವರ್ತನೆಯಿಂದ ಜಿಲ್ಲೆಯ ಕೃಷಿ ಸಮುದಾಯ ಮಾತ್ರವಲ್ಲದೆ, ಕಾವೇರಿ ನದಿ ನೀರನ್ನು ಅವಲಂಬಿಸಿರುವ ರಾಜ್ಯದ ಎಲ್ಲರ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಭೆಯಲ್ಲಿ ಪೊನ್ನಂಪೇಟೆ ಎಪಿಸಿಎಂಎಸ್ ಮಾಜಿ ಅಧ್ಯಕ್ಷ ಮಲ್ಲಮಾಡ ಪ್ರಭು ಪೂಣಚ್ಚ, ಕೊಡಗು ಹಿಂದೂ ಬಿಸಿನೆಸ್ ಫೋರಂ ಕಾರ್ಯದರ್ಶಿ ಮಚ್ಚಮಾಡ ಅನೀಶ್ ಮಾದಪ್ಪ, ಕೊಡಗು ಬೆಳೆಗಾರ ಒಕ್ಕೂಟದ ಕಾರ್ಯದರ್ಶಿ ಅಣ್ಣೀರ ಹರೀಶ್ ಮಾದಪ್ಪ, ಸಾಮಾಜಿಕ ಕಾರ್ಯಕರ್ತ ಉಳುವಂಗಡ ಲೋಹಿತ್ ಭೀಮಯ್ಯ ಹಾಜರಿದ್ದರು.

ಹತ್ಯೆಗೀಡಾದ ಬಾಲಕಿ ಮನೆಗೆ ಗೃಹ ಸಚಿವರ ಭೇಟಿ

ಮೀನಾಳ ಪೋಷಕರಿಗೆ ಸಾಂತ್ವನ ಹೇಳಿದ ಡಾ.ಜಿ.ಪರಮೇಶ್ವರ್



ಸೋಮವಾರಪೇಟೆ ತಾಲೂಕಿನ ಮುಟ್ಲು ಗ್ರಾಮದಲ್ಲಿ ಹತ್ಯೆಗೀಡಾದ ಮೀನಾಳ ಮನೆಗೆ ಭೇಟಿ ನೀಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆಕೆಯ ಪೋಷಕರಿಗೆ ಸಾಂತ್ವನ ಹೇಳಿದರು.

ಮಡಿಕೇರಿ, ಮೇ 16– ಕೆಲ ದಿನಗಳ ಹಿಂದೆ ಸೋಮವಾರಪೇಟೆ ತಾಲೂಕಿನ ಮುಟ್ಲು ಗ್ರಾಮದಲ್ಲಿ ಬರ್ಬರವಾಗಿ ಹತ್ಯೆಗೀಡಾದ ಶಾಲಾ ಬಾಲಕಿ ಯು.ಎಸ್. ಮೀನಾ(16)ಳ ಮನೆಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಗುರುವಾರ ಭೇಟಿ ನೀಡಿ, ಆಕೆಯ ಪೋಷಕರಿಗೆ ಸಾಂತ್ವನ ಹೇಳಿದರು.

ಘಟನೆ ಕುರಿತು ಪೋಷಕರಿಂದ ಮಾಹಿತಿ ಪಡೆದು, ಅಮಾಯಕ ಬಾಲಕಿ ಸಾವಿಗೆ ಸಂತಾಪ ಸೂಚಿಸಿದರು. ಸರ್ಕಾರ ತಮ್ಮೊಂದಿಗೆ ಇರುತ್ತದೆ ಎಂದು ಧೈರ್ಯ ತುಂಬಿದರಲ್ಲದೇ, ವೈಯಕ್ತಿಕ ಧನಸಹಾಯ ನೀಡಿದರು. ಇದೇ ವೇಳೆ ಮೃತ ಬಾಲಕಿಯ ಪೋಷಕರ ಮನೆ ಹಾಗೂ ಅವರ ಆರ್ಥಿಕ ಸ್ಥಿತಿ ಕಂಡು ಗೃಹ ಸಚಿವರು ಬೇಸರ ವ್ಯಕ್ತಪಡಿಸಿದರು.

ಬಾಲಕಿಯ ಹತ್ಯೆ ನಡೆಯುವ ಸಂದರ್ಭ ಆಕೆಯ ತಾಯಿ ಜಾನಕಿ ಅವರ ಕೈಗೂ ಕತ್ತಿ ಏಟು ತಗುಲಿ ನರ ತುಂಡರಿಸಲ್ಪಟ್ಟಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಎಂದು ಶಾಸಕ ಡಾ.ಮಂತರ್ ಗೌಡ ಗೃಹ ಸಚಿವರಿಗೆ ತಿಳಿಸಿದರು.

ಸ್ಪೆಷಲ್ ಪ್ರಾಸಿಕ್ಯೂಟರ್ ನೇಮಕ: ಮದುವೆ ಮುಂದೂಡಿದ ಕಾರಣಕ್ಕೆ ಬಾಲಕಿಯನ್ನು ಹತ್ಯೆ ಮಾಡಲಾಗಿದೆ. ಈ ಕೃತ್ಯವನ್ನು ಸಹಿಸಲು ಸಾಧ್ಯವಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಮೀನಾಳ ಕುಟುಂಬಕ್ಕೆ ಪೊಲೀಸ್ ಇಲಾಖೆ ಮತ್ತು ಸರ್ಕಾರದ ಕಡೆಯಿಂದ ನ್ಯಾಯ ಒದಗಿಸುತ್ತೇವೆ. ಈ ಪ್ರಕರಣಕ್ಕೆ ವಿಶೇಷವಾಗಿ ಸ್ಪೆಷಲ್ ಪ್ರಾಸಿಕ್ಯೂಟರ್ ನೇಮಕ ಮಾಡಲಾಗುವುದು. ಇಂತಹ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳಿದ್ದು, ಅವುಗಳ ಮೂಲಕ ಕಾನೂನು ಕ್ರಮ ಜರುಗಿಸಲಾಗುವುದು. ಸರ್ಕಾರ ಈ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಿದೆ ಎಂದು ಭರವಸೆ ನೀಡಿದರು.

ಪ್ರಸ್ತುತ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು, ಬಳಿಕ ಮೃತ ಮೀನಾ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲಾಗುವುದು. ರಾಜ್ಯದ ಅಲ್ಲಲ್ಲಿ ನಡೆದ ಹತ್ಯೆ ಪ್ರಕರಣಗಳ ಕುರಿತು ಪ್ರತಿಕ್ರಿಯಿಸಿದ ಸಚಿವ ಪರಮೇಶ್ವರ್, ಈ ಕೊಲೆಗಳು ಪೂರ್ವಯೋಜಿತ ಕೃತ್ಯ ಅಲ್ಲ. ಆ ಕ್ಷಣಕ್ಕೆ ಮಾಡಿದ ಕೃತ್ಯಗಳು ಎಂದು ಕಾಣುತ್ತಿದೆ. ರಾಜ್ಯ ಪೊಲೀಸ್ ಇಲಾಖೆ ಸಮರ್ಥವಾಗಿದ್ದು, ಈ ಬಗ್ಗೆ ತನಿಖೆ ನಡೆಯುತ್ತಿದೆ. ವರದಿ ಬಂದ ಬಳಿಕ ಸತ್ಯಾಂಶ ಬಯಲಿಗೆ ಬರಲಿದೆ ಎಂದು ಹೇಳಿದರು.

'ಶೆಟ್ಟರ್ ಸರ್ಟಿಫಿಕೇಟ್' ಬೇಕಾಗಿಲ್ಲ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಸಿಎಂ ಮತ್ತು ಗೃಹ ಸಚಿವರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವರು, ಜಗದೀಶ್ ಶೆಟ್ಟರ್ ಕೂಡ ಮುಖ್ಯಮಂತ್ರಿಗಳಾಗಿದ್ದವರು. ಅವರ ಕಾಲದಲ್ಲಿ ರಾಜ್ಯದಲ್ಲಿ ಎಷ್ಟು ಕೊಲೆ, ಅತ್ಯಾಚಾರ, ಕ್ರಿಮಿನಲ್ ಕೇಸ್‌ಗಳಾಗಿತ್ತು ಎಂದು ಅಂಕಿಅಂಶ ತೆಗೆದು ನೋಡಿದರೆ ಗೊತ್ತಾಗುತ್ತದೆ. ಅವರ ಸರ್ಟಿಫಿಕೇಟ್ ನಮಗೆ ಬೇಕಾಗಿಲ್ಲ. ಜನರು ನಮಗೆ ಸರ್ಟಿಫಿಕೇಟ್ ಕೊಡುತ್ತಾರೆ ಎಂದು ಖಾರವಾಗಿ ಹೇಳಿದರು.

ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ಕುರಿತು ಎಸ್‌ಐಟಿ ತನಿಖೆಗೆ ಸಂಬಂಧಿಸಿದಂತೆ ಸುದ್ದಿಗಾರರ ಪ್ರಶ್ನೆಗೆ ಸಿಡಿಮಿಡಿಗೊಂಡ ಗೃಹ ಸಚಿವರು, ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದಿಲ್ಲ. ಇಲ್ಲಿ ಆ ಬಗ್ಗೆ ಮಾತನಾಡೋದು ಸರಿಯಲ್ಲ. ನೀವು ಒತ್ತಾಯ ಮಾಡೋದು ಕೂಡ ಸರಿಯಲ್ಲ ಎಂದು ಹೇಳಿ ಉತ್ತರ ನೀಡದೆ ತೆರಳಿದರು.

ಈ ಸಂದರ್ಭ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ವರಿಷ್ಠಾಧಿಕಾರಿ ಸುಂದರ್‌ರಾಜ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ ಕೊಟ್ಟಮುಡಿ ಹಂಸ, ಜಿಪಂ ಮಾಜಿ ಸದಸ್ಯೆ ಕೆ.ಪಿ. ಚಂದ್ರಕಲಾ, ಕಾಂಗ್ರೆಸ್ ಪ್ರಮುಖರಾದ ಸೂರಜ್ ಹೊಸೂರು, ಮಡಿಕೇರಿ ನಗರಸಭೆ ನಾಮನಿರ್ದೇಶಿತ ಸದಸ್ಯರಾದ ಮಂಡೀರ ಸದಾ ಮುದ್ದಪ್ಪ, ಜಗದೀಶ್, ಮುತ್ತುರಾಜ್ ಗ್ರಾಮಸ್ಥರು ಹಾಜರಿದ್ದರು.

ಕುಶಾಲನಗರ ಸುತ್ತಮುತ್ತ ಜೋರು ಮಳೆ



ಕುಶಾಲನಗರದಲ್ಲಿ ಜೋರು ಮಳೆಯಿಂದ ತಗ್ಗು ಪ್ರದೇಶ ಜಲಾವೃತ್ತಗೊಂಡಿರುವುದು.

ಕುಶಾಲನಗರ, ಮೇ 16–ತಾಲೂಕಿನ ವಿವಿಧೆಡೆ ಗುರುವಾರ ಸಂಜೆ ಧಾರಾಕಾರವಾಗಿ ಗಾಳಿ ಮಳೆ ಸುರಿಯಿತು.

ಬೆಳಗ್ಗೆಯಿಂದಲೇ ಮೋಡಕವಿದ ವಾತಾವರಣ ಇತ್ತು. ಸಂಜೆ ತುಂತುರು ಹಾನಿಗಳೊಂದಿಗೆ ಗಾಳಿ ಮಳೆ ಆರಂಭಗೊಂಡಿತು. ಕುಶಾಲನಗರ, ಗುಡ್ಡೆಹೊಸೂರು, ಹಾರಂಗಿ, ಮುಳ್ಳುಸೋಗೆ, ಕೂಡಿಗೆ, ಹೆಬ್ಬಾಲೆ, ಅಳುವಾರ, ಸಿದ್ದಲಿಂಗಪುರ, ಬಾಣವಾರ, ಆಲೂರು ಸೇರಿದಂತೆ ವಿವಿಧೆಡೆ ಒಂದು ತಾಸಿಗೂ ಹೆಚ್ಚು ಕಾಲ ಜೋರಾಗಿ ಮಳೆ ಸುರಿಯಿತು. ದಿಢೀರನೇ ಬಂದ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಚರಂಡಿಗಳಲ್ಲಿ ತ್ಯಾಜ್ಯಗಳು ಕಟ್ಟಿಕೊಂಡಿದ್ದರಿಂದ ಮಳೆ ನೀರು ರಸ್ತೆ ಮೇಲೆ ಹರಿಯಿತು. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಯಿತು. ತಗ್ಗು ಪ್ರದೇಶಗಳು ಜಲಾವೃತ್ತಗೊಂಡವು. ಪಟ್ಟಣದ ಗಂಧದ ಕೋಟಿ ಬಳಿಯ ಕಾರು ಚಾಲಕರು ಮತ್ತು ಮಾಲೀಕರ ಬಡಾವಣೆಯಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಅಸ್ತವ್ಯಸ್ತಗೊಂಡಿತು. ರಸ್ತೆ ಸಂಪರ್ಕ ಕಡಿತಗೊಳ್ಳುವ ಭೀತಿಯಲ್ಲಿ ನಿವಾಸಿಗಳು ಇದ್ದಾರೆ.

ವಿವೇಕಾನಂದಶರಣ ಸ್ವಾಮೀಜಿಗೆ ಶೋಡಶಿ ಪೂಜೆ




ಕಾವೇರಿ ಆಶ್ರಮದಲ್ಲಿ ಸಾಧು–ಸಂತರ ಸಮ್ಮುಖದಲ್ಲಿ ಶ್ರೀ ವಿವೇಕಾನಂದಶರಣ ಸ್ವಾಮೀಜಿ ಅವರ ಶೋಡಶಿ ಪೂಜೆಯನ್ನು ನೆರವೇರಿಸಲಾಯಿತು.

ವಿರಾಜಪೇಟೆ: ಬ್ರಹ್ಮಲೀನರಾದ ಶ್ರೀ ವಿವೇಕಾನಂದ ಶರಣ ಸ್ವಾಮೀಜಿ ಅವರ 16ನೇ ದಿನದ ಶೋಡಶಿ ಪೂಜೆಯನ್ನು ಪಟ್ಟಣದ ಅಪ್ಪಯ್ಯಸ್ವಾಮಿ ರಸ್ತೆಯ ಕಾವೇರಿ ಆಶ್ರಮದಲ್ಲಿ ಸಾಧು–ಸಂತರು ಹಾಗೂ ಭಕ್ತರ ಸಮ್ಮುಖದಲ್ಲಿ ಗುರುವಾರ ನೆರವೇರಿಸಲಾಯಿತು.

ಪೂಜಾ ಕಾರ್ಯದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನದ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಶ್ರೀ ಪುರುಷೋತ್ತಮನಂದನಾಥ ಸ್ವಾಮೀಜಿ, ಪೊನ್ನಂಪೇಟೆಯ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಪರಹಿತಾನಂದ ಸ್ವಾಮೀಜಿ, ಓಂಕಾರ ಆಶ್ರಮದ ಪೀಠಾಧಿಪತಿಗಳು, ಶ್ರೀ ಆಚಾರ್ಯ ಮಹಾಮಂಡಲೇಶ್ವರ, ಡಾ.ಮಧುಸೂದಾನಂದಪುರಿ ಸ್ವಾಮೀಜಿ, ಬೆಂಗಳೂರಿನ ಶ್ರೀ ಕೈಲಾಸ ಆಶ್ರಮದ ಶ್ರೀ ಬುದ್ಧಾನಂದಪುರಿ ಸ್ವಾಮೀಜಿ, ಊಟಿ ಕೈಲಾಸ ಆಶ್ರಮದ ಸುಗುಣಾನಂದಪುರಿ ಸ್ವಾಮೀಜಿ, ಬೆಂಗಳೂರಿನ ವಿಶ್ವ ಒಕ್ಕಲಿಗರ ಮಠದ ಶ್ರೀ ರಮಣಾನಂದನಾಥ ಸ್ವಾಮೀಜಿ, ಬೆಂಗಳೂರಿನ ರಾಮಕೃಷ್ಣ ಕುಟೀರ ಆಶ್ರಮದ ಶಾಂತನಂದ ಸ್ವಾಮೀಜಿ ಮತ್ತು ಭಕ್ತರು ಭಾಗವಹಿಸಿದ್ದರು. ಇದೇ ವೇಳೆ ಗುರುಗಳ ಸ್ಮರಣೆ ಮೂಲಕ 16ನೇ ದಿನದ ಮಹೇಶ್ವರಿ ಪೂಜೆ ನೆರವೇರಿಸಲಾಯಿತು.

ಜಿಲ್ಲಾ ವಾಣಿಜ್ಯ, ಕೈಗಾರಿಕಾ ಸಂಸ್ಥೆ ಅಧ್ಯಕ್ಷರಾಗಿ ನಾಗೇಂದ್ರ ಪ್ರಸಾದ್



ನಾಗೇಂದ್ರ

ಮಡಿಕೇರಿ: ಕೊಡಗು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನೂತನ ಅಧ್ಯಕ್ಷರಾಗಿ ಬಿ.ಆರ್.ನಾಗೇಂದ್ರ ಪ್ರಸಾದ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಮೋಂತಿ ಗಣೇಶ್ ನೇಮಕವಾಗಿದ್ದಾರೆ.

ಕೋಶಾಧಿಕಾರಿಯಾಗಿ ಪೊನ್ನಿಮಾಡ ಎಸ್.ಸುರೇಶ್, ಉಪಾಧ್ಯಕ್ಷರಾಗಿ ನವೀನ್ ಅಂಬೆಕಲ್, ಎ.ಎನ್.ರವಿ ಉತ್ತಪ್ಪ, ಕೆ.ಕೆ. ಸುನೀಲ್ ಮಾದಪ್ಪ, ಬಿ.ಟಿ.ತಿಮ್ಮಶೆಟ್ಟಿ, ಸಂಘಟನಾ ಕಾರ್ಯದರ್ಶಿಗಳಾಗಿ ಬಿ.ಆರ್. ಪ್ರಮೋದ್, ಟಿ.ಆರ್.ಶರವಣ ಕುಮಾರ್, ಪ್ರಭಾಕರ ನೆಲ್ಲಿತ್ತಾಯ, ಕೆ.ಕೆ.ಶ್ರೀನಿವಾಸ ಹಾಗೂ ಪೈ ಎನ್.ಎಂ. ಮಹೇಶ್ ಅವರು ನೇಮಕಗೊಂಡಿದ್ದಾರೆ. ನಗರದ ಕೊಡಗು ಜಿಲ್ಲಾ ವಾಣಿಜ್ಯೋದ್ಯಮಿಗಳ ವಿವಿಧೋದ್ದೇಶ ಸಹಕಾರ ಸಂಘದ ಸಭಾಂಗಣದಲ್ಲಿ ಸಂಸ್ಥೆ ಅಧ್ಯಕ್ಷ ಎಂ.ಬಿ. ದೇವಯ್ಯ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಮುಂದಿನ 3 ವರ್ಷಗಳ ಅವಧಿಗೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಬಾಲಕೃಷ್ಣ ನಿಧನ



ಸುಂಟಿಕೊಪ್ಪ, ಮೇ 16–ಸ್ಯಾಂಡಲ್ ತೋಟದ ನಿವಾಸಿ ಬಾಲಕೃಷ್ಣ (ಮೆಕಾನಿಕ್ ಬಾಲಟ 62) ಗುರುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ. ಸುಂಟಿಕೊಪ್ಪದ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಸುಂಟಿಕೊಪ್ಪ ವರ್ಕ್‌ಶಾಪ್ ಮಾಲೀಕರ ಸಂಘದ ಅಧ್ಯಕ್ಷ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ಆರ್.ಸುನೀಲ್ ಕುಮಾರ್ ಸಂತಾಪ ಸೂಚಿಸಿದ್ದಾರೆ.

ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಮನೆ ತೆರವು

ಪೊಲೀಸ್ ಭದ್ರತೆಯಲ್ಲಿ ನಗರಸಭೆ ಅಧಿಕಾರಿಗಳ ಕಾರ್ಯಾಚರಣೆ



ಚಾ.ನಗರದ ಸೋಮಣ್ಣ ಬಡಾವಣೆಯಲ್ಲಿ ಮನೆ ತೆರವುಗೊಳಿಸುವ ವೇಳೆ ಸೇರಿದ್ದ ಜನರು.

ಏನಿದು ಸಮಸ್ಯೆ:

ನಗರದ ಹೃದಯ ಭಾಗದಲ್ಲಿರುವ ಸೋಮಣ್ಣ ಲೇಔಟ್‌ಗೆ ಹಲವು ವರ್ಷಗಳಿಂದ ಸಂಪರ್ಕ ಕಲ್ಪಿಸುವ ಸೂಕ್ತ ರಸ್ತೆ ಇರಲಿಲ್ಲ. ಇದರಿಂದ ಬಡಾವಣೆಯ ನಿವಾಸಿಗಳು ಪ್ರತಿನಿತ್ಯ ಓಡಾಟಕ್ಕೆ ಪರಿತಪಿಸುವಂತಾಗಿತ್ತು.

ಈ ಹಿನ್ನೆಲೆಯಲ್ಲಿ ಬಡಾವಣೆಯ ನಿವಾಸಿಗಳು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ದೂರು ನೀಡಿದ್ದರು. ಅಲ್ಲದೇ, ಲೋಕಸಭಾ ಚುನಾವಣೆ ವೇಳೆ ಮತದಾನ ಬಹಿಷ್ಕಾರಕ್ಕೂ ಮುಂದಾಗಿದ್ದರು. ಈ ವೇಳೆ ಅಧಿಕಾರಿಗಳು ರಸ್ತೆ ಕಲ್ಪಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಯಾವುದೇ ಪ್ರಯೋಜನವಾಗಿರಲಿಲ್ಲ.

ನಂತರ ನಿವಾಸಿಗಳು ನ್ಯಾಯಾಲಯದ ಮೊರೆ ಹೋಗಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಅಕ್ರಮವಾಗಿ ಮನೆ ನಿರ್ಮಿಸಲಾಗಿದೆ. ಆದ್ದರಿಂದ ರಸ್ತೆ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದ್ದರು. ಇದೀಗ ಅಧಿಕಾರಿಗಳು ಮನೆ ತೆರವುಗೊಳಿಸಿ, ನಿವಾಸಿಗಳ ಸುಗಮ ಓಡಾಟಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಚಾಮರಾಜನಗರ, ಮೇ 16–ನಗರದ 15ನೇ ವಾರ್ಡ್ ಸೋಮಣ್ಣ ಬಡಾವಣೆಯಲ್ಲಿ ಗುರುವಾರ ಪೊಲೀಸ್ ಭದ್ರತೆಯಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಮನೆಯನ್ನು ನಗರಸಭೆ ಅಧಿಕಾರಿಗಳು ತೆರವುಗೊಳಿಸಿದರು.

ಮಧ್ಯಾಹ್ನ 1.30ರಲ್ಲಿ ಬಡಾವಣೆಗೆ ಪೊಲೀಸರ ಭದ್ರತೆ ಹಾಗೂ ಜೆಸಿಬಿಯೊಂದಿಗೆ ಆಗಮಿಸಿದ ಅಧಿಕಾರಿಗಳು, ಮನೆ ಖಾಲಿ ಮಾಡುವಂತೆ ಕುಟುಂಬದವರ ಮನವೊಲಿಸಲು ಯತ್ನಿಸಿದರು. ಆದರೆ, ಮನೆಯ ಮಾಲೀಕ ಸಿದ್ದೇಶ್ ಹಾಗೂ ಕುಟುಂಬದವರು ಮನೆ ಖಾಲಿ ಮಾಡಲು ಒಪ್ಪಲಿಲ್ಲ. ಬದಲಿಗೆ ನಗರಸಭೆಯಿಂದ ನಿವೇಶನ ನೀಡಿ, ಮನೆ ನಿರ್ಮಿಸಿಕೊಡುವವರೆಗೂ ಮನೆ ತೆರವುಗೊಳಿಸಲ್ಲ ಎಂದು ಪಟ್ಟು ಹಿಡಿದರು.

ಈ ವೇಳೆ ನಗರಸಭೆ ಅಧಿಕಾರಿ ಶರವಣ, ನಗರಸಭೆಯಿಂದ ಶೀಘ್ರ ನಿವೇಶನ ನೀಡಲಾಗುವುದು. ಸದ್ಯಕ್ಕೆ ತಾತ್ಕಾಲಿಕವಾಗಿ ಬಾಡಿಗೆ ಮನೆ ಮಾಡಿಕೊಡಲಾಗುವುದು ಎಂದು ಕುಟುಂಬದವರಿಗೆ ಭರವಸೆ ನೀಡಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕುಟುಂಬದವರು ಮನೆ ನಿರ್ಮಿಸಿದ ನಂತರವೇ ಮನೆ ಖಾಲಿ ಮಾಡುವುದಾಗಿ ಪಟ್ಟು ಹಿಡಿದರು.

ಅಧಿಕಾರಿಗಳೊಂದಿಗೆ ವಾಗ್ವಾದ: ಮನೆ ಖಾಲಿ ಮಾಡುವಂತೆ ನೋಟಿಸ್ ನೀಡದೆ ಪೊಲೀಸರನ್ನು ಕರೆತಂದು ಏಕಾಏಕಿ ಮನೆ ತೆರವುಗೊಳಿಸಲು ಮುಂದಾಗಿರುವುದು ಖಂಡನೀಯ ಎಂದು ಕುಟುಂಬದವರು ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು.

ಬಳಿಕ ಕುಟುಂಬದವರು ಮನೆಯೊಳಗೆ ಹೋಗಿ ಬೀಗ ಹಾಕಿಕೊಂಡರು. ಈ ವೇಳೆ ಮನೆಗೆ ತೆರಳಿದ ಪೊಲೀಸರು ಕುಟುಂಬವನ್ನು ವಶಕ್ಕೆ ಪಡೆದು ಜೆಸಿಬಿಗಳ ಮೂಲಕ ಮನೆ ತೆರವುಗೊಳಿಸಿದರು. ಈ ಸಂದರ್ಭದಲ್ಲಿ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಅಲ್ಲದೇ ಸುತ್ತಮುತ್ತಲಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

ಬಾಡಿಗೆ ಮನೆಗೆ ಸ್ಥಳಾಂತರ: ಮನೆ ಕಳೆದುಕೊಂಡ ಕುಟುಂಬಕ್ಕೆ ನಗರಸಭೆಯಿಂದ ಉಚಿತ ನಿವೇಶನ ಹಾಗೂ ಮನೆ ನಿರ್ಮಿಸಿಕೊಡಲಾಗುವುದು. ಅಲ್ಲಿಯವರೆಗೆ ತಾತ್ಕಾಲಿಕವಾಗಿ ಕುಟುಂಬವನ್ನು ಬಾಡಿಗೆ ಮನೆಗೆ ಸ್ಥಳಾಂತರಿಸಿದ್ದು, ನಗರಸಭೆಯಿಂದಲೇ ಬಾಡಿಗೆ ಪಾವತಿಸಲಾಗುವುದು ಎಂದು ತಹಸೀಲ್ದಾರ್ ಹಾಗೂ ನಗರಸಭೆ ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಬಸವರಾಜು, ನಗರಸಭೆ ಪೌರಾಯುಕ್ತ ರಾಮದಾಸ್, ಡಿವೈಎಸ್‌ಪಿ ಲಕ್ಷ್ಮಯ್ಯ, ಇನ್ಸ್‌ಪೆಕ್ಟರ್ ರಾಜೇಶ್ ಸೇರಿದಂತೆ ನಗರಸಭೆ ಅಧಿಕಾರಿಗಳು ಹಾಜರಿದ್ದರು.

ಅಮಾನತು ವಾಪಸ್ ಪಡೆಯುವಂತೆ ಡಿಸಿಗೆ ಪಿಡಿಓಗಳ ಮನವಿ



ಪಿಡಿಓ ಸಿದ್ದರಾಜು ಅವರ ಅಮಾನತು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಕರ್ನಾಟಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಜಿಪಂ ಸಿಇಓ ಕಚೇರಿಯ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಮೇ 16–ತಾಲೂಕಿನ ಪುಣಜನೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿದ್ದರಾಜು ಅವರನ್ನು ಏಕಾಏಕಿ ಅಮಾನತುಗೊಳಿಸಿರುವ ಆದೇಶವನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಕರ್ನಾಟಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓಗೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂದೆ ಸಮಾವೇಶಗೊಂಡ ಜಿಲ್ಲೆಯ ಎಲ್ಲಾ ಪಿಡಿಓಗಳು, ಸಿದ್ದರಾಜು ಅಮಾನತುಗೊಳಿಸಿರುವ ಜಿಲ್ಲಾಧಿಕಾರಿಗಳ ಕ್ರಮ ಸರಿಯಲ್ಲ, ಇದು ಖಂಡನೀಯ ಎಂದರು.

ನಂತರ ಸಂಘದ ಜಿಲ್ಲಾಧ್ಯಕ್ಷ ಕುಮಾರಸ್ವಾಮಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕಚೇರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ನಂತರ ಸಂಘದ ಅಧ್ಯಕ್ಷ ಕುಮಾರಸ್ವಾಮಿ ಮಾತನಾಡಿ, ಜಿಲ್ಲಾಧಿಕಾರಿಗಳು ಪುಣಜನೂರು ಗ್ರಾಮ ಪಂಚಾಯಿತಿಗೆ ಅನಿರೀಕ್ಷಿತ ಭೇಟಿ ನೀಡಿದ್ದ ಸಂದರ್ಭದಲ್ಲಿ ಪಿಡಿಓ ಗೈರಾಗಿದ್ದರು ಎಂಬ ಕಾರಣ ನೀಡಿ, ಯಾವುದೇ ನೋಟಿಸ್ ನೀಡದೇ ಅಮಾನತುಗೊಳಿಸಿರುವುದು ಸರಿಯಲ್ಲ. ಇದರಿಂದ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಿಡಿಓಗಳ ಆತ್ಮಸ್ಥೈರ್ಯ ಕುಂದಿದೆ ಎಂದರು.

ಜಿಲ್ಲಾಧಿಕಾರಿಗಳು ಪಂಚಾಯಿತಿಗೆ ಭೇಟಿ ನೀಡುವ ವಿಷಯ ಪಿಡಿಓಗೆ ತಿಳಿದಿಲ್ಲ. ಇದಕ್ಕೂ ಮಿಗಲಾಗಿ ಪಿಡಿಓ ಸಿದ್ದರಾಜು ಜಿಪಂ ಸಿಇಓ ಹಾಗೂ ಉಪ ಕಾರ್ಯದರ್ಶಿ ಅನುಮತಿ ಪಡೆದು ಅವರ ಮಗುವನ್ನು ಆರೋಗ್ಯ ತಪಾಸಣೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆದರೂ ಇವರ ವಿರುದ್ಧ ಕ್ರಮ ಕೈಗೊಂಡಿರುವುದು ಸರಿಯಲ್ಲ. ಈ ಕೂಡಲೇ ಅಮಾನುತು ಆದೇಶವನ್ನು ವಾಪಸ್ ಪಡೆಯಬೇಕು. ತಪ್ಪಿದ್ದಲ್ಲಿ ಸಂಘದಿಂದ ನ್ಯಾಯ ದೊರೆಯುವ ತನಕ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಮಾದಪ್ಪ, ಉಪಾಧ್ಯಕ್ಷ ರವಿ, ಪ್ರಧಾನ ಕಾರ್ಯದರ್ಶಿ ಶಾಂತರಾಜು, ಖಜಾಂಚಿ ಮಹದೇವಸ್ವಾಮಿ, ರಾಜ್ಯ ಪರಿಷತ್ ಸದಸ್ಯ ಸುರೇಶ್, ಜಿಲ್ಲೆಯ ಪಿಡಿಓಗಳು ಹಾಜರಿದ್ದರು.

ರಾಜೀವ್ ಗಾಂಧಿ ಜ್ಯೋತಿಯಾತ್ರೆಗೆ ಸ್ವಾಗತ



ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಬಳಿ ರಾಜೀವ್ ಗಾಂಧಿ ಜ್ಯೋತಿಯಾತ್ರೆಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಸ್ವಾಗತಿಸಿದರು.

ಚಾಮರಾಜನಗರ: ರಾಮನಗರ, ಮಂಡ್ಯ, ಮೈಸೂರು ಮೂಲಕ ಗುರುವಾರ ಚಾಮರಾಜನಗರಕ್ಕೆ ಆಗಮಿಸಿದ ರಾಜೀವ್ ಗಾಂಧಿ ಜ್ಯೋತಿಯಾತ್ರೆಯನ್ನು ಸ್ವಾಗತಿಸಲಾಯಿತು.

ಚಾಮರಾಜೇಶ್ವರ ದೇವಾಲಯ ಬಳಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಜ್ಯೋತಿಯಾತ್ರೆಯನ್ನು ಸ್ವಾಗತಿಸಿ, ಬರಮಾಡಿಕೊಂಡರು.

ನಂತರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ರಾಜೀವ್ ಗಾಂಧಿ ಜ್ಯೋತಿಯಾತ್ರೆ ದೇಶದ ಏಕೀಕರಣ, ರಾಷ್ಟ್ರ ನಿರ್ಮಾಣವನ್ನು ಬಲಪಡಿಸುವ ಸಂದೇಶ ಸಾರುತ್ತದೆ ಎಂದರು.

ಬಳಿಕ ತಮಿಳುನಾಡಿಗೆ ತೆರಳಿದ ಜ್ಯೋತಿಯಾತ್ರೆಯನ್ನು ಬೀಳ್ಕೊಡಲಾಯಿತು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್, ಅಸಂಘಟಿತ ಕಾರ್ಮಿಕರ ಸಂಘದ ಅಧ್ಯಕ್ಷ ಸ್ವಾಮಿ, ನಂಜೇದೇವನಪುರ ಗ್ರಾಪಂ ಅಧ್ಯಕ್ಷ ಶೇಖರಪ್ಪ, ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ಎ.ಎಚ್.ನಸ್ರುಲ್ಲ ಖಾನ್, ಮರಿಯಾಲದಹುಂಡಿ ಕುಮಾರ್, ಸೇವಾದಳ ಉಪಾಧ್ಯಕ್ಷ ನಾಗರಾಜು, ಉತ್ತವಳ್ಳಿ ಕಾಂತರಾಜು, ರವಿಗೌಡ, ಮಹೇಶ್, ಕಾಂಗ್ರೆಸ್ ಮಹಿಳಾ ಘಟಕದ ಪದ್ಮ ಪುರುಷೋತ್ತಮ್ ಹಾಜರಿದ್ದರು.

ಡೆಂಗ್ಯೂ ಜಾಗೃತಿ ಜಾಥಾ

ಚಾಮರಾಜನಗರ: ರಾಷ್ಟ್ರೀಯ ಡೆಂಘಿ ದಿನಾಚರಣೆ ಅಂಗವಾಗಿ ನಗರದಲ್ಲಿ ಜಾಗೃತಿ ಜಾಥಾ ಹಾಗೂ ಮಾನವ ಸರಪಳಿ ಮೂಲಕ ಅರಿವು ಮೂಡಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಘಟಕದ ಸಹಯೋಗದಲ್ಲಿ ನಡೆದ ಜಾಥಾಗೆ ಚಾಮರಾಜೇಶ್ವರ ದೇವಾಲಯ ಮುಂಭಾಗ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ ಚಾಲನೆ ನೀಡಿದರು. ನಂತರ ಚಾಮರಾಜೇಶ್ವರ ದೇವಸ್ಥಾನದಿಂದ ಹೊರಟ ಜಾಥಾದಲ್ಲಿ 'ಸಮುದಾಯದೊಂದಿಗೆ ಸೇರಿ ಡೆಂಘಿ ನಿಯಂತ್ರಿಸೋಣ' ಎಂಬ ಘೋಷವಾಕ್ಯವನ್ನು ಪ್ರದರ್ಶಿಸಲಾಯಿತು. ನಂತರ ಪಚ್ಚಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಅರಿವು ಮೂಡಿಸಲಾಯಿತು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ರಾಜೇಶ್ ಕುಮಾರ್, ಆರೋಗ್ಯ ಮತ್ತು ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಆರೋಗ್ಯ ಮೇಲ್ವಿಚಾರಣಾಧಿಕಾರಿ ವೆಂಕಟೇಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಾರಾಯಣ್, ಸರ್ಕಾರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿಯರು, ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

20 ದಿನದೊಳಗೆ ಪರಿಹಾರ ನೀಡದಿದ್ದರೆ ಹೋರಾಟ



ಚಾ.ನಗರದಲ್ಲಿ ನಡೆದ ರೈತರ ಸಭೆಯಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಶಾಂತಕುಮಾರ್ ಮಾತನಾಡಿದರು.

ಚಾಮರಾಜಗನ್ನಗರ: ರಾಜ್ಯ ಸರ್ಕಾರ 20 ದಿನದೊಳಗೆ ಎಲ್ಲಾ ರೈತರಿಗೆ ಬರ ಪರಿಹಾರ ವಿತರಿಸದಿದ್ದರೆ ಬೀದಿಗಿಳಿದು ಹೋರಾಟ ನಡೆಸುವುದಾಗಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಎಚ್ಚರಿಸಿದರು.

ನಗರದ ಮಹಾಮನೆ ಸಭಾಂಗಣದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಡೆದ ಜಿಲ್ಲೆಯ ರೈತರ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ 9 ತಿಂಗಳ ಹಿಂದೆ 223 ತಾಲೂಕುಗಳನ್ನು ಬರಗಾಲ ಎಂದು ಘೋಷಿಸಿದೆ. ಆದರೆ, ಇದುವರೆಗೂ ರೈತ ಖಾತೆಗೆ ಬರ ಪರಿಹಾರ ಜಮಾ ಮಾಡದೆ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ದೂರಿದರು.

ಒಂದು ಹೆಕ್ಟೇರ್ ನೀರಾವರಿ ಜಮೀನಿಗೆ 13,500 ರೂ., ಒಣಭೂಮಿಗೆ 23,500 ರೂ. ಬರ ಪರಿಹಾರ ನೀಡಬೇಕು. ಅದನ್ನು ಬಿಟ್ಟು ರೈತರ ಖಾತೆಗೆ ಭಿಕ್ಷೆಯ ರೂಪದಲ್ಲಿ 1000, 500, 300 ರೂ. ಜಮಾ ಮಾಡಿ, ಸರ್ಕಾರ ವಾಮಮಾರ್ಗ ಅನುಸರಿಸುತ್ತಿದೆ. ರಾಜ್ಯದಲ್ಲಿ ಒಟ್ಟು 70 ಲಕ್ಷಕ್ಕೂ ಹೆಚ್ಚು ರೈತರಿದ್ದು, ಕೇವಲ 27 ಲಕ್ಷ ರೈತರ ಖಾತೆಗೆ ಮಾತ್ರ ಭಿಕ್ಷೆ ರೂಪದಲ್ಲಿ ಬರಪರಿಹಾರ ವಿತರಿಸಿದೆ. ಸರ್ಕಾರಕ್ಕೆ ಜಾನುವಾರುಗಳಿಗೆ ಮೇವು, ನೀರು ನೀಡಲು ಆಗುತ್ತಿಲ್ಲ ಎಂದರು.

ಸಂಪೂರ್ಣ ಸಾಲಮನ್ನಾ ಮಾಡಿ: ರೈತರು ಸಾಲ ಮಾಡಿ ಬೆಳೆದ ಫಸಲು ಬಿರುಗಾಳಿ ಮಳೆಗೆ ಹಾನಿಯಾಗಿರುವುದರಿಂದ ರೈತರ ಸಂಪೂರ್ಣ ಸಾಲಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ, ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ ಮಾತನಾಡಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಹತ್ತಳ್ಳಿ ದೇವರಾಜ್, ಜಿಲ್ಲಾ ಉಪಾಧ್ಯಕ್ಷಪಟೇಲ್ ಶಿವಮೂರ್ತಿ, ತಾಲೂಕು ಅಧ್ಯಕ್ಷ ನಂಜದೇವಪುರ ಸತೀಶ್, ಷಡಕ್ಷರಿ, ಯರಿಯೂರ ಮಹೇಶ್, ಉಡಿಗಾಲ ಸುಂದ್ರಪ್ಪ, ಹೆಗ್ಗೊಠಾರ ಶಿವಸ್ವಾಮಿ, ಕುರುಬೂರು ಸಿದ್ದೇಶ್, ಮಂಜು, ಕಿರಗಸೂರು ಶಂಕರ್ ಸಭೆಯಲ್ಲಿ ಇದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರ, ಶಿಕ್ಷಕರ ಕ್ಷೇತ್ರದಲ್ಲಿ

ಒಟ್ಟು 34 ಮಂದಿ ನಾಮಪತ್ರ ಸಲ್ಲಿಕೆ



ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಕೆ.ವಿವೇಕಾನಂದ ನಾಮಪತ್ರ ಸಲ್ಲಿಸಿದರು. ಈ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್, ಸಂಸದ ಬಿ.ವೈ.ರಾಘವೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ ಮತ್ತಿತರರಿದ್ದರು.



ನೈರುತ್ಯ ಪದವೀಧರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಎಂಎಲ್‌ಸಿ ಆಯನೂರ್ ಮಂಜುನಾಥ ನಾಮಪತ್ರ ಸಲ್ಲಿಸಿದರು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ತನ್ವೀರ್ ಸೇಠ್, ಸಚಿವ ಮಧು ಬಂಗಾರಪ್ಪ ಮತ್ತಿತರರಿದ್ದರು.



ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಕನ್ನಡ ಚಳುವಳಿ ವಾಟಾಳ್ ಪಕ್ಷದಿಂದ ವಾಟಾಳ್ ನಾಗರಾಜ್ ನಾಮಪತ್ರ ಸಲ್ಲಿಸಿದರು.



ಕರ್ನಾಟಕ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೆ.ಕೆ.ಮಂಜುನಾಥ್ ಕುಮಾರ್ ನಾಮಪತ್ರ ಸಲ್ಲಿಸಿದರು. ಸಚಿವ ಮಧು ಬಂಗಾರಪ್ಪ ಮತ್ತಿತರರಿದ್ದರು.



ನೈರುತ್ಯ ಪದವೀಧರ ಕ್ಷೇತ್ರದಿಂದ ಪಕ್ಷೇತರರಾಗಿ ಬಿಜೆಪಿ ಮಾಜಿ ಶಾಸಕ ಕೆ.ರಘುಪತಿ ಭಟ್ ಉಮೇದುವಾರಿಕೆ ಸಲ್ಲಿಸಿದರು.

ಮೈಸೂರು, ಮೇ 16(ಎಸ್‌ಬಿಡಿ)- ಮೈಸೂರು ವಿಭಾಗ ವ್ಯಾಪ್ತಿಯ ಮೂರು ವಿಧಾನಪರಿಷತ್ ಕ್ಷೇತ್ರಗಳಿಂದ ಹಲವರು ಕಡೇ ದಿನವಾದ ಗುರುವಾರ ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು. ರಾಜ್ಯ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್ ಮುಖಂಡ ಕೆ.ವಿವೇಕಾನಂದ ಎನ್‌ಡಿಎ ಅಭ್ಯರ್ಥಿಯಾಗಿ, ಕನ್ನಡ ಚಳುವಳಿ ವಾಟಾಳ್ ಪಕ್ಷದಿಂದ ವಾಟಾಳ್ ನಾಗರಾಜ್, ಕರ್ನಾಟಕ ಜನತಾ ಪಕ್ಷದಿಂದ ಎಂ.ನಾಗೇಂದ್ರ ಬಾಬು, ಪಕ್ಷೇತರ ಅಭ್ಯರ್ಥಿಗಳಾಗಿ ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದ ಶೆಟ್ಟಿ, ನಾಗಮಲ್ಲೇಶ್, ಡಾ.ಅನಿಲ್ ಕುಮಾರ್.ಎಸ್, ಮಹೇಶ್.ಆರ್, ರಾಜು.ಕೆ, ಎನ್.ಅಂಬರೀಶ್ ಹಾಗೂ ನಿಂಗರಾಜು ಎಸ್. ಉಮೇದುವಾರಿಕೆ ಸಲ್ಲಿಸಿದರು.

ಕರ್ನಾಟಕ ನೈರುತ್ಯ ಪದವೀಧರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಎಂಎಲ್‌ಸಿ ಆಯನೂರ್ ಮಂಜುನಾಥ, ಬಿಜೆಪಿ ಅಭ್ಯರ್ಥಿ ಧನಂಜಯ್ ಸರ್ಜಿ, ಪಕ್ಷೇತರರಾಗಿ ಬಿಜೆಪಿ ಮಾಜಿ ಶಾಸಕ ಕೆ.ರಘುಪತಿ ಭಟ್, ಷಹರಾಜ್ ಮುಜಾಯಿದ್ ಸಿದ್ದಿಕಿ, ಷಡಾಕ್ಷರಪ್ಪ ಜಿ.ಆರ್., ರಂಗಸ್ವಾಮಿ.ಎಂ ಮತ್ತು ಸರ್ವ ಜನತಾ ಪಾರ್ಟಿಯಿಂದ ಜಿ.ಸಿ.ಪಟೇಲ್, ಕರ್ನಾಟಕ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೆ.ಕೆ.ಮಂಜುನಾಥ್ ಕುಮಾರ್, ಪಕ್ಷೇತರ ಅಭ್ಯರ್ಥಿಗಳಾಗಿ ನಂಜೇಶ್ ಬಿ.ಆರ್, ನರೇಶ್ ಹೆಗ್ಗಡೆ, ಕೆ.ಕೆ.ಮಂಜುನಾಥ್ ಕಡೇ ದಿನ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಇಬ್ಬರು ಮಂಜುನಾಥ

ರಾಜ್ಯ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದವರಲ್ಲಿ ಮಂಜುನಾಥ ಹೆಸರಿನ ಇಬ್ಬರಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ.ಮಂಜುನಾಥ ಕುಮಾರ್ ಹಾಗೂ ಪಕ್ಷೇತರ ಅಭ್ಯರ್ಥಿ ಕೆ.ಕೆ.ಮಂಜುನಾಥ್ ನಾಮಪತ್ರ ಸಲ್ಲಿಸಿದ್ದಾರೆ. ಇನ್ಷಿಯಲ್ ಕೂಡ ಒಂದೇ ಆಗಿರುವುದರಿಂದ ಕಾಂಗ್ರೆಸ್ ಮತಗಳು ಪಕ್ಷೇತರ ಮಂಜುನಾಥ್‌ಗೆ ಹೋಗಬಹುದಾದ ಆತಂಕ ಕಾಂಗ್ರೆಸ್ ವಲಯದಲ್ಲಿದೆ.

ಹತ್ತಕ್ಕಿಂತ ಹೆಚ್ಚು ಅಭ್ಯರ್ಥಿಗಳು: ವಿಧಾನಪರಿಷತ್ ಚುನಾವಣೆಯಲ್ಲೂ ಸ್ಪರ್ಧಾಕಾಂಕ್ಷಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಬಾರಿ ಒಟ್ಟು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ 13, ನೈರುತ್ಯ ಪದವೀಧರರ ಕ್ಷೇತ್ರದಿಂದ 11 ಹಾಗೂ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ 10 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಹಿಂಪಡೆಯಲು ಕಡೇ ದಿನವಾದ ಮೇ 20ರ ನಂತರ ಅಂತಿಮವಾಗಿ ಕಣದಲ್ಲಿ ಉಳಿಯುವವರೆಷ್ಟು ಎನ್ನುವುದು ಸ್ಪಷ್ಟವಾಗಲಿದೆ. ಜೂ.3ಕ್ಕೆ ಮತದಾನ ನಡೆಯಲಿದ್ದು, ಜೂ.6ಕ್ಕೆ ಫಲಿತಾಂಶ ಪ್ರಕಟವಾಗಲಿದೆ.

ಮೂರನೇ ಪುಟದಿಂದ

'ಕನ್ನಡ' ಮೆರೆಸುವ ನಮ್ಮ ನಂದಿನಿ

ಕೆಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕ ಎಂಕೆ ಜಗದೀಶ್ ಮಾತನಾಡಿ, ವಿಶ್ವಕಪ್‌ಗೆ ಮುನ್ನ ನಾವು ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ನಮ್ಮ ಉತ್ಪನ್ನಗಳಾದ ಸ್ಪ್ಲಾಶ್ ಮತ್ತು ಬೌನ್ಸ್ ಅನ್ನು ಬಿಡುಗಡೆ ಮಾಡುತ್ತಿದ್ದೇವೆ. ಮೊದಲನೆಯದು ಹಾಲೊಡಕು ಆಧಾರಿತ ಪ್ರೋಟೀನ್ ಸಮೃದ್ಧ ಪಾನೀಯವಾಗಿದೆ. ಎರಡನೆಯದು ಹಾಲೊಡಕು ಆಧಾರಿತ ಕಾರ್ಬೊನೇಟೆಡ್ ಪಾನೀಯವಾಗಿದೆ. ಎರಡೂ 200 ಮಿಲಿ ಟೆಟ್ರಾ ಪ್ಯಾಕ್‌ಗಳಲ್ಲಿ ಲಭ್ಯವಿದ್ದು, ಕ್ರಮವಾಗಿ 10 ಮತ್ತು 15 ರೂ. ಬೆಲೆಯಿದೆ. ಸ್ಪ್ಲಾಶ್ ನಿಂಬೆ, ಲಿಚಿ, ಮಾವು ಮತ್ತು ಸ್ಟ್ರಾಬೆರಿ ರುಚಿಗಳಲ್ಲಿ ಲಭ್ಯವಿರುತ್ತದೆ. ಬೌನ್ಸ್ ಕಿತ್ತಳೆ, ಜೀರಾ-ಪುದೀನಾ ಮತ್ತು ಶುಂಠಿ-ನಿಂಬೆ ರುಚಿಗಳಲ್ಲಿ ಲಭ್ಯವಿರುತ್ತದೆ ಎಂದರು. ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ಉತ್ಪನ್ನಗಳನ್ನು ಪ್ರಮೋಟ್ ಮಾಡಲು ಇದು ಬ್ರಾಂಡ್ ಬಿಲ್ಡಿಂಗ್ ಕೆಲಸವಾಗಿದೆ. ಕ್ರಿಕೆಟ್ ತಂಡಗಳಿಗೆ ಪ್ರಾಯೋಜಕತ್ವ ನೀಡುವ ನಿರ್ಧಾರವು ಒಕ್ಕೂಟದ ಜಾಗತಿಕ ಉದ್ದೇಶವನ್ನು ಪ್ರದರ್ಶಿಸುತ್ತದೆ. ಪಂದ್ಯಾವಳಿಯ ಮೊದಲು ಮತ್ತು ಸಮಯದಲ್ಲಿ ಹಲವಾರು ಮಾಧ್ಯಮ ಚಟುವಟಿಕೆಗಳನ್ನು ಸಹ ಯೋಜಿಸಲಾಗಿದೆ. ಮುಂದಿನ ತಿಂಗಳು ಅಬುಧಾಬಿ ಮತ್ತು ಶಾರ್ಜಾದಲ್ಲಿ ನಂದಿನಿ ಪಾರ್ಲರ್‌ಗಳನ್ನು ತೆರೆಯಲಿದ್ದು, ಓಮನ್, ಬಹ್ರೇನ್ ಮತ್ತು ಸೌದಿ ಅರೇಬಿಯಾಗಳಿಗೆ ಸಿಹಿತಿಂಡಿಗಳ ಪೂರೈಕೆ ಪ್ರಾರಂಭವಾಗುತ್ತದೆ ಎಂದು ಜಗದೀಶ್ ಹೇಳಿದರು. ಅಮೆರಿಕದಲ್ಲಿ ನೆಲೆಸಿರುವ ಭಾರತೀಯರಿಂದ ನಂದಿನಿ ತುಪ್ಪ, ಹಾಲು ಮತ್ತು ಸಿಹಿತಿಂಡಿಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಫ್ರೋಜನ್ ನಂದಿನಿ ಸಿಹಿತಿಂಡಿಗಳೊಂದಿಗೆ 15 ಟನ್ ತೂಕದ ಕಂಟೇನರ್‌ನಲ್ಲಿ ವಿಶೇಷವಾಗಿ ಮೈಸೂರು ಪಾಕ್ ಮತ್ತು ಪೇಡಾವನ್ನು ಮೂರು ತಿಂಗಳಿಗೊಮ್ಮೆ ಕಳುಹಿಸಲಾಗುತ್ತಿದೆ. ಶೀಘ್ರದಲ್ಲೇ, ಅಮೆರಿಕದಲ್ಲಿ ಕೆಫೆಯನ್ನು ತೆರೆಯಲಾಗುವುದು ಎಂದು ನಾಯ್ಕ್ ಹೇಳಿದರು.

ಮುಂದುವರೆದ ಮೈಸೂರು ಮಹಾನಗರ ಪಾಲಿಕೆಯ ಮತ್ತೊಂದು ಮಹಾ ಕಾರ್ಯಾಚರಣೆ!

ನಿಷೇಧಿತ 1,531 ಕೆಜಿ ಏಕಬಳಕೆ ಪ್ಲಾಸ್ಟಿಕ್ ವಶ ; 1.61 ಲಕ್ಷ ರೂ. ದಂಡ



ಮೈಸೂರಿನ ಸಂತೆಪೇಟೆಯಲ್ಲಿ ಗುರುವಾರ ಮಹಾನಗರ ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ನೇತೃತ್ವದಲ್ಲಿ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ಹೊಂದಿದ್ದ ಮಳಿಗೆಗಳ ಮೇಲೆ ದಾಳಿ ನಡೆಸಲಾಯಿತು.

ಇನ್ನು ಪ್ರತಿದಿನ ಕಾರ್ಯಾಚರಣೆ

ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ಕಠಿಣ ನಿರ್ಧಾರ

ಮೈಸೂರು,ಮೇ 16(ಪಿಎಂ)-ಪ್ರತಿದಿನ ಕನಿಷ್ಠ 2 ಗಂಟೆ ಕಾಲ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ವಿರುದ್ಧ ಕಾರ್ಯಾಚರಣೆಗೆ ಆದೇಶ ನೀಡಿದ್ದೇನೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಡಾ.ಎನ್.ಎನ್.ಮಧು ತಿಳಿಸಿದರು.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಪ್ರತಿದಿನ ಕನಿಷ್ಠ 2 ಗಂಟೆ ಕಾರ್ಯಾಚರಣೆ ನಡೆಸುವಂತೆ ಎಲ್ಲಾ ವಲಯಗಳ ವ್ಯಾಪ್ತಿಯ ಹೆಲ್ತ್ ಇನ್ಸ್‌ಪೆಕ್ಟರ್‌ಗಳು, ಪರಿಸರ ಇಂಜಿನಿಯರ್‌ಗಳು ಮತ್ತು ಎಇಇಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಆ ಪ್ರಕಾರ ಅವರು ಪ್ರತಿದಿನ ದಾಳಿ ನಡೆಸಿ ವರದಿ ನೀಡಲಿದ್ದಾರೆ ಎಂದು ಹೇಳಿದರು. ನಿಷೇಧಿತ ಪ್ಲಾಸ್ಟಿಕ್ ಹೊಂದಿರುವ ಎಲ್ಲಾ ವಾಣಿಜ್ಯ ಮಳಿಗೆಗಳಲ್ಲಿ ಪರಿಶೀಲನೆ ನಡೆಸಿ, ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ನಮ್ಮ ವ್ಯಾಪ್ತಿಯಲ್ಲಿ ನಿಷೇಧಿತ ಪ್ಲಾಸ್ಟಿಕ್ ಉತ್ಪಾದನೆ ಯಾವುದೂ ಇಲ್ಲ. ಬೇರೆ ಕಡೆಗಳಿಂದ ಪೂರೈಕೆ ಆಗುವ ಬಗ್ಗೆಯೂ ನಿಗಾ ವಹಿಸಿದ್ದು, ಕಟ್ಟುನಿಟ್ಟಿನ ಕ್ರಮ ವಹಿಸುತ್ತೇವೆ. ಎನ್‌ಜಿಟಿ (ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್) ಮಾರ್ಗಸೂಚಿಯಂತೆ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ಸಾಮಗ್ರಿ ವಿರುದ್ಧ ಕ್ರಮಕ್ಕೆ ಈಗಾಗಲೇ ಜಿಲ್ಲಾಧಿಕಾರಿಗಳು ಸ್ಪಷ್ಟ ಸೂಚನೆ ನೀಡಿದ್ದಾರೆ ಎಂದು ತಿಳಿಸಿದರು.

ಮೈಸೂರು,ಮೇ 16(ಪಿಎಂ)- ನಿಷೇಧಿತ ಏಕಬಳಕೆಯ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಹೊಂದಿದ್ದ ಮಳಿಗೆಗಳ ಮೇಲೆ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಗುರುವಾರ ದಾಳಿ ನಡೆಸಿದ್ದು, ಒಟ್ಟು 1,531 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು 1,16,100 ರೂ. ದಂಡ ವಿಧಿಸಲಾಗಿದೆ.

ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳ ವ್ಯಾಪ್ತಿಯಲ್ಲಿ ಆಯಾಯ ವಲಯಾಧಿಕಾರಿಗಳ ನೇತೃತ್ವದ ತಂಡಗಳು ದಾಳಿ ನಡೆಸಿದ್ದು, ಕವರ್, ಚಮಚ, ಲೋಟ ಸೇರಿದಂತೆ ವಿವಿಧ ಬಗೆಯ ಏಕಬಳಕೆ ಪ್ಲಾಸ್ಟಿಕ್ ಸಾಮಗ್ರಿಗಳನ್ನು ವಶಪಡಿಸಿಕೊಂಡು ದಂಡ ಹಾಕಲಾಗಿದೆ. ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಹೊಂದಿರುವ ಸಂಬಂಧ ಒಟ್ಟು 145 ಕಡೆಗಳಲ್ಲಿ ದಾಳಿ ನಡೆಸಲಾಗಿದೆ.

ವಲಯ ಕಚೇರಿ 1ರ ವ್ಯಾಪ್ತಿಯ ವಾರ್ಡ್ ನಂ. 52ರ ಇಟ್ಟಿಗೆಗೂಡಿನಲ್ಲಿ ಒಟ್ಟು 14 ಕಡೆಗಳಲ್ಲಿ ದಾಳಿ ನಡೆಸಿದ್ದು, 20 ಕೆಜಿ ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳನ್ನು ವಶಕ್ಕೆ ಪಡೆದು, 26,700 ರೂ. ದಂಡ ವಿಧಿಸಲಾಗಿದೆ. ವಲಯ ಕಚೇರಿ 2ರ ವ್ಯಾಪ್ತಿಯ ಕುವೆಂಪುನಗರ, ವಿಶ್ವೇಶ್ವರನಗರ, ಶ್ರೀರಾಂಪುರ ಮೊದಲನೇ ಹಂತ ಸೇರಿದಂತೆ ಒಟ್ಟು 38 ಕಡೆಗಳಲ್ಲಿ ದಾಳಿ ನಡೆಸಿದ್ದು, 8 ಕೆಜಿ ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳನ್ನು ವಶಕ್ಕೆ ಪಡೆದು, 8 ಸಾವಿರ ರೂ. ದಂಡ ವಿಧಿಸಲಾಗಿದೆ.

ಅಂತೆಯೇ ವಲಯ ಕಚೇರಿ 3ರ ವ್ಯಾಪ್ತಿಯಲ್ಲಿ ವಾರ್ಡ್ ನಂ.57ರ ಕುವೆಂಪುನಗರ, ವಾರ್ಡ್ ನಂ. 42ರ ಸರಸ್ವತಿಪುರಂ, ವಾರ್ಡ್ ನಂ.44ರ ಗಣೇಶ್ ಭಂಡಾರ್ ರಸ್ತೆ, ವಾರ್ಡ್ ನಂ.58ರ ರಾಮಕೃಷ್ಣನಗರ ಸೇರಿದಂತೆ 19 ಕಡೆಗಳಲ್ಲಿ ದಾಳಿ ನಡೆಸಿ, 15 ಕೆಜಿ ನಿಷೇಧಿತ ಪ್ಲಾಸ್ಟಿಕ್ ಪದಾರ್ಥಗಳನ್ನು ವಶಕ್ಕೆ ಪಡೆದು, 12,500 ರೂ. ದಂಡ ವಿಧಿಸಲಾಗಿದೆ. ವಲಯ ಕಚೇರಿ 4ರ ವ್ಯಾಪ್ತಿಯಲ್ಲಿ ಗೋಕುಲಂನ ಪಾಲಿಕೆ ವಾರ್ಡ್ ನಂ. 6 ಮತ್ತು 19ರಲ್ಲಿ 10 ಕಡೆಗಳಲ್ಲಿ ದಾಳಿ ನಡೆಸಿ 4 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು, 8,500 ರೂ. ದಂಡ ವಿಧೀಸಲಾಗಿದೆ.

ವಲಯ ಕಚೇರಿ 5ರ ವ್ಯಾಪ್ತಿಯ ಹೆಬ್ಬಾಳು ಸೂರ್ಯ ಬೇಕರಿ ವೃತ್ತದಲ್ಲಿ 11 ಕಡೆಗಳಲ್ಲಿ ದಾಳಿ ಮಾಡಿದ್ದು, 11 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು 13,500 ರೂ. ದಂಡ ಹಾಕಲಾಗಿದೆ. ವಲಯ ಕಚೇರಿ 7ರ ವ್ಯಾಪ್ತಿಯಲ್ಲಿ ವಾರ್ಡ್ ನಂ.8ರ ಶಿವರಾತ್ರೀಶ್ವರ ನಗರ, ಬನ್ನಿಮಂಟಪದಲ್ಲಿ 16 ಕಡೆಗಳಲ್ಲಿ ದಾಳಿ ಮಾಡಿ, 48 ಕೆಜಿ ನಿಷೇಧಿತ ಪ್ಲಾಸ್ಟಿಕ್ ಪದಾರ್ಥ ವಶಕ್ಕೆ ಪಡೆದು, 15 ಸಾವಿರ ರೂ. ದಂಡ ವಿಧಿಸಲಾಗಿದೆ ವಲಯ ಕಚೇರಿ 8ರ ವ್ಯಾಪ್ತಿಯಲ್ಲಿ ವಾರ್ಡ್ ನಂ.13ರ ಶಾಂತಿನಗರ, ವಾರ್ಡ್ ನಂ. 15ರ ಸುಲ್ತಾನ್ ರಸ್ತೆಯಲ್ಲಿ 7 ಕಡೆಗಳಲ್ಲಿ ದಾಳಿ ನಡೆಸಿ, 6 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಕ್ಕೆ ಪಡೆದಿದ್ದು, 1 ಸಾವಿರ ರೂ. ದಂಡ ವಿಧಿಸಲಾಗಿದೆ.

ವಲಯ ಕಚೇರಿ 9ರ ವ್ಯಾಪ್ತಿಯಲ್ಲಿ ವಾರ್ಡ್ 32ರ ಗೌಸಿಯಾನಗರ, ವಾರ್ಡ್ ನಂ. 39ರ ಗಾಯಿತ್ರಿಪುರಂ, ವಾರ್ಡ್ ನಂ. 30ರ ಮಹದೇವಪುರ ಮುಖ್ಯ ರಸ್ತೆ, ವಾರ್ಡ್ ನಂಬರ್ 34, 35 ಮತ್ತು 36ರ ರಾಜ್‌ಕುಮಾರ್ ರಸ್ತೆಯಲ್ಲಿ 15 ಕಡೆಗಳಲ್ಲಿ ದಾಳಿ ನಡೆಸಿ, 19 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು 14,400 ರೂ. ದಂಡ ವಿಧಿಸಲಾಗಿದೆ. ಬುಧವಾರವೂ (ಮೇ 15) ಎಲ್ಲಾ ವಲಯ ಕಚೇರಿಗಳ ವ್ಯಾಪ್ತಿಯಲ್ಲಿ ಒಟ್ಟು 199 ಕಡೆಗಳಲ್ಲಿ ದಾಳಿ ನಡೆಸಿ, ಒಟ್ಟಾರೆ 128 ಕೆಜಿ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ಸಾಮಗ್ರಿ ವಶಪಡಿಸಿಕೊಂಡು 1.05 ಲಕ್ಷ ದಂಡ ರೂ. ವಿಧಿಸಲಾಗಿತ್ತು.

ತಮಾಷೆಯಾಗಿದೆಯಪ್ಪಾ...!

ಮೈಸೂರು ಪಾಲಿಕೆ ಕಾರ್ಯಾಚರಣೆ ನಡೆಸಿ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದೇನೋ ಸರಿ. ಆದರೆ ಮರು ಕ್ಷಣವೇ ಸಂಬಂಧಿಸಿದ ಅಂಗಡಿಯಲ್ಲಿ ಪ್ಲಾಸ್ಟಿಕ್ ಬಳಕೆ ಆರಂಭವಾಗುವುದಾದರೂ ಹೇಗೆ? ಇನ್ನು ಫುಟ್‌ಪಾತ್‌ಗಳಲ್ಲಿ ವಹಿವಾಟು ನಡೆಸುತ್ತಿರುವವರೇ ಪ್ಲಾಸ್ಟಿಕ್ ಬಳಕೆಯ ಪ್ರಮುಖ ಮೂಲ. ಹಾವಿರುವ ಕಡೆ ಹುತ್ತ ಅಗೆಯದೇ ಗುಡ್ಡದಲ್ಲಿ ಸುತ್ತಾಡಿದರೆ ಏನು ಪ್ರಯೋಜನ. ಆದರೂ ಮಹಾ ಕಾರ್ಯಾಚರಣೆ ನಡೆಯುತ್ತಿದೆ. ನಡೆಯಲಿ.

-ನಾಗೇಶ್, ನಾಗರಿಕರು, ಮೈಸೂರು.

ಬೃಹತ್ ಪ್ರಮಾಣದಲ್ಲಿ ವಶ

ಗುರುವಾರ ನಡೆದ ದಾಳಿಯಲ್ಲಿ ವಲಯ ಕಚೇರಿ 6ರ ವ್ಯಾಪ್ತಿಯಲ್ಲಿ 1,400 ಕೆಜಿಯಷ್ಟು ಬೃಹತ್ ಪ್ರಮಾಣದಲ್ಲಿ ನಿಷೇಧಿತ ಪ್ಲಾಸ್ಟಿಕ್ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದೆ. ವಾರ್ಡ್ ನಂ.23ರ ಸಂತೆಪೇಟೆಯಲ್ಲಿ ಈ ದಾಳಿ ನಡೆಸಿದ್ದು, ಇಲ್ಲಿ 15 ಕಡೆಗಳಲ್ಲಿ ದಾಳಿ ಮಾಡಿ, 61,500 ರೂ. ದಂಡ ವಿಧಿಸಲಾಗಿದೆ. ಈ ದಾಳಿಯ ನೇತೃತ್ವವನ್ನು ಪಾಲಿಕೆ ಆಯುಕ್ತರಾದ ಡಾ.ಎನ್.ಎನ್.ಮಧು ವಹಿಸಿದ್ದರು. ವಲಯ ಕಚೇರಿ 6ರ ವಲಯಾಧಿಕಾರಿ ವಾಣಿಆಳ್ವಾ, ಪರಿಸರ ಇಂಜಿನಿಯರ್ ಮೈತ್ರಿ, ಆರೋಗ್ಯ ನಿರೀಕ್ಷಕರಾದ ಬಸವರಾಜು, ಮಂಜು ಕುಮಾರ್, ಕೃಷ್ಣ ಹಾಗೂ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲೆಯಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ತಂಡಗಳ ರಚನೆ



ಮೈಸೂರಿನ ನಾಚನಹಳ್ಳಿಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡೆಂಗ್ಯೂ ನಿಯಂತ್ರಣ ಕುರಿತು ಗುರುವಾರ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ಮೈಸೂರು, ಮೇ 16 (ಆರ್‌ಕೆ): ಮೈಸೂರು ಜಿಲ್ಲೆಯಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ತಿಳಿಸಿದ್ದಾರೆ.

ಮೈಸೂರಿನ ನಾಚನಹಳ್ಳಿಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂದು ಡೆಂಗ್ಯೂ ನಿಯಂತ್ರಣ ಕುರಿತು ಜನಜಾಗೃತಿ ಕಾರ್ಯಕ್ರಮದಲ್ಲಿ ಸೊಳ್ಳೆಗಳ ನಾಶಕ್ಕೆ ಲಾರ್ವ ಪ್ರಾತ್ಯಕ್ಷಿಕೆ ನೀಡಿದ ಅವರು, ನೀರು ನಿಲ್ಲದಂತೆ, ಸೊಳ್ಳೆಗಳು ಉತ್ಪತ್ತಿಯಾಗದಂತೆ ತಡೆಯುವ ವಿಧಾನದ ಬಗ್ಗೆ ಮಾಹಿತಿ ನೀಡಿದರು. ಸೊಳ್ಳೆಗಳ ಮೂಲ ನಾಶಪಡಿಸುವುದು, ಲಾರ್ವ ಸೈಡ್ ಪ್ರಕ್ರಿಯೆ ತೀವ್ರಗೊಳಿಸುವತ್ತ ಗಮನ ಹರಿಸುವುದು, ಜ್ವರ, ತಲೆನೋವು, ಕೀಲುನೋವಿನಿಂದ ಬಳಲುತ್ತಿರುವವರನ್ನು ಗುರ್ತಿಸಿ ಪರೀಕ್ಷೆ ಮಾಡುವ ಕಾರ್ಯವನ್ನು ಆರೋಗ್ಯ ಇಲಾಖೆ ಕೈಗೊಂಡಿದ್ದು, ಸಾರ್ವಜನಿಕರು ಅಧಿಕಾರಿಗಳೊಂದಿಗೆ ಸಹಕರಿಸಬೇಕೆಂದು ಡಾ.ಕುಮಾರಸ್ವಾಮಿ ಇದೇ ಸಂದರ್ಭ ಕೋರಿದರು.

ಜಿಲ್ಲೆಯಾದ್ಯಂತ ಎಲ್ಲಾ ಪ್ರಾಥಮಿಕ ಆರೋಗ್ಯಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಡೆಂಗ್ಯೂ ಲಕ್ಷಣಗಳು ಕಂಡುಬಂದಿರುವ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಅಗತ್ಯ ಮುಂಜಾಗ್ರತಾ ಕ್ರಮವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದರು.

ಡೆಂಗ್ಯೂವಿನಿಂದ ಬಳಲುತ್ತಿರುವ ರೋಗಿಗಳಿಗೆ ಚಿಕಿತ್ಸೆ ನೀಡಲು ಎಲ್ಲಾ ಆರೋಗ್ಯ ಕೇಂದ್ರಗಳು, ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಔಷಧಿ, ಪರಿಕರಗಳನ್ನು ಶೇಖರಿಸಲಾಗಿದ್ದು, ವೈದ್ಯಾಧಿಕಾರಿಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಅವರು ಇದೇ ಸಂದರ್ಭ ತಿಳಿಸಿದರು.

ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ಸುವರ್ಣ, ನಾಚನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸೌಮ್ಯ ಹಾಗೂ ಇತರ ಅಧಿಕಾರಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಾಧ್ಯಮದವರ ಕರ್ತವ್ಯಕ್ಕೆ ಅಡ್ಡಿ: ಯುವಕ ಪೊಲೀಸರ ವಶಕ್ಕೆ

ಮೈಸೂರು, ಮೇ16(ಬಿಎಲ್‌ಯು)- ಮಾಧ್ಯಮದವರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಯುವಕನನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಇಂದು ನಡೆಯಿತು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಸಂಬಂಧ ಪ್ರಾದೇಶಿಕ ಆಯುಕ್ತರ ಕಚೇರಿ ಮುಂದೆ ವರದಿ ಮಾಡಲು ಮಾಧ್ಯಮದವರು ಸೇರಿದ್ದರು. ಈ ಸಮಯದಲ್ಲಿ ಜೆ.ಪಿ.ನಗರದ ಅಮೋಘ್ ಎಂಬಾತ ಮಾಧ್ಯಮದವರ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಈ ಸಂದರ್ಭದಲ್ಲಿ ಮಾಧ್ಯಮದವರು ಪ್ರಶ್ನಿಸಿ, ಆತನ ಹಿಡಿಯಲು ಮುಂದಾದಾಗ ಪೊಲೀಸರು ತಡೆದರು. ನಂತರ ದೇವರಾಜ ಪೊಲೀಸರು ಅಮೋಘ್‌ನನ್ನು ವಶಕ್ಕೆ ಪಡೆದು, ಠಾಣೆಗೆ ಕರೆದೊಯ್ದರು. ಮತ್ತೊಮ್ಮೆ ಹೀಗೆ ನಡೆದುಕೊಳ್ಳದಂತೆ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

ಅಂಗನವಾಡಿ ಕೇಂದ್ರಗಳಿಗೆ ಆಹಾರ ಪೂರೈಸುವವರಿಂದ ಲಂಚ ಸ್ವೀಕಾರ: ಎಫ್‌ಡಿಎ ಲೋಕಾಯುಕ್ತ ಬಲೆಗೆ

ಮೈಸೂರು, ಮೇ 16(ಎಂಕೆ)- ಟೆಂಡರ್ ಚೆಕ್ ನೀಡಲು 40 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪಿರಿಯಾಪಟ್ಟಣ ತಾಲೂಕಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಫ್‌ಡಿಎ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಪಿರಿಯಾಪಟ್ಟಣ ತಾಲೂಕಿನ ರಾಮದೂರು ಗ್ರಾಮದ ನಿವಾಸಿ ನಟೇಶ್ ಎಂಬುವರು ಅಂಗನವಾಡಿಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದು, ಇಲಾಖೆ ಯಿಂದ ಅವರಿಗೆ ಬರಬೇಕಿದ್ದ 4 ಲಕ್ಷ ರೂ. ಟೆಂಡರ್ ಚೆಕ್ ನೀಡಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಥಮ ದರ್ಜೆ ಸಹಾಯಕ ವಿಜಯ್ ಕುಮಾರ್ 40 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಅದರಂತೆ ಗುರುವಾರ 30 ಸಾವಿರ ರೂ. ಲಂಚ ನೀಡುವಾಗ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ವಿಜಯ್‌ಕುಮಾರ್‌ನನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಎಸ್‌ಪಿ ಸಜಿತ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ವಿ.ಕೃಷ್ಣಯ್ಯ, ಲೋಕಾಯುಕ್ತ ಇನ್ಸ್‌ಪೆಕ್ಟರ್‌ಗಳಾದ ರವಿಕುಮಾರ್, ರೂಪಶ್ರೀ, ಲೋಕೇಶ್, ಸಿಬ್ಬಂದಿಗಳಾದ ಮೋಹನ್ ಗೌಡ, ವೀರಭದ್ರಸ್ವಾಮಿ, ಆಶಾ, ತ್ರಿವೇಣಿ, ಪುಷ್ಪಲತಾ, ದಿನೇಶ್, ಲೋಕೇಶ್, ಪೃಥ್ವಿ, ಶೇಖರ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ರಕ್ಷಿತ್‌ಗೆ ಶೇ.87ರಷ್ಟು ಅಂಕ



ಮೈಸೂರು: ಇತ್ತೀಚೆಗೆ ಪ್ರಕಟವಾದ ದ್ವಿತೀಯ ಪಿಯುಸಿ (ಸಿಬಿಎಸ್‌ಇ) ಫಲಿತಾಂಶದಲ್ಲಿ ಮೈಸೂರಿನ ಪ್ರಮತಿ ಹಿಲ್ ವ್ಯೂ ಅಕಾಡೆಮಿ ಕಾಲೇಜಿನ ರಕ್ಷಿತ್ ಪಿ. ಶೇ.87.2ರಷ್ಟು ಅಂಕಗಳೊಂದಿಗೆ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾನೆ. ಈತ ಗೋಕುಲಂ ಬಡಾವಣೆ ನಿವಾಸಿ ಪರಮೇಶ್ ಹಾಗೂ ಗೀತಾ ದಂಪತಿ ಪುತ್ರ.

ಸ್ವಾಮೀಜಿಗಳಿಂದ ಕಾಮಾಕ್ಷಿ ಆಸ್ಪತ್ರೆ ಸುವರ್ಣ ಮಹೋತ್ಸವ ಉದ್ಘಾಟನೆ

ಮೈಸೂರು, ಮೇ 16 (ಆರ್‌ಕೆ): ಆರೋಗ್ಯ ಸೇವೆಯಲ್ಲಿ 50 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯು ಇಂದು ತನ್ನ ಸುವರ್ಣ ಮಹೋತ್ಸವವನ್ನು ಸಂಭ್ರಮ ಸಡಗರದಿಂದ ಆಚರಿಸಿಕೊಂಡಿತು.

ಕುವೆಂಪುನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆ ಆವರಣದಲ್ಲಿ ಏರ್ಪಡಿಸಿದ್ದ ಸುವರ್ಣ ಮಹೋತ್ಸವ ಸಮಾರಂಭವನ್ನು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಆಸ್ಪತ್ರೆ ಸಂಸ್ಥಾಪಕರಾದ ಮಾಧವ ಶೆಣೈ ಮತ್ತು ಶ್ರೀಮತಿ ಸುಲೋಚನಾ ಮಾಧವ ಶೆಣೈ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು, ಮನುಷ್ಯನಿಗೆ ಎಲ್ಲದಕ್ಕಿಂತ ಆರೋಗ್ಯ ಮುಖ್ಯ, ಎಷ್ಟೇ ಸಂಪತ್ತಿದ್ದರೂ, ಅಂತಸ್ತು, ಅಧಿಕಾರವಿದ್ದರೂ ಆರೋಗ್ಯ ಸರಿ ಇಲ್ಲದಿದ್ದರೆ ಜೀವನ ಶೂನ್ಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕೆಂದರು.

ಈ ಹಿಂದೆ ನಮ್ಮ ಪೂರ್ವಜರು 120ರಿಂದ 140ವರ್ಷ ಆರೋಗ್ಯಕರವಾಗಿ ಬದುಕಿದ್ದರು. ಏಕೆಂದರೆ ಶಿಸ್ತುಬದ್ಧ ಜೀವನ ಶೈಲಿ, ಪೌಷ್ಟಿಕಾಂಶ ಆಹಾರ ಸೇವನೆ ಹಾಗೂ ಒತ್ತಡ ರಹಿತ ನಿಷ್ಕಲ್ಮಷವಾಗಿ ಜೀವಿಸುತ್ತಿದ್ದರು ಎಂದ ಅವರು, ಕಾಲ ಬದಲಾದಂತೆ ಈಗ ಅಪೌಷ್ಟಿಕತೆ, ಒತ್ತಡ, ಜೀವನ ಶೈಲಿ, ಆಹಾರ ಪದ್ಧತಿಯಿಂದಾಗಿ ಅತೀ ಕಡಿಮೆ ವಯಸ್ಸಿನಲ್ಲೇ ಬಿಪಿ, ಶುಗರ್‌ನಂತಹ ರೋಗಗಳು ಕಾಣಿಸಿಕೊಳ್ಳುತ್ತವೆ ಎಂದರು.

ಅದೇ ರೀತಿ ಈಗ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಿದೆ ಎಂತಹ ಗಂಭೀರ ಖಾಯಿಲೆಗಳನ್ನು ವಾಸಿ ಮಾಡಬಹುದಾದಂತಹ ಔಷಧಿಗಳು, ಶಸ್ತ್ರಚಿಕಿತ್ಸೆಗಳಿಗೆ ಬೇಕಾದ ಉಪಕರಣಗಳು ಲಭ್ಯವಿರುವುದರಿಂದ ಆತಂಕ ಪಡಬೇಕಾಗಿಲ್ಲ. ಎಂತಹ ಕ್ಲಿಷ್ಟ ಪರಿಸ್ಥಿತಿಯಲ್ಲೂ ರೋಗಿಗೆ ವೈದ್ಯರು ಸ್ಥೈರ್ಯ, ಆತ್ಮವಿಶ್ವಾಸ, ಪ್ರೇರಣೆ ನೀಡಿದಲ್ಲಿ ಅರ್ಧ ಖಾಯಿಲೆ ವಾಸಿಯಾಗುತ್ತದೆ ಎಂದು ಶ್ರೀಗಳು ನುಡಿದರು.



ಮೈಸೂರಿನ ಕುವೆಂಪುನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆಯಲ್ಲಿ ಗುರುವಾರ ಆಯೋಜಿಸಿದ್ದ ಆಸ್ಪತ್ರೆ ಸುವರ್ಣ ಮಹೋತ್ಸವ ಸಮಾರಂಭವನ್ನು ಅವಧೂತ ದತ್ತ ಪೀಠಾಧ್ಯಕ್ಷ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ ಅವರು ಉದ್ಘಾಟಿಸಿದರು. (ಎಡದಿಂದ) ಶಾಸಕ ಟಿ.ಎಸ್.ಶ್ರೀವತ್ಸ, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್ ಹಾಗೂ ಬಿಎಸ್‌ಎಂಎಸ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಂ.ಮಹೇಶ್ ಶೆಣೈ ಅವರನ್ನು ಚಿತ್ರದಲ್ಲಿ ಕಾಣಬಹುದು.

ವೈದ್ಯರ ಮೇಲಿನ ನಂಬಿಕೆ, ಆತ್ಮವಿಶ್ವಾಸವೇ ಬಹುತೇಕ ರೋಗಿಗಳು ಗುಣಮುಖರಾಗಲು ಕಾರಣವಾಗುತ್ತದೆ. ಅಭಿವೃದ್ಧಿಗೊಂಡಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಬಳಸಿ ವಿಶ್ವಾಸದಿಂದ ಚಿಕಿತ್ಸೆ ನೀಡಿದಲ್ಲಿ ಎಂತಹ ರೋಗಗಳನ್ನು ಚಿಕಿತ್ಸೆ ಮೂಲಕ ಗುಣಪಡಿಸಬಹುದು ಎಂದು ಶ್ರೀಗಳು ಇದೇ ಸಂದರ್ಭ ಅಭಿಪ್ರಾಯಪಟ್ಟರು.

ಆಧುನಿಕ ಉಪಕರಣಗಳು, ಔಷಧಿಗಳು ಲಭ್ಯವಿರುವುದರಿಂದ ಹಾಗೂ ತಜ್ಞ ವೈದ್ಯವೃಂದ, ಮೂಲಸೌಕರ್ಯವುಳ್ಳ ಆಸ್ಪತ್ರೆಗಳು ಸೇವೆ ಸಲ್ಲಿಸುತ್ತಿರುವುದರಿಂದ ಯಾರೂ ಆತಂಕ ಪಡಬೇಕಾಗಿಲ್ಲ ಎಂದ ಅವರು, ಕಾಮಾಕ್ಷಿ ಆಸ್ಪತ್ರೆಯು ಕಳೆದ 50 ವರ್ಷಗಳಿಂದ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ, ಶುಶ್ರೂಷೆ ನೀಡುತ್ತಾ ಬಂದಿರುವುದು ಶ್ಲಾಘನೀಯ ಎಂದು ಪ್ರಶಂಸಿಸಿದರು.

ಚಿಕಿತ್ಸಾ ವೆಚ್ಚ ಪಡೆಯುವುದಕ್ಕಿಂತ ರೋಗಿಯ ಪ್ರಾಣ ಉಳಿಸಿದಾಗ ವೈದ್ಯರಿಗೆ ಸಿಗುವ ತೃಪ್ತಿಗೆ ಬೆಲೆ ಕಟ್ಟಲಾಗದು. ಚಿಕಿತ್ಸಾ ವೆಚ್ಚ ಪರಿಗಣಿಸದೇ ರೋಗಿಯ ಸೇವೆಯನ್ನೇ ಪ್ರಧಾನವಾಗಿಸಿಕೊಂಡು 5 ದಶಕಗಳಿಂದ ಚಿಕಿತ್ಸೆ ನೀಡುತ್ತಿರುವ ಕಾಮಾಕ್ಷಿ ಆಸ್ಪತ್ರೆ ತನ್ನ ಪವಿತ್ರ ಸೇವೆಯನ್ನು ಮುಂದುವರೆಸಿ, ಶತಮಾನೋತ್ಸವ ಆಚರಿಸಿಕೊಳ್ಳುವಂತಾಗಲಿ ಎಂದು ಗಣಪತಿ ಶ್ರೀಗಳು ಇದೇ ಸಂದರ್ಭ ಆಡಳಿತ ಮಂಡಳಿಗೆ ಶುಭ ಹಾರೈಸಿದರು.


ದಿವ್ಯ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಮಾತನಾಡಿ, ಸೇವೆಯನ್ನೇ ಗುರಿಯಾಗಿಸಿಕೊಂಡು ಆಸ್ಪತ್ರೆ ಸ್ಥಾಪಿಸಿದ ದಿವಂಗತ ಬಂಟ್ವಾಳ ಮಾಧವ ಶೆಣೈ ಮತ್ತು ಲೇಟ್ ಶ್ರೀಮತಿ ಸುಲೋಚನಾ ಮಾಧವ ಶೆಣೈ ಅವರನ್ನು ಸ್ಮರಿಸಿಕೊಂಡರು.

ಕೈಗೆಟಕುವ ದರದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾ ಬಂದಿರುವ ಕಾಮಾಕ್ಷಿ ಆಸ್ಪತ್ರೆಯು, ಈ ವಿಷಯದಲ್ಲಿ ತನ್ನ ಲಾಭ-ನಷ್ಟದ ಬಗ್ಗೆ ಗಮನ ಹರಿಸಿಲ್ಲ. ಪ್ರತಿಯೊಬ್ಬ ರೋಗಿಯ ನೋವು ಶಮನ ಮಾಡುವ ಮೂಲಕ ಆಡಳಿತ ಮಂಡಳಿ ಗುಣಮಟ್ಟದ ಚಿಕಿತ್ಸೆ ಮತ್ತು ಆರೈಕೆಗೆ ಆದ್ಯತೆ ನೀಡುತ್ತಿರುವುದರಿಂದ ಕಾಮಾಕ್ಷಿ ಆಸ್ಪತ್ರೆ ಇಂದು ಜನಮಾನಸದಲ್ಲಿ ಅಚ್ಚ ಹಸಿರಾಗಿ ಉಳಿದಿದೆ ಎಂದು ಶ್ರೀಗಳು ಶ್ಲಾಘಿಸಿದರು.

ಸಮಾಜದ ಕಟ್ಟ ಕಡೆಯ ವ್ಯಕ್ತಿ, ರೈತರು, ಕಾರ್ಮಿಕರು, ಜನಸಾಮಾನ್ಯರಿಗೂ ಆರೋಗ್ಯ ಸೇವೆ ತಲುಪಿಸಲು ಸರ್ಕಾರಗಳೂ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿವೆ. ಜೊತೆಗೆ ವೈದ್ಯರು, ಖಾಸಗಿ ಆಸ್ಪತ್ರೆಗಳು ಸಹ ಅದೇ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವುದರಿಂದ ಎಂತಹ ಖಾಯಿಲೆ ಬಂದರೂ ರೋಗಿಗಳು ಆತಂಕಪಡಬೇಕಾಗಿಲ್ಲ ಎಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಇದೇ ವೇಳೆ ನುಡಿದರು. ಆಸ್ಪತ್ರೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ 15ಮಂದಿ ಸಿಬ್ಬಂದಿಯನ್ನು ಸುವರ್ಣ ಮಹೋತ್ಸವದ ಅಂಗವಾಗಿ ಇಂದು ಸನ್ಮಾನಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು, ಕಾಮಾಕ್ಷಿ ಆಸ್ಪತ್ರೆ ನಿರ್ವಹಣೆ ಮಾಡುತ್ತಿರುವ ಬಿಎಸ್‌ಎಂಎಸ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಂ.ಮಹೇಶ್ ಶೆಣೈ, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಉಮೇಶ್ ಕಾಮತ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಉಪೇಂದ್ರರ 'ಎ' ಮತ್ತೆ ರಿಲೀಸ್



ಕನ್ನಡ ಚಿತ್ರರಂಗದ ಸರ್ವಕಾಲಿಕ ಸೂಪರ್‌ಹಿಟ್ ಚಿತ್ರ ಉಪೇಂದ್ರ ನಿರ್ದೇಶನದ "A". ಉಪೇಂದ್ರ ನಿರ್ದೇಶನದೊಂದಿಗೆ ನಾಯಕನಾಗೂ ನಟಿಸಿದ್ದ ಈ ಚಿತ್ರದ ನಾಯಕಿಯಾಗಿ ಚಾಂದಿನಿ ಅಭಿನಯಿಸಿದ್ದರು. ಇಂದು ಈ ಚಿತ್ರ ರೀ ರಿಲೀಸಾಗುತ್ತಿದ್ದು, ಈ ಸಂದರ್ಭದಲ್ಲಿ ನಾಯಕಿ ಚಾಂದಿನಿ ಚಿತ್ರದ ನೆನಪುಗಳನ್ನು "ಮೈಸೂರು ಮಿತ್ರ"ನೊಂದಿಗೆ ಹಂಚಿಕೊಂಡಿದ್ದಾರೆ.

'ಎ' ನಾಯಕಿ ಚಾಂದಿನಿ ಅವರ ಜೀವನವನ್ನೇ ಬದಲಿಸಿದ ಸಿನಿಮಾ. ಕನ್ನಡ ಚಿತ್ರರಂಗಕ್ಕೆ ಒಂದು ಮೈಲಿಗಲ್ಲು ಈ ಸಿನಿಮಾ ಅಂದರೆ ತಪ್ಪಾಗಲಾರದು. ಈ ರೀತಿಯಲ್ಲೂ ಸಿನಿಮಾ ಮಾಡಬಹುದು ಅಂತ ಚಿತ್ರರಂಗಕ್ಕೆ ಉಪೇಂದ್ರ ಅವರು ತೋರಿಸಿಕೊಟ್ಟರು. ಈ ಸಿನಿಮಾ ಆಗಿನ ಕಾಲಕ್ಕೆ ಹೇಗೆ ಪ್ರಸ್ತುತವೋ, ಈಗಿನ ಕಾಲಕ್ಕೂ ಕೂಡ ಈ ಸಿನಿಮಾ ಸಲ್ಲುತ್ತದೆ.

ನಾಯಕಿ ಚಾಂದಿನಿ "ಎ" ಸಿನಿಮಾದಲ್ಲಿ ಹೇಗಿದ್ದರೋ, ಈಗಲು ಹಾಗೇ ಇದ್ದಾರೆ. ಅದಕ್ಕೆ ಅವರು ನೀಡುವ ಕಾರಣ, ನನ್ನ ಜೀವನವನ್ನೇ ಬದಲಿಸಿದಂತಹ ಸಿನಿಮಾ ಅದು. ಅದರಿಂದ ನನಗೆ ಸಿಕ್ಕ ಕನ್ನಡ ಜನರ ಪ್ರೀತಿ ಹಾಗೂ ಆ ಸಿನಿಮಾದ ಅ ಒಂದು ಫೇಮಸ್ ಡೈಲಾಗ್ "ಗಾಡ್ ಈಸ್ ಗ್ರೇಟ್" ಅನ್ನುವ ಹಾಗೆ, ಇವರೆಲ್ಲರ ಆಶೀರ್ವಾದದಿಂದ ನಾನು ಇವತ್ತಿಗೂ "ಎ" ಚಾಂದಿನಿ ರೀತಿಯಲ್ಲೆ ಇದ್ದೀನಿ. ಕಾಲಘಟ್ಟವನ್ನೂ ಮೀರಿದ ಒಂದು ಅಪ್ರತಿಮ ಪ್ರೇಮಕಥೆ "ಎ" ಅಂತಾರೆ.

ಪ್ರಬುದ್ಧ ನಿರ್ದೇಶಕ ಉಪೇಂದ್ರ ಅವರ ನಿರ್ದೇಶನದ ಬಗ್ಗೆ ವರ್ಣಿಸಲು ಪದಗಳೇ ಇಲ್ಲ. ಅಂದಿಗೂ ಇಂದಿಗೂ ನನ್ನ ಮೆಚ್ಚಿನ ನಿರ್ದೇಶಕ ಉಪೇಂದ್ರ ಅವರೇ. ಗುರುಕಿರಣ್ ಅವರ ಸಂಗೀತದಲ್ಲಿ ಮೂಡಿಬಂದಿರುವ "ಎ" ಚಿತ್ರದ ಹಾಡುಗಳು ಈಗಲೂ ಜನಪ್ರಿಯ. ಕನ್ನಡಿಗರು "ಎ" ಚಿತ್ರದಿಂದ ಇಲ್ಲಿಯವರೆಗೂ ನನಗೆ ತೋರುತ್ತಿರುವ ಪ್ರೀತಿಗೆ ನಾನು ಸದಾ ಚಿರಋಣಿ. ಇಂತಹ ಸೂಪರ್‌ಹಿಟ್ ಚಿತ್ರದಲ್ಲಿ ನಟಿಸಲು ಅವಕಾಶ ನೀಡಿದ ನಿರ್ಮಾಪಕರಿಗೆ ಹಾಗೂ ನಿರ್ದೇಶಕರಿಗೆ ನನ್ನ ಧನ್ಯವಾದ. ಮೇ 17 'ಎ' ಚಿತ್ರ ರೀ ರಿಲೀಸ್ ಆಗುತ್ತಿದೆ. ಈಗಲೂ ಚಿತ್ರ ಯಶಸ್ವೀ ಪ್ರದರ್ಶನ ಕಾಣಲಿದೆ ಎಂದ ಚಾಂದಿನಿ, ಒಳ್ಳೆಯ ಕಥೆ ಸಿಕ್ಕರೆ ಮತ್ತೊಮ್ಮೆ ಕನ್ನಡ ಚಿತ್ರಗಳಲ್ಲಿ ನಟಿಸುತ್ತೇನೆ ಎನ್ನುತ್ತಾರೆ.

ಹೊಸ 'ರಾಮಾಯಣ'

ಇತ್ತೀಚಿನ ದಿನಗಳಲ್ಲಿ ಪೌರಾಣಿಕ ಕಥೆಗಳನ್ನೇ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರು ಇಷ್ಟಪಡುತ್ತಿದ್ದಾರೆ. ರಾಮಾಯಣ ಭಾರತೀಯ ಸಂಸ್ಕೃತಿ, ಪರಂಪರೆಯನ್ನು ಪ್ರತಿಬಿಂಬಿಸುವ ಅದ್ಭುತ ಮಹಾಗ್ರಂಥ. ಮರ್ಯಾದಾಪುರುಷ ಶ್ರೀರಾಮನ ಜೀವನ ಬಹುತೇಕ ಭಾರತೀಯರಿಗೆ ಮಾದರಿಯಾಗಿದೆ. ರಾಮರಾಜ್ಯದ ಪರಿಕಲ್ಪನೆಯ ಕನಸನ್ನು ಇಂದಿಗೂ ಕಾಣುತ್ತಿದ್ದಾರೆ. ರಾಮಾಯಣದಲ್ಲಿ ರಾಮ ಹಾಗೂ ಸೀತೆಯ ಪವಿತ್ರಪ್ರೇಮ, ಶ್ರೀರಾಮನ ಧರ್ಮಪರಿಪಾಲನೆ ಸೇರಿದಂತೆ ಹಲವು ಕುತೂಹಲಕರ ಸಂಗತಿಗಳಿವೆ. ಇದೀಗ ಉದಯ ಟಿವಿ ಶ್ರೀಮದ್ ರಾಮಾಯಣ ಧಾರಾವಾಹಿಯನ್ನು ಹೊಸ ದೃಷ್ಟಿಕೋನದಿಂದ ಪ್ರಸಾರ ಮಾಡಲು ಸಿದ್ಧವಾಗಿದೆ. ರಾಮಾಯಣವನ್ನು ಹೊಸ ಆಯಾಮದಿಂದ ತೋರಿಸುವ ಮೂಲಕ ಕಿರುತೆರೆ ವೀಕ್ಷಕರಿಗೆ ಹೊಸ ಅನುಭವ ನೀಡಲು ಹೊರಟಿದೆ. ಸಂಪೂರ್ಣ ನೂತನ ದೃಶ್ಯವೈಭವಗಳು ಮತ್ತು ಅನುಭವಿ ಕಲಾವಿದರ ತಂಡ ಈ ಪೌರಾಣಿಕ ಪಾತ್ರಗಳಿಗೆ ಹೊಸ ಜೀವ ತುಂಬಿದೆ. ವಿಶೇಷವಾಗಿ ಈ ಸೀರಿಯಲ್ ವೀಕ್ಷಕರಿಗೆ ಭರ್ಜರಿ ಬಹುಮಾನ ಗೆಲ್ಲುವ ಅವಕಾಶವಿದೆ. ಪ್ರತಿ ಸಂಚಿಕೆಯಲ್ಲಿ 250 ವೀಕ್ಷಕರಿಗೆ ಒಟ್ಟು 2.5 ಲಕ್ಷ ರೂ. ನಗದು ಬಹುಮಾನ ಗೆಲ್ಲುವ ಅವಕಾಶವಿದೆ. 'ಶ್ರೀಮದ್ ರಾಮಾಯಣ' ವೀಕ್ಷಿಸಿದ ನಂತರ ಕೊನೆಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಮಿಸ್ಡ್‌ಕಾಲ್ ಮೂಲಕ ಸರಿ ಉತ್ತರ ನೀಡಿದರೆ, ಅದರಲ್ಲಿ ಅದೃಷ್ಟಶಾಲಿಗಳಾದ 250 ವೀಕ್ಷಕರಿಗೆ ಪ್ರತಿ ಸಂಚಿಕೆಗೆ ತಲಾ 1000 ರೂ. ಬಹುಮಾನ ನೀಡಲಾಗುತ್ತದೆ.

ಸಿದ್ದೇಗೌಡ್ರ 'ಕುಂಟೆಬಿಲ್ಲೆ'



ಈ ಹಿಂದೆ ದಕ್ಷಯಜ್ಞ, ತರ್ಲೆವಿಲೇಜ್, ಋತುಮತಿ ಎಂಬ ಚಿತ್ರಗಳನ್ನು ನಿರ್ದೇಶಿಸಿದ್ದ ಸಿದ್ದೇಗೌಡ ಜಿ.ಬಿ.ಎಸ್. ಅವರು ಇದೀಗ ಕುಂಟೆಬಿಲ್ಲೆ ಎಂಬ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಅಕ್ಷಯ ತೃತೀಯ ಶುಭ ದಿನದಂದು ಈ ಚಿತ್ರದ ಮುಹೂರ್ತ ಸಮಾರಂಭ ಮೈಸೂರಿನಲ್ಲಿ ನಡೆಯಿತು. ಚಿತ್ರಕ್ಕೆ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕ್ಲಾಪ್ ಮಾಡುವ ಮೂಲಕ ಚಾಲನೆ ನೀಡಿದರು. ಈ ಚಿತ್ರದ ಮೂಲಕ ಯುವನಟ ಯದು ನಾಯಕನಾಗಿ ಎಂಟ್ರಿ ಕೊಡುತ್ತಿದ್ದು, ನಟಿ ಮೇಘಶ್ರೀ ನಾಯಕಿಯಾಗಿದ್ದಾರೆ. ನಾವೆಲ್ಲಾ ಚಿಕ್ಕ ವಯಸ್ಸಿನಲ್ಲಿ ಆಡುತ್ತಿದ್ದ ಆಟ ಕುಂಟೆಬಿಲ್ಲೆ. ಅದೇ ಟೈಟಲ್ ಇಟ್ಟುಕೊಂಡು ಮಾಡುತ್ತಿರುವ ಚಿತ್ರದ ಮೂಲಕ ಪ್ರೀತಿ, ನೋವು, ಕಾಮ ಎಲ್ಲವನ್ನೂ ಕಟ್ಟಿಕೊಡಲಿದ್ದೇವೆ ಎಂದು ನಿರ್ದೇಶಕ ಸಿದ್ದೇಗೌಡ ತಿಳಿಸಿದರು. ನಿರ್ಮಾಪಕ ಎಸ್.ಬಿ.ಶಿವು ಮಾತನಾಡಿ, ಇದುವರೆಗೂ ನಮ್ಮ ಜೀವಿತ ಕ್ರಿಯೇಷನ್‌ನಿಂದ ಒಳ್ಳೆಯ ಚಿತ್ರಗಳನ್ನೇ ಮಾಡುತ್ತ ಬಂದಿದ್ದೇವೆ. ಈ ಚಿತ್ರವೂ ಜನರಿಗೆ ಒಳ್ಳೆಯ ಸಂದೇಶ ನೀಡಲಿದೆ ಎಂದರು.

ಮತ್ತೊಬ್ಬ ನಿರ್ಮಾಪಕ ಕುಮಾರ್‌ಗೌಡ ಮಾತನಾಡಿ, ನಿರ್ಮಾಣ ಕ್ಷೇತ್ರ ನನಗೆ ಹೊಸದು. 30 ವರ್ಷದ ಹಿಂದೆ ನಾನೊಬ್ಬ ಕಲಾವಿದನಾಗಬೇಕೆಂದು ಬೆಂಗಳೂರಿಗೆ ಬಂದವನು. ಆದರೆ ಅದು ಸಾಧ್ಯವಾಗಿರಲಿಲ್ಲ. ಈಗ ಅದನ್ನು ನನ್ನ ಮಗನ ಮೂಲಕ ಈಡೇರಿಸಿಕೊಳ್ಳುತ್ತಿದ್ದೇನೆ. ನನ್ನ ಮಗನಿಗೆ ರಂಗಭೂಮಿ ಕಡೆಗೆ ಆಸಕ್ತಿ ಇತ್ತು. ಇದೀಗ ವಿದ್ಯಾಭ್ಯಾಸ ಮುಗಿಸಿ ಅಭಿನಯದ ಕಡೆಗೆ ಬರುತ್ತಿದ್ದಾನೆ. ಈಗ ನಾನೇ ಮುಂದೆ ನಿಂತು ಸಿದ್ದೇಗೌಡರ ಗರಡಿಗೆ ಬಿಟ್ಟಿದ್ದೇವೆ. ನನ್ನ ಮಗನಿಗೆ ಹೊಂದುವಂತ ಒಳ್ಳೆಯ ಕತೆ ಇದೆ. ಸಿನಿಮಾ ಚೆನ್ನಾಗಿ ಮೂಡಿಬರಲಿದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು. ನಾಯಕಿ ಮೇಘಶ್ರೀ ಮಾತನಾಡಿ, ಟೈಟಲ್ ನಷ್ಟೇ ಸ್ಕ್ರಿಪ್ಟ್ ಕೂಡ ಚೆನ್ನಾಗಿದೆ. ಕನ್ನಡದಲ್ಲಿ ಈ ರೀತಿಯ ಕಥೆ ಕೇಳಿರಲಿಲ್ಲ. ಒಳ್ಳೆಯ ತಂಡ ಸಿಕ್ಕಿದ್ದು, ಶ್ರೀಮಂತ ಕುಟುಂಬದ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ ಎಂದರು. ನಾಯಕ ಯದು ಮಾತನಾಡಿ, ನನ್ನ ಮೇಲೆ ನಂಬಿಕೆ ಇಟ್ಟು ಅವಕಾಶ ಕೊಟ್ಟಿದ್ದಾರೆ. ಆ ನಿಟ್ಟಿನಲ್ಲಿ ಪಾತ್ರ ಮಾಡುವೆ ಎಂದರು. ಹಿರಿಯನಟ ಶಂಕರ್ ಅಶ್ವಥ್ ಮಾತನಾಡಿ, ನಾನು ನಾಯಕಿಯ ತಂದೆ ಪಾತ್ರ ಮಾಡಿದ್ದೇನೆ. ಒಂದು ಗ್ರಾಮೀಣ ಆಟ ಜೀವನದಲ್ಲಿ ಎಷ್ಟು ಮುಖ್ಯ ಆಗುತ್ತದೆ ಎನ್ನುವುದನ್ನು ಚಿತ್ರದಲ್ಲಿ ಹೇಳಿದ್ದಾರೆ. ವಿಭಿನ್ನ ಮತ್ತು ಕುತೂಹಲಕಾರಿ ಚಿತ್ರ ಇದಾಗಲಿದೆ ಎಂದು. ಸಂಭಾಷಣಾಗಾರ ಬಿ.ಎ.ಮಧು ಮಾತನಾಡಿ, ನಾನು ಪ್ರತಿ ಚಿತ್ರಕ್ಕೆ ಬರೆಯುವಾಗಲೂ ಹೊಸದಾಗಿಯೇ ಬರೆಯುತ್ತೇನೆ. ಅದೇರೀತಿ ಈ ಚಿತ್ರದ ಕಥೆಗೆ ತಕ್ಕಂತೆ ಸಂಭಾಷಣೆ ಬರೆದಿದ್ದೇನೆ ಎಂದರು.



'ಸೂಟ್' ಮುಖವಾಡ ಕಳಚಿದಾಗ...


ಗಣ್ಯರಿಂದ ಟ್ರೇಲರ್ ಬಿಡುಗಡೆ



ಮಾತಿನ ಮುಖವಾಡ, ಭಾವನೆಗಳ ಸೂಟ್ ಈ ಎರಡನ್ನೂ ಕಳಚಿದಾಗ ಮನುಷ್ಯನ ನಿಜವಾದ ಬಣ್ಣ ಬಯಲಾಗುತ್ತದೆ ಎಂದು ನಿರ್ದೇಶಕ ಭಗತ್‌ರಾಜ್ ಸೂಟ್ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಹೇಳಿದರು. ಪ್ರೀತಿ, ಹಣ, ಕಲೆ, ಕಾಮ ಈ ನಾಲ್ಕು ಅಂಶಗಳ ಮೇಲೆ ನಡೆಯುವ ಘಟನೆಗಳನ್ನಿಟ್ಟುಕೊಂಡು ದ ಸೂಟ್ ಚಿತ್ರವನ್ನು ನಿರ್ದೇಶಿಸಿದ್ದಾರೆ ಭಗತ್‌ರಾಜ್. ಇತ್ತೀಚೆಗೆ ನಡೆದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಫಿಲಂ ಚೇಂಬರ್ ಅಧ್ಯಕ್ಷ ಎನ್.ಎಂ.ಸುರೇಶ್ ಹಾಗೂ ಮಾಜಿ ಸಚಿವ ಕೆ.ಗೋಪಾಲಯ್ಯ ಅತಿಥಿಗಳಾಗಿ ಭಾಗವಹಿಸಿ ಶುಭ ಕೋರಿದರು. ಸರ್ ಎಂ.ವಿಶ್ವೇಶ್ವರಯ್ಯ, ನೆಹರು ಸೇರಿದಂತೆ ಸಾಕಷ್ಟು ಸೆಲೆಬ್ರೆಟಿಗಳು ಹಾಕುತ್ತಿದ್ದ ಸೂಟ್‌ಗೆ ಅದರದೇ ಆದ ಮಹತ್ವವಿದೆ. ಈ ಸೂಟ್‌ನ್ನೆ ಹೀರೋ ಆಗಿಸಿ ನಿರ್ದೇಶಕರು ಸಸ್ಪೆನ್ಸ್, ಥ್ರಿಲ್ಲರ್ ಕಥಾನಕ ಹೆಣೆದಿದ್ದಾರೆ. ಮೇ 17ರಂದು ಬಿಡುಗಡೆಯಾಗುತ್ತಿರುವ ಈ ಚಿತ್ರಕ್ಕೆ ಅತಿಥಿ ದೇವೋಭವ ಎಂಬ ಅಡಿಬರಹವಿದ್ದು, ಬಿ.ರಾಮಸ್ವಾಮಿ ಹಾಗೂ ಮಾಲತಿಗೌಡ ಸೇರಿ ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ,

ಸೂಟ್ ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ಭಗತ್‌ರಾಜ್, ಈ ಟ್ರೇಲರ್ ಮಾಡೋದು ನನಗೂ ಚಾಲೆಂಜಿಂಗ್ ಆಗಿತ್ತು, ಬಣ್ಣ ಮತ್ತು ಭಾವನೆಗಳ ನಡುವೆ ನಡೆಯುವ ಕಥೆ ಇದರಲ್ಲಿದ್ದು, ಮೊದಲ ಬಾರಿಗೆ ತುಂಬಾ ಕಲಾಕೃತಿಗಳನ್ನು ಈ ಚಿತ್ರದಲ್ಲಿ ಬಳಸಿದ್ದೇವೆ, ಕ್ಲೈಮ್ಯಾಕ್ಸ್ ಭಾಗದಲ್ಲಿ ಬೆಳಗಾವಿಯ ಕಿರಣ್ ಅವರು ಸಾಕಷ್ಟು ಪೇಂಟಿಂಗ್ಸ್‌ಗಳನ್ನು ತಂದುಕೊಟ್ಟರು. ಕಾಶೀನಾಥ್ ಅವರ ಸ್ಫೂರ್ತಿಯಿಂದ ನನಗೆ ತಿಳಿದಮಟ್ಟಿಗೆ ಈ ಸಿನಿಮಾದಲ್ಲಿ ಹೇಳಿದ್ದೇನೆ.

ಸಿನಿಪದಬಂಧ-526





ಉಮ್ಮತ್ತೂರು ಇಂದುಶೇಖರ್

ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ವಿಜೇತರು: ಹೇಮಲತಾ ಸಂಪತ್ತು, ನಂ 44/2, 4ನೇ ಅಡ್ಡರಸ್ತೆ, ಯರಗನಹಳ್ಳಿ, ಮೈಸೂರು-570011

ಎಡದಿಂದ ಬಲಕ್ಕೆ

1.ಸಸ್ತನಿ ವರ್ಗಕ್ಕೆ ಸೇರಿದ ಪ್ರಾಣಿ ತೆರೆಗೂ ಬಂದಿದೆ 3
3.ಜಗ್ಗೇಶ್ ಅಲಂಕರಿಸಿದ ಪ್ರೀತಿಯ ಪೀಠ 6
9.ವಿಷ್ಣುವರ್ಧನ್ ಕಟ್ಟಿದ ಪುಟಾಣಿಯರ ಪಡೆ 5
10.ಪಟ್ಟಾಭಿರಾಮು ರೆಡ್ಡಿಯ ಪ್ರಬಲ ಗಾಳಿ ತೆರೆಯ ಮೇಲೂ ಅಪ್ಪಳಿಸಿದೆ 5
11. ಸಪ್ತಋಷಿಗಳಲೊಬ್ಬನ ಜೊತೆ ಮೃಗ ಬಂದಾಗ ಪ್ರತ್ಯಕ್ಷಗೊಂಡ ನಟ 5
13.ಬಾಲರಾಜ್ ನ ಶಿವನ ಭಯಂಕರ ನೃತ್ಯ 5
15. ರವಿ ಕಾರಂಜಿಯವರ ಚಿತ್ರ ಎಂದೂ ನಾಶವಾಗುವುದಿಲ್ಲ! 5
16. ಟೈಗರ್ ಪ್ರಭಾಕರ್ ಕಟ್ಟಿದ ನಮ್ಮ ದೇಶ ಶ್ರೇಷ್ಠವಾಗಿದೆ 5
19. ಸುದೀಪ್, ಸಮೀರಾ, ಚಿರಂಜೀವಿ ಸರ್ಜಾ ಅಭಿನಯಕ್ಕೆ ಅಯ್ಯಪ್ಪ ಪಿ.ಶರ್ಮಾ ನಿರ್ದೇಶಕ 6
20. ರಮೇಶ್ ಅರವಿಂದ್ "ಕೊಲೆಗಾರ" 3

ಸಿನಿ ಪದಬಂಧ 525ರ ಉತ್ತರ

ಜ	ಗ	ಜ್ಯೋ	ತಿ	ಬ	ಸ	ವೇ	ಶ್ವ	ರ		ರಾ
ನ್ಮ					ಪ್ತ			ಮ್ಯ		ಜಾ
ರ		ಆ	ನಂ	ದ	ಸಾ	ಗ	ರ		ನಿ	ಧಿ
ಹ		ಘಾ			ಗ		ತ್ನಾ			ರಾ
ಸ್ಯ		ತ			ರ	ಸಿ	ಕ	ರ	ರಾ	ಜ
			ಮ				ರ			
ಸ	ಮ	ಯ	ದ	ಗೊಂ	ಬೆ			ನ		ಕಿಂ
ತಿ			ನಿ		ಟ್ಟ			ಧ		ದ
ಸಾ	ಕ್ಷಿ		ಕೆ	ಜಿಂ	ದ	ರ	ಗಾ	ಬಂ		ರಿ
ವಿ		ಮೀ			ಹೂ					ಜೋ
ತ್ರಿ		ನಾ	ನಿ	ರು	ವು	ದೇ	ನಿ	ನ	ಗಾ	ಗಿ

ಮೇಲಿನಿಂದ ಕೆಳಕ್ಕೆ

2."ಹಂಸವೇ ಹಂಸವೇ ಹಾಡು ಬಾ.... ", ಗೀತೆಯ ಚಿತ್ರ 4
4. ವಿಷ್ಣು ನೇತೃತ್ವದ ವಿಗ್ರಹಚೋರರಿಗೆ ಜೋಸೈಮನ್ ನಿರ್ದೇಶಕ 6
5. ಜೇನಿನೊಂದಿಗೆ ಬೆರೆತ ಕ್ಷೀರ 2
6. ಬೆಣ್ಣೆಯಂತಿರುವ ನಟಿ 4
7. ರವಿಚಂದ್ರನ್ ಶ್ರೇಷ್ಠವಾದ ವ್ಯಕ್ತಿ 5
8. ಗುರುಬ್ರಹ್ಮ ಚಿತ್ರದ ನಾಯಕಿ ಒಳ್ಳೆಯವಳು 3
12. ಸುತ್ತಮುತ್ತಲಿನ ಹಳ್ಳಿಗಳಿಗೆ ಬಿ.ಸಿ. ಪಾಟೀಲ್ ಪ್ರಮುಖ ವ್ಯಕ್ತಿ 6
14.ಋತುವಿನಲ್ಲಿ ಕೆ. ಶಿವರಾಂ ಬರೆದ ಪದ್ಯ 5
15. ರವಿಚಂದ್ರನ್ ಅಭಿನಯದಲ್ಲಿ ಘಟಿಸಲಾಗದ ಚಿತ್ರ 4
16. ಶ್ರೀಮುರಳಿಯ ತೀವ್ರತೆಯ ಅಬ್ಬರ 3
17. ಪುನೀತ್ ಅದೃಷ್ಟಶಾಲಿ 4
18. ಪಂಚಮ _ _ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳ ವಿರುದ್ಧ ರೈತರ ಪ್ರತಿಭಟನೆ

ತಾಲೂಕು ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ರೈತರು: ಪೊಲೀಸರೊಂದಿಗೆ ಮಾತಿನ ಚಕಮಕಿ



ಕೆ.ಆರ್.ನಗರದ ತಾಲೂಕು ಕಚೇರಿ ಎದುರು ರೈತರು ಪ್ರತಿಭಟನೆ ನಡೆಸಿದರು.

ಕೆ.ಆರ್.ನಗರ, ಮೇ 16– ಸಾಲಿಗ್ರಾಮ, ಕೆ.ಆರ್.ನಗರ ತಾಲೂಕಿನ ತಹಸೀಲ್ದಾರ್‌ಗಳು ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ರೈತರ ಕೆಲಸಗಳನ್ನು ಮಾಡಿಕೊಡುತ್ತಿಲ್ಲ ಎಂದು ಆರೋಪಿಸಿ ರೈತರು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಭಾಗ್ಯರಾಜ್ ಹಾಗೂ ಉಪಾಧ್ಯಕ್ಷ ಕೆ.ತಿಮ್ಮಪ್ಪ ನೇತೃತ್ವದಲ್ಲಿ ಪಟ್ಟಣದ ತಾಲೂಕು ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಈ ವೇಳೆ ಕೆ.ಆರ್.ನಗರ ಸಿಪಿಐ ಪಿ.ಪಿ.ಸಂತೋಷ್, ಸಾಲಿಗ್ರಾಮ ಸಿಪಿಐ ಕೆ.ಕೃಷ್ಣರಾಜ ಹಾಗೂ ಸಿಬ್ಬಂದಿ ತಾಲೂಕು ಕಚೇರಿಗೆ ಮುತ್ತಿಗೆ ಯತ್ನಿಸಿದ ರೈತರನ್ನು ತಡೆಗಟ್ಟಿದರು. ಈ ವೇಳೆ ಪೊಲೀಸರೊಂದಿಗೆ ರೈತರು ಮಾತಿನ ಚಕಮಕಿ ನಡೆಸಿದರು. ಅಲ್ಲದೇ, ತಾಲೂಕು ಕಚೇರಿ ಎದುರು ಜಮಾಯಿಸಿ ಪ್ರತಿಭಟನೆ ನಡೆಸಿದ ರೈತರು ಕೇಂದ್ರ, ರಾಜ್ಯ ಸರ್ಕಾರ ಹಾಗೂ ತಾಲೂಕು ಆಡಳಿತದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಅನ್ನದಾತರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಆಗಮಿಸಿದರೇ ಪೊಲೀಸರು ನಮ್ಮನ್ನು ತಡೆಯುತ್ತಾರೆ. ಆದರೆ ಭ್ರಷ್ಟರು, ಲಂಚಕೋರರನ್ನು ತಡೆಯುವುದಿಲ್ಲ. ನಮ್ಮ ಕೆಲಸ ಮಾಡಿಕೊಡದ ಅಧಿಕಾರಿಗಳನ್ನು ಪ್ರಶ್ನಿಸುತ್ತೇವೆ. ನಮ್ಮನ್ನು ಒಳ ಬಿಡಿ ಎಂದು ಒತ್ತಾಯಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ಕೆ.ತಿಮ್ಮಪ್ಪ ಮಾತನಾಡಿ, ಎರಡೂ ತಾಲೂಕುಗಳನ್ನು ಸರ್ಕಾರ ಬರಪೀಡಿತ ಎಂದು ಘೋಷಿಸಿದರೂ ಬರ ಮತ್ತು ಮೇವು ಬ್ಯಾಂಕ್, ಗೋ ಶಾಲೆ ತೆರೆದಿಲ್ಲ. ಬೇಸಿಗೆಯಲ್ಲಿ ಸಮರ್ಪಕವಾಗಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುತ್ತಿಲ್ಲ. ಪ್ರತಿ ತಿಂಗಳು ಹಾಗೂ 2 ತಿಂಗಳಿಗೊಮ್ಮೆ ರೈತರ ಸಭೆ ಕರೆಯುವಂತೆ ಮನವಿ ಮಾಡಿದರೂ ಸಭೆ ಕರೆದಿಲ್ಲ. ತಾಲೂಕು ಕಚೇರಿಗಳಲ್ಲಿ ರೈತರು ಹಣ ಕೊಟ್ಟರೆ ಮಾತ್ರ ಅಧಿಕಾರಿಗಳು ಕೆಲಸ ಮಾಡಿಕೊಡುತ್ತಾರೆ. ಇಲ್ಲದಿದ್ದರೇ ವರ್ಷ, 6 ತಿಂಗಳ ಅಲೆಯಬೇಕು. ಮರಣ ಮತ್ತು ಜನನ ಶಾಖೆಯಲ್ಲಿ ಅರ್ಜಿ ಸಲ್ಲಿಸಿ 3 ತಿಂಗಳು ಕಳೆದರೂ ಪ್ರಮಾಣ ಪತ್ರ ನೀಡುತ್ತಿಲ್ಲ ಎಂದು ಆರೋಪಿಸಿದರು.

ರಾಜ್ಯಾಧ್ಯಕ್ಷ ಭಾಗ್ಯರಾಜ್ ಮಾತನಾಡಿ, ನಿದ್ರೆಯಲ್ಲಿರುವ ತಾಲೂಕು ಆಡಳಿತ ಹಾಗೂ ಸರ್ಕಾರವನ್ನು ಎಚ್ಚರಿಸುವ ಜೊತೆಗೆ ಭ್ರಷ್ಟಾಚಾರದಲ್ಲಿ ಮುಳುಗಿರುವ ತಾಲೂಕು ಆಡಳಿತದ ವಿರುದ್ಧ ಹೋರಾಡುತ್ತಿರುವ ನಮ್ಮ ಹೋರಾಟವನ್ನು ಯಾರಿಂದಲೂ ಹತ್ತಿಕ್ಕಲು ಸಾಧ್ಯವಿಲ್ಲ ಎಂದರು.

ತಾಲೂಕು ಕಚೇರಿಯಲ್ಲಿ ಅಧಿಕಾರಿಗಳು ಮುಂಬರುವ ದಿನಗಳಲ್ಲಿ ನಮ್ಮ ಕೆಲಸ ಮಾಡಿಕೊಡಲಿಲ್ಲ ಎಂದರೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಎಲ್ಲಾ ಕಚೇರಿಗಳನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ತಾಲೂಕು ದಂಡಾಧಿಕಾರಿ ಪೂರ್ಣಿಮಾ, ರೈತರ ಅಹವಾಲುಗಳನ್ನು ಸ್ವೀಕರಿಸಿ ಅದನ್ನು ಮೇಲಧಿಕಾರಿಗಳಿಗೆ ಕಳುಹಿಸುವ ಜೊತೆಗೆ ಸಮಸ್ಯೆ ಬಗೆಹರಿಸುವುದಾಗಿ ರೈತರ ಜೊತೆ ಗೌರವಯುತವಾಗಿ ನಡೆದುಕೊಳ್ಳುವ ಭರವಸೆ ನೀಡಿದರು. ನಂತರ ಪ್ರತಿಭಟನೆ ಅಂತ್ಯಗೊಂಡಿತು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ರಾಜಣ್ಣ, ಜಿಲ್ಲಾಧ್ಯಕ್ಷ ರವಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಹರ್ಷಕುಮಾರ್, ನಾಗರಾಜ್, ನಂದೀಶ್, ರಮೇಶ್, ಶಿವಣ್ಣೇಗೌಡ, ಕಾಳೇಗೌಡ, ನಾಗರಾಜೇಗೌಡ, ವಿಷ್ಣುವರ್ಧನ, ಮಂಜುನಾಥ್, ಬಸವರಾಜ್, ರವಿ, ಸಿಂಹಗೌಡ ಇತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅರಮನೆ 4 (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಗಧೀರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಗ ನಾನ್ ಥಾನ್ ಕಿಂಗು (ತ)	4 ಪ್ರದರ್ಶನಗಳು
ಸಂಗಂ	
ದ ಸೂಟ್ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಯುವ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇಫ್ 2024 (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಮ.1.45ಕ್ಕೆ, ದಿ ಬಾಯ್ ಅಂಡ್ ದಿ ಹೆರಾನ್ (ಜ): ಸಂ.4.45ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.7.20ಕ್ಕೆ,
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.55ಕ್ಕೆ, **A** (ಕ): ಮ.1.20ಕ್ಕೆ, ಶ್ರೀಕಾಂತ್ (ಹಿಂ): ಸಂ.4.25ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಸುರೇಶಿಂತೆಯುಂ ಸುಮಲತಾಯುದೆಯುಂ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಸ್ವಿಚ್ ಕೇಸ್ ಎನ್ (ಕ): ಬೆ.10.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.1.15ಕ್ಕೆ, ರಾ.7.20ಕ್ಕೆ, ಕೃಷ್ಣ ನೀ ಬೇಗನೆ ಬಾರೋ (ಕ): ಸಂ.4.15ಕ್ಕೆ, ಅಪರಿಚಿತುಡು (ತೆ): ರಾ.10ಕ್ಕೆ.
ಸ್ಕ್ರೀನ್ 4	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.50ಕ್ಕೆ, ಮ.12.55ಕ್ಕೆ, ಮ.3ಕ್ಕೆ, ಸಂ.5.05ಕ್ಕೆ, ರಾ.10.05ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, **A** (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಮನ ಅವತಾರ (ಕ): ಮ.1.30ಕ್ಕೆ, ಸಂ.4.20ಕ್ಕೆ, ರಣಹದ್ದು (ಕ): ರಾ.7.10ಕ್ಕೆ.
ಸ್ಕ್ರೀನ್ 2	ಅರಮನೈ 4 (ತ): ರಾ.7ಕ್ಕೆ.
ಸ್ಕ್ರೀನ್ 3	ಗುರುವಾಯೂರಂಬಲ ನಡಾಯಿಲ್ (ಮ): ರಾ.7ಕ್ಕೆ.
ಸ್ಕ್ರೀನ್ 4	ಅರಮನೈ 4 (ತ): ಮ.1.30ಕ್ಕೆ, ಕಿರಾತಕ 2 (ಕ): ಸಂ.4.25ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.7.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **4N6** (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀಕಂಠೇಶ್ವರನ ದರ್ಶನ ಪಡೆದ ಶಾಸಕ ಹೆಚ್.ಡಿ.ರೇವಣ್ಣ



ಶಾಸಕ ಹೆಚ್.ಡಿ.ರೇವಣ್ಣ ಶ್ರೀಕಂಠೇಶ್ವರನ ದರ್ಶನ ಪಡೆದರು.

ಶ್ರೀಕಂಠೇಶ್ವರನ ಸನ್ನಿಧಿಗೆ ಬಂದು ಸಂಕಷ್ಟದಿಂದ ಪಾರು ಮಾಡುವಂತೆ ವಿಶೇಷ ಪೂಜೆ ಮಾಡಿಸಿದರು. ದೇವಾಲಯ ಬಾಗಿಲು ಮುಚ್ಚುವ ವೇಳೆಗೆ ಶ್ರೀಕಂಠೇಶ್ವರನ ದರ್ಶನಕ್ಕೆ ಬಂದ ಮಾಜಿ ಸಚಿವ ಎಚ್.ಡಿ.ರೇವಣ್ಣ ಮೊದಲಿಗೆ ಶ್ರೀಕಂಠೇಶ್ವರನ ದರ್ಶನ ಪಡೆದು ಕೆಲಕಾಲ ಧ್ಯಾನಸಕ್ತರಾಗಿ ಪ್ರಾರ್ಥನೆ ಸಲ್ಲಿಸಿದರು. ನಂತರ ಸುಬ್ರಹ್ಮಣ್ಯಸ್ವಾಮಿ, ಚಂಡಿಕೇಶ್ವರ, ಪಾರ್ವತಿ ದೇವಿ, ಸತ್ಯನಾರಾಯಣಸ್ವಾಮಿ ದರ್ಶನ ಪಡೆದರು. ದೇವಾಲಯದಿಂದ ಅವರಿಗೆ ಶೇಷ ವಸ್ತ್ರ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಹಾಗೂ ಜೆಡಿಎಸ್ ಮುಖಂಡರು ಹಾಜರಿದ್ದರು.

ನಂಜನಗೂಡು, ಮೇ 16– ಇಲ್ಲಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಮಾಜಿ ಸಚಿವರೂ ಆದ ಶಾಸಕ ಹೆಚ್.ಡಿ.ರೇವಣ್ಣ ಗುರುವಾರ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಇತ್ತೀಚೆಗೆ ರೇವಣ್ಣ ಅವರು ಲೈಂಗಿಕ ಕಿರುಕುಳ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿ ಜೈಲಿನಿಂದ ಬಿಡುಗಡೆಯಾದ ಬಳಿಕ ತಮ್ಮ ಆರಾಧ್ಯ ದೈವ ಶ್ರೀಕಂಠೇಶ್ವರನ ಸನ್ನಿಧಿಗೆ ಬಂದು ಸಂಕಷ್ಟದಿಂದ ಪಾರು ಮಾಡುವಂತೆ ವಿಶೇಷ ಪೂಜೆ ಮಾಡಿಸಿದರು.

ಅಂತಾರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ



ಸರಗೂರು, ಮೇ 16– ಬಡತನದಲ್ಲಿ ಅರಳಿದ ಗ್ರಾಮೀಣ ಪ್ರತಿಮೆ, ಸಿಂಗಾಪುರದಲ್ಲಿ ನಡೆದ ಅಂತಾರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ ಸರಗೂರಿನ ಸಾಗರೆಯ ಧನರಾಜ್ ಬೆಳ್ಳಿ ಪದಕ ಪಡೆದಿದ್ದಾರೆ.

24 ವರ್ಷದ ಧನರಾಜ್ ಮೂಲತಃ ಸರಗೂರು ತಾಲೂಕಿನ ಸಾಗರೆ ಗ್ರಾಮದ ನಿವಾಸಿ ಮಹದೇವ ಮತ್ತು ಲಕ್ಷಮ್ಮ ದಂಪತಿಯ ಪುತ್ರ. ತಂದೆ–ತಾಯಿ ತರಕಾರಿ ಮಾರಿ ಜೀವನ ನಡೆಸುತ್ತಿದ್ದಾರೆ. ಧನರಾಜ್ ಸಹ ತಂದೆ ತಾಯಿಗೆ ಬೆನ್ನೆಲುಬಾಗಿ ತರಕಾರಿ ಮಾರುವುದರಲ್ಲಿ ಕೈಜೋಡಿಸಿದ್ದು, ಮೈಸೂರಿನ ಅರವಿಂದನಗರದಲ್ಲಿರುವ ಫಿಟ್‌ನೆಸ್ ಸೆಂಟರೊಂದರಲ್ಲಿ ಕಳೆದ ಒಂದೂವರೆ ವರ್ಷದಿಂದ ತರಬೇತುದಾರ ಎಂ.ಬಿ.ಚಂದನ್ ಬಳಿ ತರಬೇತಿ ಪಡೆಯುತ್ತಿದ್ದಾರೆ.

ತರಕಾರಿ ಮಾರಾಟವಾದ ನಂತರ ಪ್ರತಿದಿನ ಸಾಗರೆ ಗ್ರಾಮ ದಿಂದ ಸಂಜೆ ಮೈಸೂರಿನ ಫಿಟ್‌ನೆಸ್‌ಗೆ ತೆರಳಿ ಸಂಜೆ 7 ರಿಂದ ರಾತ್ರಿ 9 ಗಂಟೆಯವರೆಗೆ ಅಭ್ಯಾಸ ಮಾಡುತ್ತಿದ್ದಾರೆ. ಇತ್ತೀಚೆಗೆ ಸಿಂಗಾಪುರದಲ್ಲಿ ಎಫ್‌ಐಎಫ್ [ಫಿಟ್‌ನೆಸ್ ಇಂಟರ್ ನ್ಯಾಷನಲ್ ಫೆಡರೇಷನ್] ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.

ಬೈಕ್‌ಗಳ ಮುಖಾಮುಖಿ ಡಿಕ್ಕಿ: ಸವಾರ ಸಾವು



ಹುಣಸೂರು, ಮೇ 16– ಎರಡು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹುಣಸೂರು ತಾಲೂಕಿನ ರಾಮನಾಥಪುರ–ತೆರೆಕಣಾಂಬಿ ರಾಜ್ಯ ಹೆದ್ದಾರಿಯ ಶಿರೇನಹಳ್ಳಿ ಗ್ರಾಮದ ಬಳಿ ನಡೆದಿದೆ.

ಮರೂರು ಕಾವಲ್ ಗ್ರಾಮದ ಸುಂದರೇಗೌಡರ ಪುತ್ರ ಸಾಗರ್(35) ಸಾವನ್ನಪ್ಪಿದವರು.

ವಿವರ: ಸಾಗರ್ ಮತ್ತು ಆತನ ಸ್ನೇಹಿತ ಅರಸು ಕಲ್ಲಹಳ್ಳಿ ಹರೀಶ್ ಎಂಬುವರು ಕೆ.ಆರ್.ನಗರದ ಹೆಬ್ಬಾಳು ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಊಟ ಮುಗಿಸಿಕೊಂಡು ವಾಪಸ್ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಹುಣಸೂರು ಕಡೆಯಿಂದ ಬಂದ ಕೆ.ಆರ್.ನಗರ ತಾಲೂಕಿನ ಕೆಸ್ತೂರು ಕೊಪ್ಪಲು ಗ್ರಾಮದ ಕೆಂಡಗಣ್ಣಸ್ವಾಮಿ ಅವರ ಬೈಕ್‌ಗೆ ಡಿಕ್ಕಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡ ಸಾಗರ್ ಸ್ಥಳದಲ್ಲೇ ಸಾವನ್ನಪ್ಪಿದರೇ, ಕೆಂಡಗಣ್ಣಸ್ವಾಮಿ ತೀವ್ರ ಗಾಯಗೊಂಡು ಹುಣಸೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನು ಹಿಂಬದಿಸವಾರ ಹರೀಶ್ ಅವರನ್ನು ಹುಣಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸಾಗರ್ ಶವವನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಕಚೇರಿಯಲ್ಲಿ ಭಗೀರಥ ಮಹರ್ಷಿ ಜಯಂತಿ



ತಿ.ನರಸೀಪುರದ ಕಾಂಗ್ರೆಸ್ ಕಚೇರಿಯಲ್ಲಿ ಭಗೀರಥ ಮಹರ್ಷಿ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಮೇ 16– ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಭಗೀರಥ ಮಹರ್ಷಿ ಜಯಂತಿ ಆಚರಿಸಲಾಯಿತು.

ಸಮಾಜ ಕಲ್ಯಾಣ ಸಚಿವರ ಆಪ್ತ ಸಹಾಯಕ ಬಸವರಾಜು ಹಾಗೂ ಪಕ್ಷದ ಕಾರ್ಯಕರ್ತರು ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಹಿಂದುಳಿದ ವರ್ಗಗಳ ಅಧ್ಯಕ್ಷ ಕೇತಹಳ್ಳಿ ಸಿದ್ದಶೆಟ್ಟಿ ಮಾತನಾಡಿ, ಭಗೀರಥ ಮಹರ್ಷಿ ಶಿವನ ಕುರಿತು ತಪಸ್ಸು ಮಾಡಿ ಗಂಗೆಯನ್ನು ಧರೆಗೆ ತಂದ ಮಹಾಪುರುಷ. ಅವರ ತತ್ವ ಸಿದ್ಧಾಂತ, ಆದರ್ಶ ಇಂದಿಗೂ ಪ್ರಸ್ತುತವಾಗಿದ್ದು, ಅವುಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.

ಭಗೀರಥ ಮಹರ್ಷಿಗಳ ತಪೋ ಶಕ್ತಿಗೆ ಶಿವನೇ ಪ್ರತ್ಯಕ್ಷನಾಗಿ ಗಂಗೆಯನ್ನು ಧರೆಗೆ ಇಳಿಸಿದರು ಎಂಬ ಸತ್ಯ ಘಟನೆಯನ್ನು ನಾವೆಲ್ಲರೂ ಅರಿತುಕೊಳ್ಳಬೇಕು. ಇಂತಹ ಮಹರ್ಷಿಗಳ ಜಯಂತಿ ಆಚರಿಸೋಣ ಎಂದರು. ಉಪ್ಪಾರ ಮಹಾಸಭಾ ಅಧ್ಯಕ್ಷ ಕಾವೇರಿಪುರ ಮಹದೇವಶೆಟ್ಟಿ ಮಾತನಾಡಿ, ಭಗೀರಥರ ನಿಷ್ಠೆ, ದೃಢ ವಿಶ್ವಾಸ, ಛಲ ಹಾಗೂ ಸತತ ಪ್ರಯತ್ನದ ಗುಣವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಎಲ್ಲರ ಜೀವನದಲ್ಲಿ ಪ್ರಯತ್ನ ಎಂಬುದು ನಿರಂತರವಾಗಿರಬೇಕು ಎಂದರು.

ಭಗೀರಥ ಮಹರ್ಷಿಗಳು ತಮ್ಮ ತಪಸ್ಸು ಹಾಗೂ ಸತತ ಪ್ರಯತ್ನಗಳ ಮೂಲಕ ಗಂಗೆಯನ್ನು ಭೂ ಲೋಕಕ್ಕೆ ಕರೆತಂದು ಇಡೀ ಭರತ ಖಂಡವನ್ನು ಪವಿತ್ರ ಭೂಮಿಯನ್ನಾಗಿ ಮಾಡಿದ್ದಾರೆ. ಆ ಮೂಲಕ ಅಂದಿನ ಕೃಷಿಕ ಸಮಾಜದ ಉದ್ಧಾರಕ್ಕೆ ಕಾರಣಕರ್ತರಾಗಿದ್ದಾರೆ ಎಂದು ಪ್ರಸಿದ್ಧ ಪುರಾಣಗಳಿಂದ ತಿಳಿಯಬಹುದು ಎಂದರು.

ಈ ವೇಳೆ ಭಗೀರಥ ಉಪ್ಪಾರ ಜನ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಪ್ಪ, ಕಾರ್ಯದರ್ಶಿ ಶಾಂತರಾಜು, ಶಿವಣ್ಣ, ರಾಜು, ಇಂಡವಾಳು ಹೊನ್ನಯ್ಯ ಇತರರಿದ್ದರು.

ಗಿರಿಜನರಿಗೆ ಮೂಲಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಿ

ಇಲ್ಲದಿದ್ದರೆ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು: ಲೋಕಾಯುಕ್ತ ಎಸ್ಪಿ ಎಚ್ಚರಿಕೆ



ಲೋಕಾಯುಕ್ತ ಎಸ್ಪಿ ಸಜಿತ್ ಆದಿವಾಸಿಗಳ ಸಮಸ್ಯೆ ಆಲಿಸಿದರು.

ಹೆಚ್.ಡಿ.ಕೋಟೆ, ಮೇ 16– ಗಿರಿಜನರಿಗೆ ಸಿಗಬೇಕಾದ ಸೌಲಭ್ಯಗಳನ್ನು ನೀಡಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದು ಮೈಸೂರು ಲೋಕಾಯುಕ್ತ ಎಸ್ಪಿ ಅಜಿತ್ ಎಚ್ಚರಿಕೆ ನೀಡಿದರು.

ತಾಲೂಕಿನ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಬಾವಲಿ ಹಾಡಿಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಗಿರಿಜನರ ಸಮಸ್ಯೆ ಆಲಿಸಿ ಮಾತನಾಡಿದರು. ಅರಣ್ಯ ಇಲಾಖೆ ಅಧಿಕಾರಿಗಳು ಸರ್ಕಾರದಿಂದ ಮಂಜೂರಾದ ಮನೆ ನಿರ್ಮಾಣ ಮಾಡಲು ತೊಂದರೆ ನೀಡುತ್ತಿದ್ದಾರೆ. ಕುಡಿಯುವ ನೀರು, ರಸ್ತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಎಸ್ಪಿ ಸಜಿತ್, ಅಧಿಕಾರಿಗಳು ಗಿರಿಜನರಿಗೆ ಮೂಲ ಸೌಕರ್ಯ ಕಲ್ಪಿಸಬೇಕು. ಮನೆ ನಿರ್ಮಾಣಕ್ಕೆ ಯಾವುದೇ ತೊಂದರೆ ನೀಡದಂತೆ ತಾಕೀತು ಮಾಡಿದರು. ಅಲ್ಲದೇ ಮನೆ ಕಟ್ಟಲು ಸರ್ಕಾರದ ಹಣ ಬಿಡುಗಡೆಯಾಗಿದ್ದರೂ ಮನೆ ಕಟ್ಟಲು ಅವಕಾಶ ನೀಡದ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ವಹಿಸುವುದಾಗಿ ಎಚ್ಚರಿಸಿದರು.

ಹಾಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಯಲು ವಿಫಲವಾಗಿರುವ ಅಬಕಾರಿ ಇಲಾಖೆ ಅಧಿಕಾರಿಗಳ ಮೇಲಿನ ಕ್ರಮಕ್ಕೆ ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡುವುದಾಗಿ ತಿಳಿಸಿದರು. ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಹಾಡಿ ಜನರಿಗೆ ವಾಸ ದೃಢೀಕರಣ ಪತ್ರ, ಪಡಿತರ ಚೀಟಿ, ಆಧಾರ್ ಕಾರ್ಡ್, ಆದಾಯ ಮತ್ತು ಜಾತಿ ದೃಢೀಕರಣ ಪತ್ರ ನೀಡಲು ಕ್ರಮ ವಹಿಸುವಂತೆ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗೆ ಸೂಚಿಸಿದರು. ಇದೇ ವೇಳೆ ಜನಸಂಗ್ರಾಮ ಸಮಿತಿ ಸದಸ್ಯ ಪ್ರಸನ್ನ ಸೇರಿದಂತೆ ಇನ್ನಿತರರಿದ್ದರು.

ಹೆಚ್.ಡಿ. ದೇವೇಗೌಡರ ಭೇಟಿಯಾದ ಮಾಜಿ ಶಾಸಕರು



ಬೆಂಗಳೂರಿನ ಪದ್ಮನಾಭ ನಗರದ ನಿವಾಸದಲ್ಲಿ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರನ್ನು ಮಾಜಿ ಶಾಸಕರಾದ ಎಂ.ಅಶ್ವಿನ್ ಕುಮಾರ್, ಕೆ.ಮಹದೇವ್, ಮುಖಂಡರಾದ ಪುಟ್ಟಸ್ವಾಮಿ, ಮೈಸೂರು ಗ್ರಾಮಾಂತರ ಜೆಡಿಎಸ್ ಅಧ್ಯಕ್ಷ ನರಸಿಂಹಸ್ವಾಮಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಎಸ್.ದಿಗಂತ್‌ಗೆ ಶೇ.82ರಷ್ಟು ಅಂಕ



ಹುಣಸೂರು, ಮೇ 16– ನಗರದ ಶಾಸ್ತ್ರಿ ಶಾಲೆ ವಿದ್ಯಾರ್ಥಿ ಎಸ್.ದಿಗಂತ್ ಎಸ್‌ಎಸ್‌ಎಲ್‌ಸಿ(ಸಿಬಿಎಸ್‌ಇ) ಪರೀಕ್ಷೆಯಲ್ಲಿ ಶೇ.82ರಷ್ಟು ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ. ಈತ ಸತ್ಯ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮತ್ತು ಹೀರ ದಂಪತಿ ಪುತ್ರ.

ಹಲ್ಲರೆ ಪ್ರಕರಣದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ದಲಿತ ಸಂಘಟನೆಗಳ ಒಕ್ಕೂಟ ಒತ್ತಾಯ



ನಂಜನಗೂಡು, ಮೇ 16– ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕ ಅಳವಡಿಸುವ ವಿಚಾರದಲ್ಲಿ ಎರಡು ಕೋಮುಗಳ ನಡುವೆ ಘರ್ಷಣೆಗೆ ಕಾರಣರಾದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಂಡಿಲ್ಲ. ಹಾನಿಗೊಳಗಾದ ಮನೆಗಳಿಗೆ ಸೂಕ್ತ ಪರಿಹಾರ ನೀಡಿಲ್ಲ ಎಂದು ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ ಕಾರ್ಯ ಬಸವಣ್ಣ, ತಾಲೂಕು ಮತ್ತು ಜಿಲ್ಲಾಡಳಿತ ದಲಿತರನ್ನು ಕಡೆಗಣಿಸಿದೆ. ಅಂಬೇಡ್ಕರ್ ನಾಮಫಲಕ ಅಳವಡಿಸುವ ವಿಚಾರದಲ್ಲಿ ನಡೆದ ಗಲಾಟೆ ಸಂಬಂಧ ಎಷ್ಟೇ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದರೂ, ಅಂತಹವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೆವು. ಘಟನೆ ನಡೆದು 5 ತಿಂಗಳು ಕಳೆದರೂ ತಾಲೂಕು ಆಡಳಿತ ಯಾವುದೇ ಕ್ರಮ ಕೈಗೊಳ್ಳದಿರುವುದು ಜಿಲ್ಲಾ ಮತ್ತು ತಾಲೂಕು ಆಡಳಿತದ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಈ ವಿಚಾರವಾಗಿ ಇನ್ನೊಂದು ವಾರದೊಳಗೆ ಕ್ರಮ ಕೈಗೊಳ್ಳದಿದ್ದಲ್ಲಿ ಚಳವಳಿ ರೂಪಿಸಬೇಕಾಗುತ್ತದೆ ಎಂದರು.

ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ವಿಜಯ್ ಕುಮಾರ್ ಮಾತನಾಡಿ, ನಂಜನಗೂಡು ಮೀಸಲು ಕ್ಷೇತ್ರವಾಗಿದ್ದು, ಇಲ್ಲಿ ಸಂಸದರು, ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲರೂ ದಲಿತರಾದರೂ ಈ ವಿಷಯವಾಗಿ ಯಾರು ಇದುವರೆಗೂ ಮಾತನಾಡಿಲ್ಲ. ಪ್ರಕರಣದಲ್ಲಿ ನಾನು ಭಾಗಿಯಾಗಿಲ್ಲದಿದ್ದರೂ ನನ್ನ ಮೇಲೆ ಕೇಸ್ ದಾಖಲು ಮಾಡಿದ್ದಾರೆ. ಪೊಲೀಸರಿಗೆ ಸೆಕ್ಷನ್‌ಗಳ ಬಗ್ಗೆ ಅರಿವು ಇಲ್ಲ. ಶ್ರೀಕಂಠೇಶ್ವರ ದೇವಾಲಯದ ವತಿಯಿಂದ ನಡೆದ ಅಂದಕಾಸುರನ ವಧೆ ಪ್ರಕರಣದಲ್ಲಿ ಯಾವುದೇ ರಾಜಕಾರಣಿ ಧ್ವನಿ ಎತ್ತುತ್ತಿಲ್ಲ. ದೇವರ ಉತ್ಸವ ಮೂರ್ತಿ ಮೇಲೆ ಎಂಜಲು ನೀರನ್ನು ಎರಚಿದ್ದಾರೆ ಎಂದು ಸುಳ್ಳು ಕೇಸ್ ದಾಖಲಿಸಿದ್ದಾರೆ. ರಾಜಕಾರಣಿಗಳು ವೋಟ್ ಬ್ಯಾಂಕ್ ರಾಜಕೀಯ ಮಾಡುತ್ತಿದ್ದಾರೆ. ಈ ವಿಚಾರಗಳ ಪರವಾಗಿ ಸರಿಯಾದ ನಿರ್ಧಾರ ಕೈಗೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಉಪಾಧ್ಯಕ್ಷ ಪುಟ್ಟಸ್ವಾಮಿ, ಜಯಶಂಕರ್, ಕುಮಾರ್, ಜಯರಾಮ್ ಉಪಸ್ಥಿತರಿದ್ದರು.

ಅರಿಯೂರಿನಲ್ಲಿ ಅರಳಿ ಮರ ಬಿದ್ದು ಮನೆ ಜಖಂ



ಮಲ್ಲುಂಡಿ, ಮೇ 16– ಬೃಹತ್ ಗಾತ್ರದ ಅರಳಿ ಮರ ಬಿದ್ದ ಪರಿಣಾಮ ಮನೆ ಸಂಪೂರ್ಣ ಜಖಂಗೊಂಡಿರುವ ಘಟನೆ ಸಮೀಪದ ಅರಿಯೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ತಿರುಪತಿ ವೆಂಕಟಬೋವಿ ಅವರಿಗೆ ಸೇರಿದ ಮನೆ ಜಖಂಗೊಂಡಿದೆ. ಮಂಗಳವಾರ ರಾತ್ರಿ ಭಾರಿ ಮಳೆ ಸುರಿದ್ದು, ಬುಧವಾರ ಮುಂಜಾನೆ ವೆಂಕಟಬೋವಿ ಅವರ ಮನೆ ಹಿಂಭಾಗವಿದ್ದ ಬೃಹತ್ ಅರಳಿ ಮರ ಮನೆ ಮೇಲೆ ಬಿದ್ದಿದೆ. ಈ ವೇಳೆ ಮನೆಯಲ್ಲಿದ್ದ ವೆಂಕಟಬೋವಿ, ಆತನ ಪತ್ನಿ, ಮೊಮ್ಮಗಳು ಪದ್ಮ ಸೇರಿದಂತೆ ಇಬ್ಬರು ಪುಟ್ಟ ಮಕ್ಕಳು ಪ್ರಾಣಾ ಪಾಯದಿಂದ ಪಾರಾಗಿದ್ದಾರೆ. ಈ ವೇಳೆ ಮನೆಯಲ್ಲಿದ್ದ ವಸ್ತುಗಳು ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸ್ಥಳೀಯ ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್ ಹಾಗೂ ಪಿಡಿಓ ಪರಿಶೀಲನೆ ನಡೆಸಿ ಗ್ರಾಪಂ ವತಿಯಿಂದ 10 ಸಾವಿರ ರೂ.ಗಳ ಚೆಕ್ ವಿತರಿಸಿದರು.


ಈ ವೇಳೆ ಕಾಂಗ್ರೆಸ್ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ ಫುಡ್ ಕಿಟ್, ಗ್ಯಾಸ್ ಸಿಲಿಂಡರ್ ವಿತರಿಸಿದರು. ನಂತರ ಮಾತನಾಡಿದ ಅವರು, ವೆಂಕಟಬೋವಿ ಅವರ ಮನೆ ಸಂಪೂರ್ಣ ನಾಶವಾಗಿದೆ. ಶಾಸಕ ದರ್ಶನ್ ಧ್ರುವನಾರಾಯಣ್ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕೊಡಿಸಲು ಮುಂದಾಗಬೇಕು ಎಂದರು. ಈ ವೇಳೆ ಗ್ರಾಪಂ ಕಾರ್ಯದರ್ಶಿ ನಂಜುಂಡಯ್ಯ ಇದ್ದರು.

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕೈಲಾಸ ಶಿವಗಣಾರಾಧನೆ



ಪ್ರೊ. ಎಂ.ಮಾದಯ್ಯ

ವಿಶ್ರಾಂತ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಜನನ: 24–04–1936 ಲಿಂಗೈಕ್ಯ: 05–05–2024

ದಿನಾಂಕ: 05-05-2024 ರಂದು ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 17-05-2024 ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ ಕೈಲಾಸ ಶಿವಗಣಾರಾಧನೆಯನ್ನು ಸ್ವಗೃಹ ಮಹಾಮೇರು, ನಂ.706, 17ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು–09 ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಭೋಜನ: ಮಧ್ಯಾಹ್ನ 12.30ಕ್ಕೆ

ದುಃಖತಪ್ತರು: ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧುಮಿತ್ರರು